ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 15 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 89 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿ.ಸರೋಜಾ ದೇವಿ ವಿಧಿವಶ

ಇಂದು ಚನ್ನಪಟ್ಟಣ ತಾಲೂಕು ದಶಾವರದ ತೋಟದಲ್ಲಿ ಅಂತ್ಯಕ್ರಿಯೆ



ಬಿ.ಸರೋಜಾದೇವಿ

ಅಣ್ಣಾವ್ರ ಹಾದಿಯಲ್ಲೇ ಸರೋಜಾದೇವಿ ನೇತ್ರದಾನ

ಬೆಂಗಳೂರು: ಅಭಿನಯ ಸರಸ್ವತಿ ಎಂದೇ ಖ್ಯಾತಿ ಪಡೆದಿದ್ದ ಕನ್ನಡ ಚಿತ್ರ ರಂಗದ ಹಿರಿಯ ನಟಿ ಬಿ.ಸರೋಜಾ ದೇವಿ, ಸಾವಿನಲ್ಲೂ ಸಾರ್ಥಕತೆ ಮೆರೆದಿ ದ್ದಾರೆ. ಮನುಷ್ಯನ ಪಂಚೇಂದ್ರಿಯ ಗಳಲ್ಲಿ ಕಣ್ಣು ಪ್ರಮುಖವಾದದ್ದು. ಕಣ್ಣು ದಾನ ಮಾಡುವ ಮೂಲಕ ಬೇರೊಬ್ಬ ರಿಗೆ ದೃಷ್ಟಿ ನೀಡಿ ಬಾಳು ಬೆಳಗಬೇಕು ಎನ್ನುವಂತೆ ಸರೋಜಾದೇವಿ ಅವರು ನೇತ್ರದಾನ ಮಾಡಿದ್ದಾರೆ. ಬೆಂಗಳೂರಿನ ನಾರಾಯಣ ನೇತ್ರಾಲಯಕ್ಕೆ ನೇತ್ರದಾನ ಮಾಡಿದ್ದರು. ಇಂದು ಸರೋಜಾದೇವಿ ಅವರ ಕಣ್ಣುಗಳನ್ನು ಪಡೆಯಲಾಯಿತು.

ಬೆಂಗಳೂರು: ಕನ್ನಡದ ಹಿರಿಯ ನಟಿ ಬಿ.ಸರೋಜಾದೇವಿ (87) ಸೋಮವಾರ(ಜು.14) ವಿಧಿವಶರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಮಲ್ಲೇಶ್ವರಂ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ. ನಾಳೆ (ಮಂಗಳವಾರ) ಇವರ ಅಂತ್ಯಕ್ರಿಯೆ ಸ್ವಗ್ರಾಮ, ಚನ್ನಪಟ್ಟಣ ತಾಲೂಕಿನ ದಶಾವರದ ಅವರ ತೋಟದಲ್ಲಿ ನೆರವೇರಲಿದೆ.

1938 ಜನವರಿ 7 ರಂದು ಜನಿಸಿದ ಅವರು ಕನ್ನಡ, ತಮಿಳು, ತೆಲುಗು, ಹಿಂದಿ ಸೇರಿದಂತೆ ಪಂಚ ಭಾಷೆಯ ಚಿತ್ರರಂಗದಲ್ಲಿ 200ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದರು. ಅಭಿನಯ ಸರಸ್ವತಿ ಎಂದೇ ಖ್ಯಾತಿ ಪಡೆದಿದ್ದ ಅವರು 6 ದಶಕಗಳಿಂದ ಕನ್ನಡ ಸೇರಿದಂತೆ ವಿವಿಧ ಭಾಷೆಯ 200ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದರು.

ಕನ್ನಡ ಚಿತ್ರರಂಗದಲ್ಲಿ ಸರೋಜಾ: 'ಮಹಾಕವಿ ಕಾಳಿದಾಸ' (1955) ಸಿನಿಮಾದ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ಅವರು, ರಾಜ್‌ಕುಮಾರ್, ಕಲ್ಯಾಣ್‌ಕುಮಾರ್ ಮುಂತಾದ ದಿಗ್ಗಜರೊಂದಿಗೆ ತೆರೆ ಹಂಚಿಕೊಂಡಿದ್ದರು.

ಕನ್ನಡದ 'ಕಿತ್ತೂರು ಚೆನ್ನಮ್ಮ', 'ಅಣ್ಣಾ ತಮ್ಮ', 'ಭಕ್ತ ಕನಕದಾಸ', 'ಬಾಳೇ ಬಂಗಾರ', 'ನಾಗಕನ್ಯೆ', 'ಬೆಟ್ಟದ ಹೂವು', 'ಕಸ್ತೂರಿ ನಿವಾಸ', 'ಬಬ್ರುವಾಹನ', 'ಕಥಾಸಂಗಮ', 'ಅಮರ ಶಿಲ್ಪಿ ಜಕಣಾಚಾರಿ', 'ಮಲ್ಲಮ್ಮನ ಪವಾಡ', 'ಅಗ್ನಿ ಐ.ಪಿ.ಎಸ್' ಸೇರಿದಂತೆ ಹಲವು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದರು.

ಇತರೆ ಭಾಷೆಯಲ್ಲಿ ನಟನೆ: 'ನಾಡೋಡಿ ಮನ್ನನ್', 'ಕರ್ಪೂರ ಕರಸಿ', 'ತಿರುಮಣಂ', 'ಪಾಟ್ಟಾಲಿ ಮುತ್ತು', 'ಪಡಿಕಥ ಮೇಥೈ', 'ಕಲ್ಯಾಣ ಪರಿಸು', ಮುಂತಾದ ತಮಿಳು ಚಿತ್ರಗಳ ಲ್ಲಿಯೂ ಅಭಿನಯಿಸಿದ್ದರು. ಅಲ್ಲದೇ 'ಪಾಂಡುರಂಗ ಮಹಾತ್ಯಂ', 'ಭೂಕೈಲಾಸ್', 'ಪೆಲ್ಲಿ ಸಂದಡಿ', 'ಪಂಡರಿ ಭಕ್ತಲು', 'ದಕ್ಷಯಜ್ಞಂ' ಮುಂತಾದ ತೆಲುಗು ಸಿನಿಮಾಗಳಲ್ಲಿ ನಟಿಸಿದ್ದರು.


ದಿಲೀಪ್ ಕುಮಾರ್ ಅವರ 'ಪೈಗಮ್', 'ಆಶಾ', 'ಮೆಹಂದಿ ಲಗಾ ಕೆ ರಖನಾ' ಮುಂತಾದ ಹಿಂದಿ ಚಿತ್ರದಲ್ಲಿ ಸರೋಜಾದೇವಿ ನಟಿಸಿದ್ದರು. ಇತ್ತೀಚೆಗಿನ ವರ್ಷದಲ್ಲಿ ಕೊನೆಯದಾಗಿ ಅವರು 2019ರಲ್ಲಿ ಬಂದ ಪುನೀತ್ ರಾಜ್‌ಕುಮಾರ್ ಅವರ 'ನಟ ಸಾರ್ವಭೌಮ'ದಲ್ಲಿ ನಟಿಸಿದ್ದರು.

ಪ್ರಶಸ್ತಿಗಳು: ಚಿತ್ರರಂಗದಲ್ಲಿನ ಅಪಾರ ಸೇವೆಗೆ ಅವರಿಗೆ ಹತ್ತಾರು ಪ್ರಶಸ್ತಿಗಳು ಸಂದಿವೆ. 1969ರಲ್ಲಿ ಪದ್ಮಶ್ರೀ ಪ್ರಶಸ್ತಿ ಮತ್ತು 1992ರಲ್ಲಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಮತ್ತು ತಮಿಳುನಾಡಿನಿಂದ ಕಲೈಮಾಮಣಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

ಕಂಬನಿ ಮಿಡಿದ ಸ್ಯಾಂಡಲ್‌ವುಡ್ ನಟ– ನಟಿಯರು: ಅಗಲಿದ ಖ್ಯಾತ ಸಿನಿಮಾ ನಟಿ ಸರೋಜಾದೇವಿಯವರ ಅಗಲಿಕೆಗೆ ಸ್ಯಾಂಡಲ್‌ವುಡ್ ನಟ–ನಟಿಯರು ಸೇರಿದಂತೆ ಅಭಿಮಾನಿಗಳು ಕಂಬನಿ ಮಿಡಿದಿದ್ದಾರೆ.

■6ನೇ ಪುಟಕ್ಕೆ

'ಸಿಗಂಧೂರು ಚೌಡೇಶ್ವರಿ ದೇವಿ ಸೇತುವೆ' ಲೋಕಾರ್ಪಣೆ



ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ನಡುವೆ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಿರುವ ಭಾರತದ 2ನೇ ಅತೀ ಉದ್ದದ ಕೇಬಲ್–ಸ್ಟೇಡ್ ಸೇತುವೆಯನ್ನು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೋಮವಾರ ಲೋಕಾರ್ಪಣೆ ಮಾಡಿದರು. 472 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಈ ಸೇತುವೆ 2.44 ಕಿ.ಮೀ ಉದ್ದವಿದ್ದು, 16 ಮೀಟರ್ ಅಗಲವಿದೆ. /ಪೂರ್ಣ ವರದಿ ಪುಟ–9

ಕಂಡಕ್ಟರ್ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ


ಮಹಿಳೆಗೆ 500ನೇ ಕೋಟಿ ಟಿಕೆಟ್



ಶಕ್ತಿ ಯೋಜನೆಯಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಬೆಂಗಳೂರಲ್ಲಿ 500ನೇ ಕೋಟಿ ಉಚಿತ ಪ್ರಯಾಣ ಟಿಕೆಟ್ ಅನ್ನು ಮಹಿಳೆಯೊಬ್ಬರಿಗೆ ವಿತರಿಸುವ ಮೂಲಕ ಸಂಭ್ರಮಿಸಿದರು.

ಬೆಂಗಳೂರು: ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಶಕ್ತಿ ಯೋಜನೆಯಡಿ 500 ಕೋಟಿ ಮಹಿಳೆಯರು ಪ್ರಯಾಣಿಸಿದ ಸಂಭ್ರಮದ ಅಂಗವಾಗಿ ಸಾಂಕೇತಿಕವಾಗಿ 500ನೇ ಕೋಟಿಯ ಟಿಕೆಟ್ ಅನ್ನು ವಿತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳೆ ಲತಾ ಅವರಿಗೆ ಸನ್ಮಾನಿಸಿದರು. ಈ ವೇಳೆ ಬಸ್‌ನಲ್ಲಿದ್ದ ಮಹಿಳೆಯರಿಗೆ ಇಳಕಲ್ ಸೀರೆ, ಸಿಹಿ ವಿತರಣೆ ಮಾಡಲಾಯಿತು. ಇದೇ ವೇಳೆ ಶಕ್ತಿ ಯೋಜನೆಯ ಫಲಾನುಭವಿಯೊಬ್ಬರು ಮುಖ್ಯಮಂತ್ರಿ ಮತ್ತು ಸಚಿವರಿಗೆ ಖಡಕ್ ರೊಟ್ಟಿ, ಶೇಂಗಾ ಹೋಳಿಗೆ ನೀಡಿ ಹಾರೈಸಿದರು. ಟಿಕೆಟ್ ವಿತರಿಸಿದ ನಂತರ ಮಾತನಾಡಿದ ಅವರು, ನಾಡಿನ ■6ನೇ ಪುಟಕ್ಕೆ

ಕೆಬಿಜಿ ಅವರ ನಿಧನಕ್ಕೆ ಗಣ್ಯರ ಕಂಬನಿ



'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರ ನಿಧನ ಸುದ್ದಿ ರಾಜ್ಯಕ್ಕೆ, ದೇಶಕ್ಕೆ ತುಂಬಲಾರದ ನಷ್ಟ ಎಂದು ಮೈಸೂರು ಉಪವಿಭಾಗದ ಪ್ರಜಾಪಿತ ಈಶ್ವರೀಯ ವಿವಿಧ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ, ಈಶ್ವರಿ ವಿವಿ ಪ್ರಾಂಶುಪಾಲ ರಂಗನಾಥ್, ಚಾಮರಾಜನಗರದ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ, ಓಂ ಶಾಂತಿ ನ್ಯೂಸ್ ಸರ್ವಿಸ್‌ನ ಬಿ.ಕೆ.ಆರಾಧ್ಯ ಅವರು ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿ ಸಾಗರ ಪರಮ ಪಿತ ಪರಮಾತ್ಮ ಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ.

ಹೃದಯವಂತಿಕೆ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರು ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯಾಲಯದ ಮೌಂಟ್ ಅಬುವಿನಲ್ಲಿ ಒಮ್ಮೆ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರನ್ನು ಯಾವಾಗ ಭೇಟಿ ಮಾಡಿದರೂ ಈಶ್ವರೀಯ ಸೇವಾ ಕಾರ್ಯಕ್ರಮದ ಬಗ್ಗೆ ವಿಚಾರಿಸುತ್ತಿದ್ದರು. ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಕಾರ್ಯಕ್ರಮಗಳ ಪ್ರಕಟಿಸಿ ಆಧ್ಯಾತ್ಮ ಕ್ಷೇತ್ರದ ಬಗ್ಗೆ ಒಲವು ಹೊಂದಿದ್ದರು. ಇಂತಹ ಸರಳ, ಸಜ್ಜನ ಹಿರಿಯ ಪತ್ರಕರ್ತರಾದ ಪ್ರೀತಿಯ ಕೆಬಿಜಿ ಅವರ ನಿಧನ ನಾಡಿಗೆ, ದೇಶಕ್ಕೆ ತುಂಬಲಾರದ ನಷ್ಟ, ಅವರ ನಿಧನಕ್ಕೆ ಪರಮಾತ್ಮ ಶಾಂತಿ ನೀಡಲಿ ಎಂದು ಸಂತಾಪ ಸೂಚಿಸಿದ್ದಾರೆ.



ಕೆಬಿಜಿ ಅವರೊಂದಿಗೆ ನನ್ನದು ಬಹಳ ವರ್ಷಗಳ ಒಡನಾಟ. ಇಬ್ಬರದು ಹೋಗು-ಬಾ ಎನ್ನುವ ಬಾಂಧವ್ಯ. ಬಹಳ ಗಂಭೀರ ಹಾಗೂ ಹಸನ್ಮುಖಿ ವ್ಯಕ್ತಿತ್ವ. ಯಾವುದೇ ವಿಚಾರವನ್ನು ಅರಿತು ಮಾತನಾಡುತ್ತಿದ್ದರು. ಅವರನ್ನು ಕಳೆದುಕೊಂಡಿರುವುದು ಮೈಸೂರಿಗೆ ನಷ್ಟ, ವೈಯಕ್ತಿಕವಾಗಿ ಒಳ್ಳೆಯ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ.

-ಆರ್.ಗುರು, ಖ್ಯಾತ ಹಿರಿಯ ಉದ್ಯಮಿ

ನಮ್ಮ ತಂದೆಯವರಿಗೆ ಕೆಬಿಜಿಯವರು ಅತ್ಯಂತ ಆತ್ಮೀಯರು. 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಮೂಲಕ ಮೈಸೂರಿಗೆ ವಿಶೇಷವಾದ ಕೊಡುಗೆ ಕೊಟ್ಟಿದ್ದಾರೆ. ಚಿಕ್ಕ ವಯಸ್ಸಿನಿಂದಲೂ 'ಸ್ಟಾರ್ ಆಫ್ ಮೈಸೂರ್' ಓದಿಯೇ ಬಹಳಷ್ಟು ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದೆವು. 'ಅಬ್ರಕಡಬ್ರಾ' ಅಂಕಣದ ಮೂಲಕ ಹೊಸ ವಿಷಯಗಳನ್ನು ತಿಳಿಸುತ್ತಿದ್ದರು. ಅವರು ನಮ್ಮ ನಡುವೆ ಇನ್ನಿಲ್ಲದಿರುವುದು ಮೈಸೂರಿಗೆ ದೊಡ್ಡ ನಷ್ಟ. ಅವರ ಪುತ್ರರು ಅವರ ಸ್ಥಾನವನ್ನು ತುಂಬುತ್ತಾರೆ ಅಂದುಕೊಂಡಿದ್ದೇನೆ. ಆದರೂ ಕೆಬಿಜಿಯವರು ಕೆಬಿಜಿಯವರೇ.

-ನವೀನ್‌ಕುಮಾರ್, ಕಾಂಗ್ರೆಸ್ ಮುಖಂಡ



ನಾನು ಚಾಮುಂಡಿಬೆಟ್ಟದ ಧರ್ಮದರ್ಶಿ ಆಗಿದ್ದಾಗ ಬೆಟ್ಟದ ಅಭಿವೃದ್ಧಿ ಬಗ್ಗೆ ಬರೆದಿದ್ದ ಲೇಖನವನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನಲ್ಲಿ ಮುಖಪುಟದಲ್ಲಿ ಪ್ರಕಟಣೆ ಮಾಡಿದ್ದರು. ಸಿಕ್ಕಾಗಲೆಲ್ಲ ಬರೆಯುವಂತೆ ಪ್ರೋತ್ಸಾಹ ನೀಡುತ್ತಿದ್ದರು. ಪತ್ರಿಕಾ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿರುವ ಕೆಬಿಜಿ ಅವರು ಮೈಸೂರಿನ ಖುಷ್ವಂತ್ ಸಿಂಗ್. **-ರಘುರಾಂ ವಾಜಪೇಯಿ, ಹಿರಿಯ ಸಮಾಜ ಸೇವಕರು**

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ ನಿಧನದ ಸುದ್ದಿ ನಿಜಕ್ಕೂ ಪತ್ರಿಕೋದ್ಯಮದಲ್ಲಿ ತುಂಬಲಾರದ ನಷ್ಟ, ಕೆಬಿಜಿ ಅವರು, ದೇಶದ ವಿಚಾರ, ಮೈಸೂರಿನ ಅಭಿವೃದ್ಧಿ ವಿಚಾರದಲ್ಲಿ ತಮ್ಮ ಪತ್ರಿಕೆಯ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ವಿಚಾರ ಮಂಡಿಸುತ್ತಿದ್ದರು. ತಮ್ಮ ಛೂಮಂತ್ರ, ಅಬ್ರಕಡಬ್ರ, 'hocus focus' ಲೇಖನಗಳ ಮೂಲಕ ಅನೇಕ ವಿಚಾರಗಳಲ್ಲಿ ತಮ್ಮ ನಿಲುವುಗಳನ್ನು ತಿಳಿಸುತ್ತಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಕೆಬಿಜಿ ಅವರ ಅಗಲಿಕೆಯ ನೋವಿನಲ್ಲಿರುವ ಅವರ ಕುಟುಂಬ, ಅಭಿಮಾನಿ ವರ್ಗಕ್ಕೆ ಮತ್ತು ಬಂಧುಗಳಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

-ಟೀಂ ಮೈಸೂರು ತಂಡ



ಕೆ.ಬಿ.ಗಣಪತಿಯವರು ನನಗೆ ತಂದೆ ಸಮಾನರಾಗಿ ಎಲ್ಲಾ ರೀತಿಯಲ್ಲೂ ಸಹಕಾರ ನೀಡಿದ್ದಾರೆ. ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ಪುತ್ರರು ಅವರಂತೆ ಸಮಾಜಮುಖಿಯಾಗಿದ್ದಾರೆ. ಕೆಬಿಜಿ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

-ವಿಕ್ರಾಂತ್ ಪಿ.ದೇವೇಗೌಡ, ಉಪಾಧ್ಯಕ್ಷ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ


ಕೆ.ಬಿ.ಗಣಪತಿ ಅವರೊಂದಿಗೆ 45-50 ವರ್ಷದ ಒಡನಾಟ. ಅವರ ಶ್ರೀಮತಿ ಮತ್ತು ನಾನು ಮಹಾರಾಜ ಜೂನಿಯರ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆವು. 1975ರ ಸುಮಾರಿನಲ್ಲಿ ಅವರು ಮೈಸೂರಿಗೆ ಬಂದಿದ್ದು. ಅಂದಿನಿಂದಲೂ ಅವರೊಂದಿಗೆ ಭಾವನಾತ್ಮಕ ಒಡನಾಟವಿದೆ. ಕೆಬಿಜಿ ಅವರಿಗೆ ಶ್ರೀ ಕೃಷ್ಣಗಾನ ಸಭಾದಿಂದ ಕಲಾ ಪೋಷಕ ರತ್ನ ಪ್ರಶಸ್ತಿ ನೀಡುವಾಗ ಅವರು ಹಳೆಯ ಶ್ರೀರಾಮ-ಸೀತೆಯ ಫೋಟೋ ನೀಡಿದ್ದರು. ಅದನ್ನು ಜೋಪಾನ ಮಾಡಿದ್ದೇವೆ. ನಾವುಗಳು ಯಾವಾಗಲೂ ಅವರೊಂದಿಗೆ ಪ್ರೀತಿ, ವಿಶ್ವಾಸದಿಂದ ಇದ್ದೆವು.

-ಶ್ರೀಧರ್‌ರಾಜೇ ಅರಸ್, ಅಧ್ಯಕ್ಷರು, ಶ್ರೀ ಕೃಷ್ಣಗಾನಸಭಾ



ಮೈಸೂರಿನಲ್ಲಿ ಉತ್ತಮವಾದ, ಒಳ್ಳೆಯ ಮನಸ್ಸು, ಮನುಷ್ಯತ್ವವುಳ್ಳ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಯಾರು ಏನೇ ಕೇಳಿದರೂ ಆಗಬಹುದು ಎನ್ನುತ್ತಿದ್ದ ಮೈಸೂರಿನ ಮಹಾನ್ ಚೇತನವನ್ನು ಕಳೆದುಕೊಂಡಿದ್ದೇವೆ. ದೊಡ್ಡ ವ್ಯಕ್ತಿ. ತುಂಬಾ ಸ್ನೇಹದಿಂದ ಕಾಣುತ್ತಿದ್ದರು. **-ಶಿವಕುಮಾರ್, ಮಹಾಲಕ್ಷ್ಮಿ ಸ್ವೀಟ್ಸ್, ಮಾಲೀಕರು.**

ಸಹನೆ, ತಾಳ್ಮೆ ಹಾಗೂ ಸಜ್ಜನಿಕೆಗೆ ಹೆಸರುವಾಸಿಯಾಗಿದ್ದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು ಹಾಗೂ ಹಿರಿಯ ಪತ್ರಕರ್ತರಾದ ಡಾ.ಕೆ.ಬಿ.ಗಣಪತಿ ಅಗಲಿಕೆ ಮೈಸೂರಿನ ಜನಮಾನಸದಲ್ಲಿ ಶೂನ್ಯ ಆವರಿಸಿದಂತೆ. ರಾಜಕೀಯ, ಆಧ್ಯಾತ್ಮ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ತಮ್ಮ ಪತ್ರಿಕೆ ಮೂಲಕ ನಾಡು-ನುಡಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಮೇಲಾಗಿ ತಮ್ಮ 50 ವರ್ಷದ ಪತ್ರಿಕೋದ್ಯಮದಲ್ಲಿ ಸದಾ ಒಂದಿಲ್ಲೊಂದು ವಿಷಯಗಳಲ್ಲಿ ಬರವಣಿಗೆ ಮೂಲಕ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳ ಕಿವಿ ಹಿಂಡಿ ಜನಸಾಮಾನ್ಯರ ನೋವಿಗೆ ದನಿಯಾಗಿದ್ದರು. ಅವರ ಅಗಲಿಕೆ ಮೈಸೂರಿಗರಲ್ಲಿ ಶೂನ್ಯ ಆವರಿಸಿದಂತೆ. ಅವರ ಅಗಲಿಕೆ ನೋವನ್ನು ಕುಟುಂಬವರ್ಗಕ್ಕೆ ಭರಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ. **-ರೊ.ಎ.ಪಿ.ವಿರೂಪಾಕ್ಷ, ಪ್ರಧಾನ ಕಾರ್ಯದರ್ಶಿ ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘ**



ಜಾತ್ಯಾತೀತವಾಗಿ, ಪಕ್ಷಾತೀತವಾಗಿ ಚಿಂತನೆ ನಡೆಸುತ್ತಿದ್ದ ವ್ಯಕ್ತಿತ್ವ ಡಾ.ಕೆ.ಬಿ.ಗಣಪತಿ ಅವರದ್ದು. ಯಾವಾಗಲೇ ಭೇಟಿಯಾದರೂ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅವರನ್ನು ಕಳೆದುಕೊಂಡು ಅನಾಥರಾಗಿದ್ದೇವೆ. 20 ವರ್ಷದಿಂದ ಅವರನ್ನು ನೋಡುತ್ತಾ ಬಂದಿದ್ದೇವೆ. ಅವರು ನಮ್ಮೊಂದಿಗೆ ಇಲ್ಲದಿರುವುದರಿಂದ ಅನಾಥ ಪ್ರಜ್ಞೆ ಕಾಡುತ್ತಿದೆ.

-ಲಕ್ಷ್ಮಿದೇವಿ, ಮುಡಾ ಮಾಜಿ ಸದಸ್ಯೆ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಹಿರಿಯ ಪತ್ರಕರ್ತ ಡಾ.ಕೆ.ಬಿ.ಗಣಪತಿ ಅವರು ತಮ್ಮ ಪ್ರತಿಕೆಗಳ ಮೂಲಕ ಜನತೆಯ ಧ್ವನಿಯಾಗಿದ್ದರು. ಮೈಸೂರು, ಕೊಡಗು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಪ್ರಸಾರವಿರುವ 'ಮೈಸೂರು ಮಿತ್ರ' ಪತ್ರಿಕೆ ಶೋಷಿತರ ಧ್ವನಿಯಾಗಿ, ಎಲ್ಲಾ ಜನಸಮುದಾಯಗಳ ಸಮಸ್ಯೆಗಳಿಗೆ ಸ್ಪಂದಿಸುವಂತೆ ನೋಡಿಕೊಳ್ಳುವಲ್ಲಿ ಕೆಬಿಜಿಯವರ ಕಳಕಳಿ ಅನನ್ಯ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರು ಹಾಗೂ ಬಂಧು ಬಳಗಕ್ಕೆ ಬುದ್ಧ, ಬಸವ, ಅಂಬೇಡ್ಕರ್ ನೀಡಲಿ.

-ಕೆ.ನಂಜಪ್ಪ ಬಸವನಗುಡಿ, ಮೈಸೂರು ಜಿಲ್ಲಾ ಸಫಾಯಿ ಕರ್ಮಚಾರಿ ವಿಚಕ್ಷಣಾ ಜಾಗೃತಿ ಸಮಿತಿ ಸದಸ್ಯರು.

ನಲ್ಲಿ ಕಾರ್ಮಿಕರ ಸಂಘದಿಂದ ಸಂತಾಪ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರು' ಸಂಸ್ಥಾಪಕ ಸಂಪಾದಕರಾದ ಕಲ್ಯಾಟಂಡ ಬೋಪಯ್ಯ ಗಣಪತಿ(ಕೆ.ಬಿ.ಗಣಪತಿ) ಅವರ ನಿಧನಕ್ಕೆ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ತೀವ್ರ ಸಂತಾಪ ಸೂಚಿಸಿದೆ. ಸಂಘದ ಯಾವುದೇ ಕಾರ್ಯಕ್ರಮ ಇರಲಿ ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ನಮ್ಮ ಸಂಘದ ಬೆಳವಣಿಗೆಗೆ ನೆರವಾಗಿದ್ದನ್ನು ಸದಾ ಸ್ಮರಿಸಿಕೊಳ್ಳುತ್ತೇವೆ ಎಂದು ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೆಬಿಜಿ ಅಗಲಿಕೆಗೆ ಆರ್ಚ್ ಬಿಷಪ್ ತೀವ್ರ ಸಂತಾಪ

ಮೈಸೂರು,ಜು.14(ಪಿಎಂ)-'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರ ನಿಧನಕ್ಕೆ ಮೈಸೂರು ಧರ್ಮ ಕ್ಷೇತ್ರದ ಆರ್ಚ್ ಬಿಷಪ್ ಹಾಗೂ ಅಪೋಸ್ಟೋಲಿಕ್ ಪೂಜ್ಯ ಡಾ.ಬರ್ನಾರ್ಡ್ ಮೊರಾಸ್ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.



ಬರ್ನಾರ್ಡ್ ಮೊರಾಸ್

ಕೆ.ಬಿ.ಗಣಪತಿ ಅವರೊಬ್ಬ ಖ್ಯಾತ ಪತ್ರಕರ್ತರು ಮಾತ್ರವಲ್ಲ ಸಾಹಿತ್ಯ ಲೋಕದ ದಿಗ್ಗಜರು. 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆಗಳ ಮೂಲಕ ಮಾಧ್ಯಮ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಜವಾಬ್ದಾರಿಯುತ ಪತ್ರಿಕೋದ್ಯಮದಲ್ಲಿ ಉನ್ನತ ಗುಣಮಟ್ಟವನ್ನು ಸ್ಥಾಪಿಸಿದೆ. ಅವರ ಬರಹ ಮತ್ತು ನಾಯಕತ್ವವು ಸಾಹಿತ್ಯ, ಸಮಾಜದಲ್ಲಿ ಅಳಿಸಲಾಗದ ಹೆಗ್ಗುರುತು ನಿರ್ಮಿಸಿದೆ. ಮೈಸೂರು ಧರ್ಮ ಕ್ಷೇತ್ರದ ಪರವಾಗಿ ಅವರ ಕುಟುಂಬ, ಬಂಧು ಮಿತ್ರರು ಹಾಗೂ ಪತ್ರಿಕೆಗಳ ಇಡೀ ತಂಡಕ್ಕೆ ನಾವು ನಮ್ಮ ಹೃತ್ಪೂರ್ವಕ ಸಂತಾಪ ವ್ಯಕ್ತಪಡಿಸುತ್ತೇವೆ. ಭಗವಂತನು ಕೆಬಿಜಿ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬ, ಬಂಧು ಬಳಗಕ್ಕೆ ಅವರ ಅಗಲಿಕೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಡಗು ಮಾಡೆಲ್ ಸ್ಕೂಲ್ ಮಕ್ಕಳಿಂದ ಕೆಬಿಜಿಯವರಿಗೆ ಶ್ರದ್ಧಾಂಜಲಿ



'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಪೋಷಕರಾಗಿದ್ದ ಕೊಡಗು ಮಾಡೆಲ್ ಶಾಲೆಯ ಮಕ್ಕಳು, ಅಗಲಿದ ಗಣಪತಿಯವರಿಗೆ ಸೋಮವಾರದಂದು ಶ್ರದ್ಧಾಂಜಲಿ ಸಲ್ಲಿಸಿದರು.

ನೈಪುಣ್ಯ ಶಾಲೆಯಲ್ಲಿ ಕೆಬಿಜಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಮೈಸೂರು,ಜು.14(ಬಿಎಲ್‌ಯು)-ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಆರ್.ರಘು ಅವರು, ಕೆಬಿಜಿ ಅವರ ಅಗಲಿಕೆಯಿಂದ ಮೈಸೂರಿನ ಸಾಂಸ್ಕೃತಿಕ, ಶೈಕ್ಷಣಿಕ ಮಾಧ್ಯಮ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ಬಹುದೊಡ್ಡ ನಷ್ಟವಾಗಿದೆ ಎಂದು ಅಭಿಪ್ರಾಯಪಟ್ಟರು.

ಡಾ.ಕೆ.ಬಿ.ಗಣಪತಿ ಅವರ ವ್ಯಕ್ತಿತ್ವ ಹಾಗೂ ಸುದೀರ್ಘ ಜೀವನ ಭವಿಷ್ಯತ್ತಿನ ಪೀಳಿಗೆಗೆ ಮಾದರಿಯಾಗಿದೆ. ಶಿಸ್ತು, ಸಂಯಮ, ಸಂಸ್ಕಾರ, ನಡವಳಿಕೆ, ಶಿಕ್ಷಣ ಕಾಳಜಿ ಬೆಳೆಸುವಲ್ಲಿ ಕೆಬಿಜಿ ಅವರ ಲೇಖನ ಮತ್ತು ಸಾಹಿತ್ಯ ಮಾದರಿಯಾಗಿದೆ ಎಂದರು.

ನೈಪುಣ್ಯ ಶಿಕ್ಷಣ ಸಂಸ್ಥೆಯ ಬೆಳವಣಿಗೆಯಲ್ಲಿ ಡಾ.ಕೆ.ಬಿ.ಗಣಪತಿ ಅವರು ನೀಡಿದ್ದ ಮಾರ್ಗದರ್ಶನ ಸದಾ ಸ್ಮರಿಸುತ್ತೇವೆ ಎಂದು ರಘು ತಿಳಿಸಿದರು. ಈ ಸಂದರ್ಭದಲ್ಲಿ ಶಾಲೆಯ ಕಾರ್ಯದರ್ಶಿ ಆರ್.ಕೌಟಿಲ್ಯ, ಪ್ರಾಂಶುಪಾಲರಾದ ಎಂ.ಎನ್.ಮಹೇಂದ್ರ, ಉಪ ಪ್ರಾಂಶುಪಾಲೆ ಶೀನಾ ಕೆ.ಗುರ್ನಾನಿ ಹಾಗೂ ಹಲವರು ಹಾಜರಿದ್ದರು.



ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೆ.ಬಿ.ಗಣಪತಿ, ಬಿ.ಸರೋಜಾದೇವಿಯವರಿಗೆ ಶ್ರದ್ಧಾಂಜಲಿ



'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ಕನ್ನಡ ಚಿತ್ರರಂಗದ ಹಿರಿಯ ಕಲಾವಿದೆ, ನಟಿ ಬಿ.ಸರೋಜಾದೇವಿ ಅವರ ನಿಧನಕ್ಕೆ ಪಡುವಾರಹಳ್ಳಿಯಲ್ಲಿ ಸಂತಾಪ ಸಲ್ಲಿಸಲಾಯಿತು. ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಎಸ್.ಕೃಷ್ಣಕುಮಾರ್, ಚುರುಮುರಿ ಚಾಮ ಮತ್ತಿತರರು ಉಪಸ್ಥಿತರಿದ್ದರು.


ಛಾಪು ಮೂಡಿಸಿದ.... ಕೆಬಿಜಿ



ಶ್ರೇಷ್ಠ ಬದುಕು ಕಟ್ಟಿಕೊಂಡು ಮತ್ತೊಬ್ಬರಿಗೂ ಅನ್ನದಾತರಾಗಿ ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ಥಂಭವೆಂದು ಹೇಳುವ ಪತ್ರಿಕೋದ್ಯಮದ ಭೀಷ್ಮರಾಗಿ ತಮ್ಮದೇ ಛಾಪು ಮೂಡಿಸಿದವರು ಡಾ. ಕೆ.ಬಿ.ಗಣಪತಿ ಅವರು. ವಿಶೇಷವಾಗಿ ಮೈಸೂರು ಜಿಲ್ಲೆಯಲ್ಲಿ ಪ್ರಥಮವಾಗಿ ಆಂಗ್ಲ ಭಾಷೆಯಲ್ಲಿ 'ಸ್ಟಾರ್ ಆಫ್ ಮೈಸೂರ್' ನಂತರ 'ಮೈಸೂರು ಮಿತ್ರ ಪತ್ರಿಕೆ'ಯನ್ನು ಆರಂಭಿಸಿ ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಪ್ರಮುಖ ಜಿಲ್ಲೆಗಳಲ್ಲಿ ಓದುಗರ ಮನೆ-ಮನಗಳಲ್ಲಿ ಶಾಶ್ವತ ಸ್ಥಾನ ಪಡೆದಿರುತ್ತಾರೆ ಎಂದರೆ ಅತಿಶಯೋಕ್ತಿಯಲ್ಲ. ಅಲ್ಲದೇ ಹೊಸ ಹೊಸ ಪತ್ರಕರ್ತರು, ಬರಹಗಾರರು, ಅಂಕಣಕಾರರಿಗೆ ನಿರಂತರ ಪ್ರೋತ್ಸಾಹ ನೀಡಿದುದು ಸ್ಮರಣೀಯ. ಪತ್ರಿಕೆಯ ಓದುಗರು ಬರೆದ ನಿಮ್ಮ ಪತ್ರಗಳು ಲೇಖನಗಳನ್ನು ಪ್ರಕಟಿಸುವ ಮೂಲಕ ಸಮಾಜಕ್ಕೆ ಕನ್ನಡಿ ಹಿಡಿದು ಅಂಕುಡೊಂಕುಗಳನ್ನು ತೋರುವ ಮೂಲಕ ಪತ್ರಿಕೆಯ ಓದುಗರ ಭಾವನೆಗಳನ್ನು ಗೌರವಿಸಿದ ಪತ್ರಿಕಾ ಶ್ರೇಷ್ಠ ಸಂಪಾದಕರಾದ ಡಾ.ಕೆ.ಬಿ.ಜಿ ಅವರಿಗೆ ನನ್ನ ಅಕ್ಷರ ನಮನಗಳು.

-ನಂ.ಶ್ರೀಕಂಠಕುಮಾರ್, ಮೈಸೂರು

ಕೆಬಿಜಿ ಎಂಬ ಅಜಾತಶತ್ರು



ಕೊಡಗಿಂದ ಪೊರಮಟ್ಟು
ಮೈಸೂರಿಗೆ ನೀ ಬಂದೆ
ಕಾವೇರಿಯ ವರಪುತ್ರ
ನೀ ನೆಟ್ಟ ಜನ ಸಂಪರ್ಕದ
'ಮೈಸೂರು ಮಿತ್ರ'ನೆಂಬ ಸಸಿ
ಬೆಳೆಯಿತು ಹೆಮ್ಮರವಾಗಿ
ಸಮುದಾಯ ಹಿತ ಸಾಧಿಸುವ
ಮಿತ್ರನಿಗೆ ಜೊತೆ ನೀಡಲು
ಬಂದಳು 'ಸ್ಟಾರ್ ಆಫ್ ಮೈಸೂರ್'
ಎಂಬ ಸೋದರಿ.

ನೀ ಹಿಡಿದ ಲೇಖನಿಗೆ ತುಂಬಿತು
ಸರ್ವ ಜನಾಂಗದ ಹಿತವೆಂಬ ಶಾಯಿ
ಪಸರಿಸಿತು ಜನ ಜಾಗೃತಿ ಅಕ್ಷರ ಜ್ಞಾನ
ಕುಂದಿಲ್ಲದೆ ಸಾಗಿತು ಜನಹಿತ
ನಾಡೆಲ್ಲ ಹರಿದಾಡಿತು ಪತ್ರಿಕೋದ್ಯಮದ
ನೂತನಾಲಂಕಾರದ ಮಾಧುರ್ಯ.

ನೀ ಹಚ್ಚಿದೆ ನಿರಭಿಮಾನದ
'ಮೈಸೂರು ಮಿತ್ರ'ನೆಂಬ ದೀಪ
ದಶದಿಕ್ಕುಗಳಲಿ ಬೆಳಗುತಲಿದೆ
ಅದರ ಹೊಂಗಿರಣ ದಿಗಂತ ಮೀರಿ
ಅನಾಥವಾಯಿತೆಂದು ಮಿತ್ರಬಳಗ
ಗಗನ ಕುಸುಮಾಲಂಕೃತನಾದೆ
ನೀ ಹಚ್ಚಿದ ಸೊಡರಿಗೆ
ಎಣ್ಣೆ ಹಾಕುವವರು ಯಾರೊ?
ನಿಷ್ಪಕ್ಷಪಾತ ಪತ್ರಿಕೋದ್ಯಮದ
ಮುಂಚೂಣಿಯಲಿ ನಿಲ್ಲುವ
ಸೇನಾನಿ ಯಾರೋ?

-ವಿ.ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿಯವರು ಮೈಸೂರಿಗೆ ಬಂದಾಗಿನಿಂದಲೂ ಅವರೊಂದಿಗೆ ಆತ್ಮೀಯ ಒಡನಾಟವಿತ್ತು. ಅದರಲ್ಲೂ ಅವರು 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಆರಂಭಿಸಿದಾಗ ಎಲ್ಲರಿಗೂ ಚಿರಪರಿಚಿತರಾದರು. ರೋಟರಿ ಸಂಸ್ಥೆಯಲ್ಲೂ ನಮ್ಮ, ಅವರ ಬಾಂಧವ್ಯ ಅತ್ಯಂತ ಆತ್ಮೀಯವಾಗಿತ್ತು. ಅವರ ನಿಧನ ಮೈಸೂರಿಗೆ ತುಂಬಲಾರದ ನಷ್ಟ.

-ರಂಗರಾವ್ ಕೃಷ್ಣ, ಉದ್ಯಮಿ.



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರು ಹಾಗೂ ನನ್ನ ಹಿತೈಷಿಗಳಾದ ಕೆ.ಬಿ. ಗಣಪತಿ ಅವರ ನಿಧನ ಸುದ್ದಿ ತಿಳಿದು ಅತ್ಯಂತ ದುಃಖವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಕುಟುಂಬ ಸದಸ್ಯರಿಗೆ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. **- ಈ.ಸಿ.ನಿಂಗರಾಜ್‌ಗೌಡ, ಸಿಂಡಿಕೇಟ್ ಮಾಜಿ ಸದಸ್ಯ, ಮೈಸೂರು ವಿವಿ.**


ಪೂಜ್ಯರಾದ ಶ್ರೀ ಕೆ.ಬಿ.ಗಣಪತಿ ಸರ್ ನಿಧನ, ನಮ್ಮ ಕುಟುಂಬಕ್ಕೆ ತುಂಬಾ ನೋವನ್ನುಂಟು ಮಾಡಿದೆ. ಅವರ ಅಗಲಿಕೆಯಿಂದ ಪತ್ರಿಕೋದ್ಯಮಕ್ಕೆ ಮಾತ್ರವಲ್ಲದೆ ಇಡೀ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ನಮ್ಮ ಕುಟುಂಬದ ಹಿತೈಷಿಯಾಗಿದ್ದ ಅವರು, ನಮ್ಮ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ, ಪ್ರೋತ್ಸಾಹ ನೀಡಿದ್ದರು. ಅವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ. ಕುಟುಂಬಕ್ಕೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

-ಡಾ.ಹೆಚ್.ಹನುಮಂತಪ್ಪ, ಡಾ.ಕವಿತಾ ಹನುಮಂತಪ್ಪ

ಸಾಮಾಜಿಕ ಕಾರ್ಯಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದ ಡಾ.ಕೆ.ಬಿ.ಗಣಪತಿ ಅವರು, ಮೈಸೂರು ಕೈಗಾರಿಕೆಗಳ ಅಭಿವೃದ್ಧಿ ವಿಚಾರದಲ್ಲಿಯೂ ಸೂಕ್ತ ಸಲಹೆಗಳನ್ನು ನೀಡುವ ಮೂಲಕ ಪ್ರೋತ್ಸಾಹ ನೀಡುತ್ತಿದ್ದರು. ಕೈಗಾರಿಕಾ ಸಂಸ್ಥೆಯ ಸಣ್ಣ ಕಾರ್ಯಕ್ರಮಗಳನ್ನು ವರದಿ ಮಾಡುವ ಮೂಲಕ ಸಹಕಾರ ನೀಡುತ್ತಿದ್ದರು. ಅವರ ನಿಧನ ತುಂಬಾ ನೋವು ತಂದಿದೆ.

-ಎಂ.ಸಿ.ಬನ್ಸಾರಿ, ಉದ್ಯಮಿ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.07.2025 ಮಂಗಳವಾರ, ಮಳೆ ನಕ್ಷತ್ರ: ಪುನರ್ವಸು, 6.07.2025ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಮತ್ತು ಅನ್ಯನರ ಸಂಬಂಧಿ ಕಾಯಿಲೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಲೋಕಕಲ್ಯಾಣಕ್ಕಾಗಿ ಶ್ರೀಮದ್ ಭಾಗವತ್ ಪ್ರವಚನ, ವಿದ್ವಾನ್ ಶ್ರೀ ಗಣೇಶ್ ಶರ್ಮಾ (ಮೈಸೂರು)) ಅವರಿಂದ. ಸ್ಥಳ: ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30ರಿಂದ.
- **ಭಾವಸಾರ ಕ್ಷತ್ರಿಯ ಸಂಘ :** 29ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12ಗಂಟೆಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕಳಸ ಸ್ಥಾಪನೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಂಘದ ಆವರಣ, ಬನ್ನಿಮಂಟಪ.
- **ಜಿಲ್ಲಾ ಬ್ರಾಹ್ಮಣ ಮಹಾಸಭಾ :** ಶ್ರೀ ಚಾಮುಂಡೇಶ್ವರಿ ವರ್ಧಂತಿ ಹಾಗೂ ಬಿ.ಆರ್. ನಟರಾಜ್ ಜೋಯಿಸ್ ಅವರ ಜನ್ಮ ದಿನಾಚರಣೆ, ಉಪಸ್ಥಿತರು : ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಎಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ವೈ.ಡಿ. ರಾಜಣ್ಣ, ಎಂ. ಚಂದ್ರಶೇಖರ್, ಡಾ. ರಾಜಶೇಖರ್, ಡಾ. ಯೋಗಣ್ಣ, ಡಾ. ಲತಾ ರಾಜಶೇಖರ್, ಅಂಶಿಪ್ರಸನ್ನಕುಮಾರ್, ಪುಷ್ಪ ಅಯ್ಯಂಗಾರ್, ಸ್ಥಳ: ಜಿಲ್ಲಾ ಬ್ರಾಹ್ಮಣ ಮಹಾಸಭಾ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ-ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಎಂ. ಕುಮಾರಸ್ವಾಮಿ, ಎನ್. ಹೇಮ ಹಾಗೂ ಅಂಬಯ್ಯನುಲಿ, ವ್ಯಾಖ್ಯಾನ- ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90-ನೆನಪುಗಳ ಹೊತ್ತು ವೈದ್ಯಕೀಯ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮಂಡ್ಯ ಜಿಲ್ಲೆ ಪಾಂಡವಪುರದ ನೇತ್ರ ತಜ್ಞರು ಹಾಗೂ ಸಮಾಜಸೇವಕರೂ ಆದ ಡಾ. ಮಣಿಕರ್ಣಿಕಾ ಎಚ್. ಆರ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ- ಬೇದ್ರೆ ಮಂಜುನಾಥ್, 9.00 ಪ್ರಾಯೋಜಿತ ಕಾರ್ಯಕ್ರಮ-ಆರೋಗ್ಯ ಧಾರೆ, 9.30 ಕರೆಗೊಂದು ಗೀತೆ-ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಜಯಶ್ರೀ - ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ-ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ-ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ-ಬಸವರಾಜ ರಾಜಗುರು, 12.45 ಪ್ರಕಾಶ್ ಪುಟ್ಟಪ್ಪ ಅವರಿಂದ ಸಣ್ಣಕಥೆ-ಕಂದಿಲು, 1.00 ಪ್ರಗತಿ ಪಥ- ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನ ಮಂತ್ರಿಗಳ ಸ್ವಾಸ್ಥ್ಯ ಸುರಕ್ಷಾ ಯೋಜನೆ ಕುರಿತು ಪಿ. ಕೆ.ರವಿಕುಮಾರ್ ಅವರಿಂದ ಮಾಹಿತಿ, 1.20 ಭಾವಗೀತೆಗಳು-ವೀಣಾ ಶ್ರೀನಿವಾಸ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅರುಣ ಸಾಯಿರಾಮ್-ಹಾಡುಗಾರಿಕೆ, 4.00 ಕಥಾಕಾಲಕ್ಷೇಪ, ಭಕ್ತ ಭೀಷ್ಮ-ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ-ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನುಮರಿ ಸಾಗಾಣಿಕೆ ಮತ್ತು ದಾಸ್ತಾನು ಕ್ರಮಗಳು ಈ ಕುರಿತು ಹಾಸನ ಜಿಲ್ಲಾ ಮೀನುಗಾರಿಕಾ ಉಪನಿರ್ದೇಶಕರಾದ ಎನ್.ಎಸ್.ಪ್ರೀತಾ ಅವರೊಂದಿಗೆ ಸಂದರ್ಶನ, ಸಂದರ್ಶಕರು - ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್-ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಬಿ.ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಉಸ್ತಾದ್ ರಫೀಖ್ ಖಾನ್- ಸಿತಾರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಕೆ. ಓಮನಕುಟ್ಟಿ - ಹಾಡುಗಾರಿಕೆ, 10.00 ಚೈತ್ರವನ-ಲಕ್ಷೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ -ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು-ಹಳೆಯ ಕನ್ನಡ ಚಿತ್ರಗೀತೆಗಳು

ಜು.18ರ ಯುವ ಕಾಂಗ್ರೆಸ್ ಪದಗ್ರಹಣ ಸಮಾರಂಭ

ಜು.19ರ ರಾಜ್ಯ ಸರ್ಕಾರದ ಸಾಧನಾ ಸಮಾವೇಶ ಯಶಸ್ವಿಗೊಳಿಸಲು ಸಜ್ಜಾಗಿ

ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್

ಮೈಸೂರು,ಜು.14(ಪಿಎಂ)– ಮೈಸೂರಿನಲ್ಲಿ ನಡೆಯುವ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ ಹಾಗೂ ಯುವ ಕಾಂಗ್ರೆಸ್ ಪದಗ್ರಹಣ ಸಮಾರಂಭ ಯಶಸ್ವಿಗೊಳಿಸಲು ಪಕ್ಷದ ಕಾರ್ಯಕರ್ತರು ಸಜ್ಜಾಗಬೇಕೆಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕರೆ ನೀಡಿದರು.

ಮೈಸೂರಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಸದರಿ ಸಮಾವೇಶ ಮತ್ತು ಸಮಾರಂಭ ಕುರಿತಂತೆ ಸೋಮವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜು.18ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲೆ ಮತ್ತು ನಗರಕ್ಕೆ ಸಂಬಂಧಿಸಿದ ಯುವ ಕಾಂಗ್ರೆಸ್ ಪದಗ್ರಹಣ ಸಮಾರಂಭ ನಡೆಯಲಿದೆ ಎಂದರು.

ಅಂತೆಯೇ ಜು.19ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ ಆಯೋಜಿಸಲಾಗಿದೆ. ಯುವ ಜನರೂ ಸೇರಿದಂತೆ ಹೆಚ್ಚು ಸಾರ್ವಜನಿಕರು ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಕಾರ್ಯಕರ್ತರು ಸಂಘಟನಾತ್ಮಕವಾಗಿ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.



ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿಯಿಂದ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಈ ಎರಡೂ ಮಹತ್ವದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಜು.18ರಿಂದ 20ರವರೆಗೆ ಮೂರು ದಿನಗಳ ಕಾಲ ರಾಜ್ಯ ಕಂಡಂತಹ ಧೀಮಂತ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರವಾಸ ಕೈಗೊಂಡಿದ್ದಾರೆ. ಜೊತೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಸಚಿವ ಸಂಪುಟದ ಸದಸ್ಯರು, ಶಾಸಕರು, ಪಕ್ಷದ ರಾಜ್ಯ ಮಟ್ಟದ ನಾಯಕರು ಸಹ ಆಗಮಿಸಲಿದ್ದಾರೆ ಎಂದು ಹೇಳಿದರು.

ಯುವ ಕಾಂಗ್ರೆಸ್ ಎಂಬುದು ಒಂದು ಚಳುವಳಿ. ಇದು ದೇಶದ ಭವಿಷ್ಯ ಕಟ್ಟಿ ಬೆಳೆಸುವ ಸಾಮರ್ಥ್ಯ ಹೊಂದಿರುವ ಬೃಹತ್ ಸಂಘಟನೆ. ಸ್ವಾಮಿ ವಿವೇಕಾನಂದ, ಡಾ.ಬಿ.ಆರ್.ಅಂಬೇಡ್ಕರ್, ರಾಷ್ಟ್ರಕವಿ ಕುವೆಂಪು ಸೇರಿದಂತೆ ಮೊದಲಾದ ಮಹನೀಯರು ವೈಯಕ್ತಿಕ ಶ್ರೇಯೋಭಿವೃದ್ಧಿಗೆ ಸ್ವಯಂ ಪ್ರಯತ್ನ, ಪರಿಶ್ರಮ ಮುಖ್ಯವೆಂಬುದನ್ನು ತಮ್ಮದೇ ವಾಕ್ಯಗಳಲ್ಲಿ ಸಂದೇಶವಾಗಿ ನೀಡಿದ್ದಾರೆ. ಈ ನಿಟ್ಟಿನಲ್ಲಿ ನಿಮ್ಮ ಅಗಾಧ ಶಕ್ತಿಯನ್ನು ಸರಿಯಾದ ಮಾರ್ಗದಲ್ಲಿ ಬಳಸಿದರೆ ಯಶಸ್ಸು ಒಲಿದು ಬರಲಿದೆ ಎಂದು ತಿಳಿಸಿದರು.

ಪ್ರಸ್ತುತ ದೇಶದಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿ ಬೆಳೆದು ರಾಜಕೀಯವಾಗಿ ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿರುವವರು ಕೂಡ ಇಂತಹ ಯುವ ಸಂಘಟನೆಯಿಂದಲೇ ಬೆಳೆದು ಬಂದವರಾಗಿದ್ದಾರೆ. ಸಾಮಾನ್ಯ ಕುಟುಂಬದಿಂದ ಬಂದರೂ ಅವರ ಪರಿಶ್ರಮ ಎತ್ತರಕ್ಕೆ ಬೆಳೆಯುವಂತೆ ಮಾಡಿದೆ. ಈ ನಿಟ್ಟಿನಲ್ಲಿ ಸಾಧಕರ ಜೀವನ ಚರಿತ್ರೆ ಹಾಗೂ ವಿಚಾರಧಾರೆ ಓದುವುದನ್ನು ರೂಢಿಸಿಕೊಂಡರೆ, ಯಶಸ್ಸು ಸಾಧ್ಯವಾಗಲಿದೆ. ಪ್ರತಿಯೊಬ್ಬರ ಬದುಕಿನ ಪ್ರತಿ ಹೆಜ್ಜೆಯಲ್ಲಿಯೂ ಅವರ ತಂದೆ–ತಾಯಿ, ಗುರುಗಳು, ಬಂಧುಗಳು ಹಾಗೂ ಸಮಾಜದ ಶ್ರಮ ಮತ್ತು ಪ್ರಭಾವಗಳಿರುತ್ತವೆ. ಇದನ್ನು ಅರ್ಥೈಸಿಕೊಂಡರೆ ಮಾತ್ರ ನಾವು ಸಮಾಜದಲ್ಲಿ ಗುರುತಿಸಿಕೊಳ್ಳಲು ಹಾಗೂ ಬೆಳೆಯಲು ಸಾಧ್ಯ ಎಂದರು.

ಬಿಜೆಪಿ ಮುಖವಾಡ ಕಳಚಿ...

ಕಾಂಗ್ರೆಸ್ ಪಕ್ಷ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಂತಹ ಮಹತ್ವದ ಸ್ಥಾನದಲ್ಲಿದೆ. ಅಲ್ಲದೆ, ಜಾತ್ಯಾತೀತ ನೆಲೆಯಲ್ಲಿ ಎಲ್ಲರನ್ನೂ ಸಮಾನವಾಗಿ ಕೊಂಡೊಯ್ಯುವ ಪಕ್ಷವಾಗಿ ಮನ್ನಣೆಗಳಿಸಿದೆ. ಆದರೆ ಬಿಜೆಪಿಯವರು ಕಾಂಗ್ರೆಸ್ ಬಗ್ಗೆ ಅಪಪ್ರಚಾರ ಮಾಡುವ ಮೂಲಕ ಕಡಿಮೆ ಅವಧಿಯಲ್ಲಿ ಎಲ್ಲವನ್ನು ನಾವೇ ಮಾಡಿದ್ದೇವೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಅವರ ಮುಖವಾಡವನ್ನು ಸಮಾಜದ ಮುಂದೆ ಯುವ ಕಾಂಗ್ರೆಸ್ ತೆರೆದಿಡಬೇಕು. ಯುವ ಕಾಂಗ್ರೆಸ್ ಕಾರ್ಯಕರ್ತರು ಸಾಮಾಜಿಕ ಕಳಕಳಿ, ಸಮಾಜ ಸೇವಾ ಚಟುವಟಿಕೆಗಳ ಮೂಲಕ ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು.

-ಎಂ.ಕೆ.ಸೋಮಶೇಖರ್, ಮಾಜಿ ಶಾಸಕರು.

ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳು ಪ್ರತಿ ಕುಟುಂಬಕ್ಕೂ ಒಂದಲ್ಲ ಒಂದು ಅನುಕೂಲ ಕಲ್ಪಿಸುತ್ತಿವೆ. ಗ್ಯಾರಂಟಿ ಯೋಜನೆಗಳು ಬಡತನದ ಮಟ್ಟವನ್ನು ನೀಗಿಸಿ ಎಷ್ಟೋ ಜನರ ಮುಖದಲ್ಲಿ ನೆಮ್ಮದಿ ಮೂಡಿಸಿದೆ. ಈ ನಿಟ್ಟಿನಲ್ಲಿ ಯುವ ಕಾಂಗ್ರೆಸ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಜನತೆ ಮುಂದೆ ಸಂಘಟನಾತ್ಮಕವಾಗಿ ತೊಡಗಿಸಿಕೊಳ್ಳಲು ನೈತಿಕತೆ ಹೊಂದಿದ್ದಾರೆ. ವಿಶೇಷವಾಗಿ ಯುವ ಕಾಂಗ್ರೆಸ್ ಕಾರ್ಯಕರ್ತರು ಯುವ ಜನರನ್ನು ಸಂಘಟಿಸಬೇಕು.

ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀಧರ್, ನಗರ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಯ್ಯದ್‌ಅಬ್ರಾರ್, ಯುವ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ಲಾವಣ್ಯ ಯಾದವ್, ಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಕಾಂಗ್ರೆಸ್ ಮುಖಂಡರಾದ ರವಿಶಂಕರ್, ಯುವ ಕಾಂಗ್ರೆಸ್ ಮುಖಂಡರಾದ ದೀಪಕ್ ರಾಜಾಹುಲಿ, ನವೀನ್ ಕೆಂಪಿ, ಐಎನ್ ಟಿಯುಸಿ ನಗರಾಧ್ಯಕ್ಷ ಮದನ್‌ಕುಮಾರ್, ರಾಕೇಶ್, ಹೇಮಂತ್, ಮಲ್ಲೇಶ್ (ಮಲ್ಲ), ಲಖನ್, ವಿಕಾಸ್, ಕುಮಾರ್ (ಕುಮ್ಮಿ) ಮತ್ತಿತರರು ಹಾಜರಿದ್ದರು.

ಎಂಡಿಎಸ್ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟ

ಬೆಂಗಳೂರು: 2025ನೇ ಸಾಲಿನ ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಸಂಬಂಧಿಸಿದಂತೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 889 ಎಂಡಿಎಸ್ ಸೀಟು ಲಭ್ಯ ಇದ್ದು, ಮೊದಲ ಸುತ್ತಿನಲ್ಲಿ 636 ಮಂದಿಗೆ ಸೀಟು ಹಂಚಿಕೆ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಒಟ್ಟು 1,400 ಮಂದಿ ಸೀಟು ಪಡೆಯಲು ಅರ್ಜಿ ಸಲ್ಲಿಸಿದ್ದರು. ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳು ತಮಗೆ ಸೂಕ್ತ ಅನಿಸಿದರೆ ಛಾಯ್ಸ್–1 ಅನ್ನು ಆಯ್ಕೆ ಮಾಡಿಕೊಂಡು ಕಾಲೇಜಿಗೆ ಪ್ರವೇಶ ಪಡೆಯಬಹುದು. ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಮಂಗಳವಾರ ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಯುಜಿನೀಟ್ ನೋಂದಣಿಗೆ ಜು.17ರವರೆಗೆ ಅವಕಾಶ: ವೈದ್ಯಕೀಯ ಕೋರ್ಸ್‌ಗಳ ಸೀಟು ಹಂಚಿಕೆ ಸಲುವಾಗಿ ಇದುವರೆಗೂ ನೋಂದಣಿ ಮಾಡದಿರುವವರಿಗೆ ಅನುಕೂಲವಾಗಲಿ ಎಂದು ಜು.17ರವರೆಗೆ ಅವಕಾಶ ನೀಡಲಾಗಿದೆ. ಹೊಸದಾಗಿ ನೋಂದಣಿ ಮಾಡಿಕೊಂಡು, ಅರ್ಜಿ ಸಲ್ಲಿಸಬಹುದು. ಹಾಗೆಯೇ ನೀಟ್ ರೋಲ್ ನಂಬರ್ ದಾಖಲಿಸುವವರಿಗೂ ಜು.17ರವರೆಗೆ ಅವಕಾಶ ಇದೆ ಎಂದು ಹೇಳಿದ್ದಾರೆ.

ಇಂದು ಶ್ರೀ ಚಾಮುಂಡೇಶ್ವರಿ ಹಬ್ಬದ ಪೂಜಾ ಮಹೋತ್ಸವ

ಮೈಸೂರು,ಜು.14(ಪಿಎಂ)– ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಜು.15ರಂದು ಸಂಜೆ 5ಕ್ಕೆ ನಗರದ ಕೆಜಿ ಕೊಪ್ಪಲಿನಲ್ಲಿ ಶ್ರೀ ಚಾಮುಂಡೇಶ್ವರಿ ಹಬ್ಬದ ಪೂಜಾ ಮಹೋತ್ಸವ ಆಯೋಜಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಆರ್.ಲಿಂಗಪ್ಪ, ಸಮಿತಿಯ ಕಾನೂನು ಸಲಹೆಗಾರ ಸಿ.ಬಸವರಾಜು, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಶಿವಕುಮಾರ್, ಬಾಲು, ಚನ್ನಪ್ಪ ಎಂ.ಶಂಕರ ಪಾಲ್ಗೊಳ್ಳಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹುಚ್ಚಾಸ್ಪತ್ರೆಯಲ್ಲಿ ಹುಚ್ಚರು ಅಳ್ತಾ ಇದ್ದರು,
ಒಬ್ಬ ಹುಚ್ಚ ಸುಮ್ಮನೆ ಮಲಗಿದ್ದ.
ಡಾಕ್ಟರ್ ಬಂದು ಕೇಳಿದರು; ಲೇ ಮಂಗ್ಯಾನ ಮಗನೇ ನೀ
ಯಾಕಾ ಒಬ್ಬನೆ ಸುಮ್ನೆ ಮಲಗಿದ್ದೀಯ?
ಹುಚ್ಚ : ನೀ ಯಾವ ಸೀಮೆ ಡಾಕ್ಟ್ರೆಲೇ, ನಾ ಸತ್ತಿನಿ ಅದ್ಕೆ ಅವರೆಲ್ಲಾ ಅಳ್ತಾವ್ರೆ

ಮೈಸೂರು ಮಿತ್ರ
ಮಂಗಳವಾರ, 15 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಾವು ಜೀವನದಲ್ಲಿ ಎಷ್ಟೋ ಸಲ ಕೆಲವರಿಂದ ಮೋಸ ಹೋಗಿರಬಹುದು. ಆದರೆ ಅದಕ್ಕೆ ಕಾರಣ ಅವರ ಬುದ್ಧಿವಂತಿಕೆ ಅಲ್ಲ. ನಾವು ಅವರ ಮೇಲೆ ಇಟ್ಟಿರೋ 'ನಂಬಿಕೆ'.


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲು ಎಟಕದಿರುವಾಗ ಬೆಕ್ಕು ಪ್ರಾಮಾಣಿಕ

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

ಹಲವಾರು ಪ್ರಥಮಗಳ ಪಿತಾಮಹ ಡಾ.ಕೆ.ಬಿ.ಗಣಪತಿ

● ಕಳೆದ 50 ವರ್ಷಗಳ ತಮ್ಮ ಸುದೀರ್ಘ ಪತ್ರಿಕೋದ್ಯಮ ವೃತ್ತಿಯಲ್ಲಿ ಕೆ.ಬಿ. ಗಣಪತಿಯವರು ನಗರ, ಮೈಸೂರು ವಿಭಾಗ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರಥಮಗಳನ್ನು ಸೃಷ್ಟಿಸಿದ್ದಾರೆ. ಮೈಸೂರಿನಲ್ಲಿ ಇಂಗ್ಲೀಷ್ ಸಂಜೆ 'ಸ್ಟಾರ್ ಆಫ್ ಮೈಸೂರ್' ನಗರ ಪತ್ರಿಕೆಯೊಂದನ್ನು ಪ್ರಾರಂಭಿಸಿ ಅದನ್ನು ನಿರಂತರವಾಗಿ ನಡೆಸಿ ಮೈಸೂರು ವಿಭಾಗದಲ್ಲಿ ಆಂಗ್ಲ ಪ್ರಾಂತೀಯ ಪತ್ರಿಕೆಯೊಂದನ್ನು ಐದು ಜಿಲ್ಲೆಗಳಲ್ಲೂ ಜನಪ್ರಿಯಗೊಳಿಸಿದ ಮೈಸೂರು ವಿಭಾಗ ಮತ್ತು ಕರ್ನಾಟಕದ ಪ್ರಥಮ ಪತ್ರಿಕೋದ್ಯಮಿಯಾಗಿದ್ದಾರೆ.



● ಮೈಸೂರು ನಗರದಿಂದ 'ಮೈಸೂರು ಮಿತ್ರ' ಕನ್ನಡ ಬೆಳಗಿನ ಪತ್ರಿಕೆಯನ್ನು ಪ್ರಾರಂಭಿಸಿ ಅದನ್ನು ಮೈಸೂರು ವಿಭಾಗದ ಅತೀ ಹೆಚ್ಚು ಸಂಖ್ಯೆಯಲ್ಲಿ ಪ್ರಸಾರಗೊಳ್ಳುವ ಏಕೈಕ ದೈನಂದಿನ ಬೆಳಗಿನ ಪ್ರಾಂತೀಯ ಪತ್ರಿಕೆಯನ್ನಾಗಿ ರೂಪಿಸಿದ ಪ್ರಥಮರಾಗಿದ್ದಾರೆ.

● ಒಬ್ಬನೇ ಸಂಪಾದಕ ಪ್ರಾದೇಶಿಕ ಭಾಷೆ ಮತ್ತು ಇಂಗ್ಲೀಷ್ ಎರಡರಲ್ಲೂ ದೈನಂದಿನ ಪ್ರಾಂತೀಯ ಪತ್ರಿಕೆಗಳನ್ನು ಪ್ರಾರಂಭಿಸಿ ಅವುಗಳನ್ನು 50 ವರ್ಷಗಳ ಕಾಲ ನಡೆಸಿ ಜನಪ್ರಿಯಗೊಳಿಸಿದವರು ರಾಷ್ಟ್ರಮಟ್ಟದಲ್ಲೂ ಇನ್ನೊಬ್ಬ ಇಲ್ಲ ಎಂಬ ಖ್ಯಾತಿಗೆ ಪಾತ್ರವಾಗಿದ್ದಾರೆ.

● ದೈನಂದಿನ ಪ್ರಾದೇಶಿಕ ಆಂಗ್ಲ ಮತ್ತು ಕನ್ನಡ ಭಾಷೆಗಳೆರಡರ ಪತ್ರಿಕೆಗಳಿಗೆ ಚಾಚೂ ತಪ್ಪದೆ ಪ್ರತಿನಿತ್ಯ ಸಂಪಾದಕೀಯ ಬರೆಯುತ್ತಿದ್ದ ಮೈಸೂರಿನ ಅಧ್ಯಯನ ಶೀಲ ಏಕೈಕ ಸಂಪಾದಕರಾಗಿದ್ದಾರೆ.

● ಪ್ರತಿಷ್ಠಿತ ಮೈಸೂರು ವಿವಿಯಿಂದ ಪ್ರಾದೇಶಿಕ ಪತ್ರಿಕೋದ್ಯಮದಲ್ಲಿ ಗೌರವ ಡಾಕ್ಟರೇಟ್ ಪಡೆದ ಮೈಸೂರಿನ ಮತ್ತು ರಾಜ್ಯದ ಪ್ರಥಮ ಸಂಪಾದಕರಾಗಿದ್ದಾರೆ.

● ಮೈಸೂರಿನ ಪ್ರಾದೇಶಿಕ ಕನ್ನಡ ಹಾಗೂ ಆಂಗ್ಲ ಪತ್ರಿಕೋದ್ಯಮವನ್ನು ಲಾಭದಾಯಕ ಉದ್ಯಮವನ್ನಾಗಿ ರೂಪಿಸಿದ ಮೈಸೂರಿನ ಮತ್ತು ಕರ್ನಾಟಕದ ಪ್ರಥಮ ಪತ್ರಿಕೋದ್ಯಮಿಯಾಗಿದ್ದಾರೆ.

ಹೀಗೆ ಗಣಪತಿಯವರ ಬದುಕು ಪತ್ರಿಕೋದ್ಯಮಕ್ಕೆ ಮಾರ್ಗದರ್ಶಿಯಾಗಿದ್ದು, ಅವರ ಬದುಕಿಗೆ ಗೌರವ ಮತ್ತು ವೃತ್ತಿಗೆ ಘನತೆಗಳನ್ನು ತಂದುಕೊಟ್ಟು ಪತ್ರಿಕೋದ್ಯಮದಲ್ಲಿ ಹಲವಾರು ಪ್ರಥಮಗಳನ್ನು ಸಾಧಿಸಿದ ಮೈಸೂರು ಪತ್ರಿಕೋದ್ಯಮದ ಏಕೈಕ ವ್ಯಕ್ತಿಯಾಗಿದ್ದಾರೆ. ಅವರ ಸಾಧನೆಗಳು ಪತ್ರಿಕೋದ್ಯಮ, ಸಂಪಾದಕರಿಗೆ ಮಾರ್ಗದರ್ಶನವಾದಲ್ಲಿ ಅದೇ ಅವರ ಆತ್ಮಕ್ಕೆ ಸಲ್ಲಿಸುವ ಪ್ರಮುಖ ಶ್ರದ್ಧಾಂಜಲಿಯಾಗುತ್ತದೆ.



–ಡಾ.ಎಸ್.ಪಿ.ಯೋಗಣ್ಣ, ವೈದ್ಯ ಸಾಹಿತಿ, ಅಧ್ಯಕ್ಷರು, ಸುಯೋಗ್ ಆಸ್ಪತ್ರೆ, ಮೈಸೂರು.

■ ಪತ್ರಿಕಾ ರಂಗದ ಭೀಷ್ಮ ಕೆಬಿಜಿ

ಮಾನ್ಯರೆ,

ಮೈಸೂರಿನ ಪತ್ರಿಕಾ ರಂಗದ 'ಭೀಷ್ಮ' ಎಂದೇ ಹೇಳಬಹುದಾದ ಮೈಸೂರಿನ ಹಿರಿಯ ಪತ್ರಕರ್ತರು, ಲೇಖಕರು, ಚಿಂತಕರು ಹಾಗೂ ಸಾಹಿತಿಯು ಆದ, ಬೆಳಗಿನ 'ಮೈಸೂರು ಮಿತ್ರ' ದಿನಪತ್ರಿಕೆ ಮತ್ತು ಸಂಜೆಯ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಪಾದಕರಾದ ಕೆ.ಬಿ. ಗಣಪತಿಯವರ ಅಕಾಲಿಕ ನಿಧನ ಪತ್ರಿಕಾ ರಂಗಕ್ಕೆ ಆದ ದೊಡ್ಡ ನಷ್ಟ. ಬೆಳಗಿನ 'ಮೈಸೂರು ಮಿತ್ರ' ಲಕ್ಷಾಂತರ ಜನ ಓದುಗರನ್ನು ತಲುಪುವ ದಕ್ಷಿಣ ಭಾರತದ ಸ್ಥಳೀಯ ಪತ್ರಿಕೆಗಳಲ್ಲೇ ಅತೀ ಹೆಚ್ಚು ಪ್ರಸಾರವಿರುವ ದಿನಪತ್ರಿಕೆ. ಸ್ಥಳೀಯ ಮಟ್ಟದ ದಿನಪತ್ರಿಕೆಗಳು, ಜಾಗತಿಕ ಮಟ್ಟದಲ್ಲೂ ಹೆಸರು ಮಾಡಿರುವ ಯಶಸ್ಸು ಕೆ.ಬಿ.ಗಣಪತಿಯವರಿಗೆ ಸಲ್ಲುತ್ತದೆ. ಕಳೆದ 46 ವರ್ಷಗಳ ಹಿಂದೆ ಕಟ್ಟಿ ಬೆಳೆಸಿದ ಮೈಸೂರಿಗೆ ಮಾತ್ರ ಸೀಮಿತವಾಗಿದ್ದ ಪತ್ರಿಕೆ ಇಂದು, ಜಿಲ್ಲೆಯನ್ನು ದಾಟಿ, ಮೈಸೂರು, ಮಂಡ್ಯ, ಹಾಸನ ಮತ್ತು ಕೊಡಗಿನ ಬೆಳಗಿನ ಜನಪ್ರಿಯ ಪತ್ರಿಕೆ ಮಾಡಿರುವುದು ಕೆ.ಬಿ.ಗಣಪತಿಯವರ ಸಿದ್ಧತೆ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ. ಅನೇಕ ಹೊಸ ಬರಹಗಾರರು ಮತ್ತು ಲೇಖಕರನ್ನು ಸೃಷ್ಟಿಸಿದ ಹೆಮ್ಮೆ ಗಣಪತಿಯವರಿಗೆ ಸೇರಬೇಕು. ಇವರ ಪ್ರಾಮಾಣಿಕತನ, ದಕ್ಷತೆ ಮತ್ತು ಇವರಿಗಿದ್ದ ಆತ್ಮವಿಶ್ವಾಸ ಎಲ್ಲರೂ ಮೆಚ್ಚುವಂತಹದ್ದು, ಪತ್ರಿಕೆ ಮುಂದೆಯೂ ಇದೇ ರೀತಿ ಮೌಲ್ಯಯುತವಾಗಿ ಓದುಗರನ್ನು ತಲುಪುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಹಿಡಿಯದೇ ಕೋವಿ, ಗೆದ್ದ ಕೊಡಗಿನ ಸೈನಿಕ

ಅಬ್ರಕಡಬ್ರಾ... ಅಬ್ರಕಡಬ್ರಾ.... ಭೂ... ಮಂತ್ರ,
ಕ್ಷಣದಲ್ಲಿ ಮಾಯವಾಯಿತೋ ಪತ್ರಿಕಾರಂಗದ ಮಿತ್ರ
ಮಂತ್ರವಾದಿ, ನರಳಲಿಲ್ಲ, ನೋಯಿಸಲಿಲ್ಲ ಯಾರನ್ನೂ,
ಮೈಸೂರಿನ ಮಿತ್ರನಾಗಿ ಬಂದವರು ಕೆಚ್ಚೆದೆಯ ಕೊಡಗಿನ
ಸುಪುತ್ರ, ಮೈಸೂರಿನ ವರಪುತ್ರ ಮೈಮಾಟದ ಸುರಸುಂದರ,
ಲೇಖನಿಯನ್ನೇ ಕೋವಿಯಾಗಿಸಿ ಸದ್ದಡಗಿಸಿದ ಧೀರಸೈನಿಕ
ಮುಂಜಾನೆಗೂ ಸಂಜೆಗೂ ಬಿಸಿಬಿಸಿ ತಾಜಾಸುದ್ದಿ ಮುಟ್ಟಿಸಿ
ಮೈಸೂರು–ಮಂಡ್ಯ–ಕೊಡಗು–ಚಾಮರಾಜನಗರ–ಹಾಸನದ
ಓದುಗರ ಪ್ರೀತಿ ಗಿಟ್ಟಿಸಿ ದೈತ್ಯನಾಗಿ ಮುಗಿಲೆತ್ತರ ಬೆಳೆದವರು,
ಹುಟ್ಟಿರಲಿ, ಸಾವಿರಲಿ, ನಲಿವಿರಲಿ ನೀನೇ ಬೇಕು ಎಲ್ಲರಿಗೂ
ಶುಭ ಕೋರಲು, ಜನರ ಗೆದ್ದವರು ಸಾವನ್ನೂ ಗೆಲ್ಲಬೇಕಿತ್ತು!,
ಓದುಗರ ಮಿಡಿತವರಿತು ಅಡಿಗಡಿಗೂ ಬೆಳೆದ ಮೇರುವ್ಯಕ್ತಿ,
ಹೃದಯವಂತನ ಹೃದಯವೂ ವಿಶ್ರಾಂತಿ ಬೇಡಿದ್ದು ಸರಿಯೇ?
ಸುದ್ದಿ ಕೇಳಿ ಓದುಗ ಬಳಗಕ್ಕೇ ಬರಸಿಡಿಲು ಬಡಿದಂತಾಯಿತು,
ಮೈಸೂರು ಮಿತ್ರನ ಒಡೆಯ ಮೈಸೂರಿನ ಸೂಪರ್ ಸ್ಟಾರ್
ಗಣಪತಿಯೇ ನೀವು ಎಲ್ಲೂ ಹೋಗಿಲ್ಲ, ಎಲ್ಲರ ಮನೆಮನೆಗೂ
ಗರಿಗರಿಯಿಂದ ಬರುವಿರಿ ಬೆಳಿಗ್ಗೆ–ಸಂಜೆ ಹೊತ್ತು ವಿಘ್ನಗಳಿರದೆ,
ಮರೆಯುವುದುಂಟೆ?, ನಿತ್ಯವೂ ನೆನಪಾಗುವಿರಿ ಓದುವಾಗಲೆಲ್ಲ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು


ನಾ ಹೇಗೆ ಮರೆಯಲಿ ಕೆಬಿಜಿಯ!

ಯಾವ ಸುಳಿವೂ ಕೊಡದೆ ಎದ್ದು ಹೊರಟೇಬಿಟ್ಟರು ಯಜಮಾನರು. ಸುದೀರ್ಘ ಐದು ದಶಕಗಳ ಪತ್ರಿಕೋದ್ಯಮದ ಜೀವನದಲ್ಲಿ ದಣಿವರಿಯದೆ ದುಡಿದವರು ಶ್ರೀ ಕೆ.ಬಿ.ಗಣಪತಿಯವರು. ಕೆ.ಬಿ.ಜಿ.ಯೆಂದೇ ಪ್ರಸಿದ್ಧರಾಗಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ಕಟ್ಟಿ ಬೆಳೆಸಿದ ನಮ್ಮ ನಿತ್ಯ ನೂತನ ಸಂಪಾದಕರು.

ಪತ್ರಿಕೋದ್ಯಮಕ್ಕಾಗಿಯೇ ವಿಶೇಷ ಪ್ಯಾಕೇಜಿನ ಮೇಲೆ ಬಂದು ಕೆಲಸ ಮಾಡಿದವರಂತೆ ಮಾಡಿ ಅಹರ್ನಿಷಿ ದುಡಿದು ದಿಢೀರ್ ಅಂತ ಇಹಲೋಕ ತ್ಯಜಿಸಿ ನಿರುಮ್ಮಳವಾಗಿ ಮಲಗಿಬಿಟ್ಟರು! ಸುಖಾ ಸುಮ್ಮನೆ ಅವರು ಹಾಗೆ ಮಲಗುವವರೇ ಅಲ್ಲ! ಮುಂಜಾನೆಯೆ ಎದ್ದು ಕೈಯ್ಯಲ್ಲೊಂದು ಪುಟ್ಟ ರೇಡಿಯೋ ಹಿಡಿದು ಕುತ್ತಿಗೆಯಲ್ಲೊಂದು ಮಫ್ಲರ್ ಸುತ್ತಿಕೊಂಡು ಕೆ.ಸಿ.ಬಡಾವಣೆಯಲ್ಲಿ ವಾಯುವಿಹಾರಕ್ಕೆ ಹೊರಡುವ ನಿತ್ಯ ಚಟುವಟಿಕೆಯ ವ್ಯಕ್ತಿತ್ವ ಅವರದು. ಅಂಥದೊಂದು ಸದೃಢ ಎಂಭತ್ತೈದರ ತೇಜಸ್ವಿ ಹಿರಿಯ ಜೀವ ಮಂದಸ್ಮಿತದೊಂದಿಗೆ, ಪತ್ನಿ ಮತ್ತು ಮಕ್ಕಳು, ಸೊಸೆಯಂದಿರು ಅಪಾರ ಸಂಖ್ಯೆಯ ಸ್ನೇಹಿತರು, ಪತ್ರಿಕೆಯ ಬಳಗ, ಅಸಂಖ್ಯಾತ ಓದುಗವಲಯಕ್ಕೆ ವಿದಾಯ ಹೇಳಿ ನಮ್ಮ ಮನದಾಳದ ತುಂಬ ಅವರ ಒಡನಾಟದ ಸಾವಿರ ಸಾವಿರ ನೆನಪಿನ ಓಲೆಗರಿಗಳನ್ನ ಸಿಕ್ಕಿಸಿ ಹೊರಟೇಬಿಟ್ಟರು.

ಕೆ.ಬಿ.ಜಿ ಎಂದರೆ ಹಾಗೆ, ಗೆಳೆತನವೆಂಬುದು ಅವರಿಗೆ ಅದೊಂದು ಚುಂಬಕ ಶಕ್ತಿ. ಅವರ ದೃಷ್ಟಿಯಲ್ಲಿ ಅದಕ್ಕೆ ವಯಸ್ಸಿನ ಹಂಗಿಲ್ಲ, ಸ್ಥಾನ ಮಾನಗಳ ಮಿತಿಯಿಲ್ಲ. ಅವರ ಹತ್ತಿರಕ್ಕೆ ಬರುವವರೆಗೂ ಕಷ್ಟ, ಅವರ ಮನಸ್ಸಿನಲ್ಲೊಂದು ಜಾಗ ಸಿಕ್ಕಿತೆಂದರೆ ಮುಗಿಯಿತು, ಶಾಶ್ವತವಾಗಿ ಅವರೊಂದಿಗಿನ ಒಡನಾಟ, ಹರಟೆ, ಮಾತು–ಕತೆ ಯಾವುದಕ್ಕೂ ಕೊರತೆಯಿಲ್ಲ. ಆದರೆ ಅವರ ಓದಿನ ಮಟ್ಟಕ್ಕೆ, ಅವರ ಅನುಭವದ ಮಾತುಕತೆಗೆ ಸರಿಸಮನಾಗಿ ಸ್ಪಂದಿಸುವ ಮಾನಸಿಕ ಸಿದ್ಧತೆ ನಮಗೂ ಇದ್ದಾಗ ಮಾತ್ರ ಅವರೊಂದಿಗಿನ ಒಡನಾಟ, ಮಾತು–ಸಂವಾದಗಳು ರಸಮಯವಾಗಿರುತ್ತಿದ್ದವು. ಆಗ ಗೆಳೆತನದ ಸುಖ ಸ್ಫುರಿಸುತ್ತಿತು. ಹಾಗಂತ ಅವರು ತಮಗೆ ಒಲಿದ ಪತ್ರಿಕೋದ್ಯಮದ ಬಗ್ಗೆಯೇ ಮಾತಾಡಿ ಬೋರು ಹೊಡೆಸುತ್ತಿರಲಿಲ್ಲ. ಸಿನಿಮಾ, ಸಾಹಿತ್ಯ, ಸಂಗೀತ, ಕಥೆ, ಕಾದಂಬರಿ, ಅಂಕಣ, ಇಂಗ್ಲಿಷ್ ಸಾಹಿತ್ಯ, ಕನ್ನಡ, ಕರ್ನಾಟಕ, ರಾಜಕಾರಣ, ನಿತ್ಯ ಜೀವನ–ಹೀಗೆ ತಾಂತ್ರಿಕ ಹಾಗೂ ಲೋಕಾಭಿರಾಮದ ಮಾತಿಗೆಳೆಯುತ್ತಿದ್ದ ಅವರು ದೊಡ್ಡ ಜೀವನಾನುಭವವನ್ನು ಹಂಚಿಬಿಡುತ್ತಿದ್ದರು.

ಕೊಡಗಿನಿಂದ ದೂರದ ಮುಂಬೈಯಲ್ಲಿ ಪತ್ರಿಕೋದ್ಯಮದ ಕಸರತ್ತು ಕಲಿತು, ಮೈಸೂರಿನಂಥ ಅಚ್ಚ ಕನ್ನಡದ ಊರಿಗೆ ಬಂದು ಇಲ್ಲೇ ನೆಲೆನಿಂತು, ಎರಡೆರಡು ಪತ್ರಿಕೆಗಳನ್ನು ನಡೆಸಿ ಗೆದ್ದು ಬೀಗಿದ ಕೆ.ಬಿ.ಜಿ ಇಲ್ಲಿಯವರೆವಿಗೂ ನಮ್ಮ ಕಣ್ಣಿಗೆ ಕಾಣುತ್ತಿರಬಹುದು. ಆದರೆ ಕೆ.ಬಿ.ಜಿ. ದಿಢೀರ್ ಅಂತ ಈ ಪರಿಯ ಗೆಲುವಿನ ನಗೆ ಬೀರಲಿಲ್ಲ. ಸೋಲು ಅವರನ್ನು ಬೆನ್ನತ್ತಿ ಮತ್ತೆ ಮತ್ತೆ ಅವರನ್ನ ಡಿಫೀಟು ಮಾಡಿದ ತನ್ನ ಜರ್ನಿಯ ದಿನಗಳನ್ನು ಅವರು ನೋಡಿದ್ದಾರೆ. ಅವರ ಪತ್ರಿಕೆಯ ಆರಂಭದ ದಿನಗಳು ಅವರಿಗೆ ಹೂವಿನ ಹಾಸಿಗೆ ಆಗಿರಲಿಲ್ಲ, ಆರ್ಥಿಕವಾಗಿ ಬರುತ್ತಿದ್ದ ಖರ್ಚುಗಳ ನಿಭಾವಣೆಗೆ ತಕ್ಕಂತೆ ಪತ್ರಿಕೆಯ ಪ್ರಸಾರ ಇರುತ್ತಿರಲಿಲ್ಲ. ಜಾಹೀರಾತು ಕೈತುಂಬ ಕಾಸು ತರುತ್ತಿರಲಿಲ್ಲ, ಸ್ಥಳೀಯ ವ್ಯಕ್ತಿಗಳನ್ನು, ಕೆಲ ರಾಜಕೀಯ ಮತ್ತು ಸಾಮಾಜಿಕ ವಿಷಯಗಳನ್ನು ಎಚ್ಚರಿಕೆಯಿಂದ ನಿಭಾಯಿಸಬೇಕಾದ ಜರೂರತ್ತು ಅವರನ್ನು ಕಾಡುತ್ತಿತ್ತು. ಈಗ ಅವರ ಸುತ್ತ ದೊಡ್ಡದೊಂದು ಪಡೆಯಿದೆ. ಗೆದ್ದು ನಿಂತ ಪತ್ರಿಕೆಯ ಮಾಧ್ಯಮ ಶಕ್ತಿಯಿದೆ. ಪತ್ನಿ ಶೀಮತಿ ರ್‍ಯಾಲಿ ಗಣಪತಿ, ಪುತ್ರರಾದ ವಿಕ್ರಂ ಮುತ್ತಣ್ಣ, ಮಿಕ್ಕಿ ಬೋಪಣ್ಣರಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಬಹುದೊಡ್ಡ ಓದುಗ ವಲಯವಿದೆ. ಪತ್ರಿಕೆಯ ಪ್ರಸಾರ ಸಂಖ್ಯೆಯಿದೆ. ಇಷ್ಟೆಲ್ಲ ಆಗುವ ಮುನ್ನ ಇದನ್ನೆಲ್ಲಾ ಸೃಷ್ಟಿಸಲು ಹೆಣಗಿದ ಕೆ.ಬಿ.ಜಿ.ಯವರ ಪತ್ರಿಕೋದ್ಯಮದ ದುರ್ಗಮ ಹಾದಿಯಲ್ಲಿ ಅವರನ್ನು ಕಾಣಬೇಕು. ಅವರ ಜೀವನ ಪ್ರಯಾಣದ ಆ ಹಾದಿಯಲ್ಲಿ, ನಾಲ್ಕು ದಶಕಗಳ ಕಾಲ ಅಕ್ಷರ, ಪೆನ್ನು, ಪೇಪರು ಬಿಟ್ಟು ಕದಲದೇ ಕುಳಿತ ಜೀವನ್ಮುಖಿ ಕೆ.ಬಿ.ಜಿ.ಯವರು ಕಾಣಿಸುತ್ತಾರೆ. ಅದೇ ಅವರ ನಿಜವಾದ ಸಾಧನೆ ಮತ್ತು ಶೋಧನೆ. ಇಂತಹ ಕಾಲದಲ್ಲೂ ಬೇಸರದ ಸಾಯಂಕಾಲಗಳು, ನಿದ್ರೆ ಸುಳಿಯದ ರಾತ್ರಿಗಳನ್ನು ದಾಟಿ ಬಂದ ಕೆ.ಬಿ.ಜಿ. ತಮ್ಮ ಪ್ರಾಮಾಣಿಕ ದುಡಿಮೆಯೊಂದರಿಂದಲೇ ಎಲ್ಲವನ್ನು ಗೆದ್ದು, ಪತ್ರಿಕೆಯನ್ನೂ ಗೆಲ್ಲಿಸಿ, ತಮ್ಮನ್ನು ಹಾಗೂ ತಮ್ಮ ಪತ್ರಿಕಾಬಳಗವನ್ನು ದಡ ಸೇರಿಸಿದವರು. ಅದಕ್ಕಾಗಿ ಅವರು ಕೈಗೊಂಡಿದ್ದು ಅವಿರತ ದುಡಿಮೆ ಮತ್ತು ಪತ್ರಿಕೋದ್ಯಮವೆಂಬ ದೊಡ್ಡಕರ್ಮಯೋಗ. ಅದಕ್ಕಾಗಿ ಅವರು ಯಜ್ಞೋಪವೀತ ಕಟ್ಟಿಕೊಳ್ಳಲಿಲ್ಲ, ಶಿಸ್ತು ಮತ್ತು ಶ್ರದ್ಧೆ ಎರಡನ್ನು ವ್ರತದ ಹಾಗೆ ರೂಢಿಸಿಕೊಂಡರು. ಹಾಗಾಗಿಯೇ ಜಾವಾ ಮೋಟರ್ ಸೈಕಲ್ಲಿನಿಂದ ಶುರುವಾದ ಅವರ ಪತ್ರಿಕೋದ್ಯಮದ ನಿರಂತರ ಪ್ರಯಾಣ ಐಷಾರಾಮಿ ಕಾರುಗಳವರೆಗೆ ಅವರನ್ನು ತಂದು ನಿಲ್ಲಿಸಿತು. ಆಗಲೂ ಅವರದು ಅದೇ ಸರಳತೆ, ಮಗುವಿನಂತಹ ಮುಗ್ಧ ನಗು, ನನಗೇನು ಗೊತ್ತೆ ಇಲ್ಲ ಎನ್ನುವ ಅರ್ಥಬರುವ ಪ್ರಶ್ನೆಗಳು, ಎದುರಿಗಿದ್ದವರು ಮಾತಾಡುತ್ತಿದ್ದರೆ ಹೌದ! ಹಾಗ! ಓಹೋ! ಅಂತ ಹುಬ್ಬೇರಿಸಿಕೊಂಡು ಮಕ್ಕಳು ಕಥೆ ಕೇಳುವ ಹಾಗೆ ಎದುರಿಗಿದ್ದವರ ಮಾತುಗಳನ್ನು ಆಲಿಸಿ ಕೇಳಿಸಿಕೊಳ್ಳುವ ಅವರ ಉತ್ಸಾಹ ಮತ್ತು ಕುತೂಹಲಕ್ಕೆ ಹ್ಯಾಟ್ಸ್‌ಆಫ್! ಕಾರಣ ಇಷ್ಟೆ, ಯಾರೇ ಅದರೂ ಒಂದು ಹಂತಕ್ಕೆ ಬೆಳೆದ ಮೇಲೆ Ego centric ಆಗಿ ವರ್ತಿಸುವ ಹಲವರನ್ನ ನಾವು ನೋಡಿದ್ದೇವೆ, ಆದರೆ ಎಲ್ಲ ಎತ್ತರಗಳನ್ನು ನೋಡಿದ ಮೇಲೂ ಕೆ.ಬಿ.ಜಿ.ಯವರು ಅದೇ ಉತ್ಸಾಹ ಅದೇ ಕುತೂಹಲ, ಏನೇನೂ ಅಲ್ಲದ ವ್ಯಕ್ತಿಯಲ್ಲೂ ಇರಬಹುದಾದ ಮಾಹಿತಿಗಳನ್ನು ಆಲಿಸುವ ಮತ್ತು ಕಲೆ ಹಾಕುವ ಹಾಗೂ ಪರಾಮರ್ಶಿಸುವ ಪತ್ರಕರ್ತನೊಬ್ಬನ ಎಂದೂ ಮುಗಿಯದ ತೀವ್ರತೆ ಅವರನ್ನು ವಿನಯವಂತರನ್ನಾಗಿ ಮತ್ತು ವಿವೇಕಿಯನ್ನಾಗಿ ರೂಪಿಸಿತು.



ಡಾ. ಕೆ.ಬಿ.ಗಣಪತಿ

> **"ಗಣಪತಿಯವರು ಪತ್ರಕರ್ತರಾಗಿಯಷ್ಟೇ ಅವರು ಬೆಳೆದಿದ್ದರೆ ಅವರು ಮಾತ್ರ ಬೆಳೆಯುತ್ತಿದ್ದರು. ಪತ್ರಿಕೆಯನ್ನ ಅವರು ಉದ್ಯಮವಾಗಿ ಬೆಳೆಸಿದರು. ಅದರಿಂದ ಅವರ ಸುತ್ತಲಿದ್ದವರೆಲ್ಲಾ ಬೆಳೆದರು. ಅವರ ಪತ್ರಿಕೋದ್ಯಮ ನೂರಾರು ಜನರಿಗೆ ಉದ್ಯೋಗ ಕೊಟ್ಟಿತು. ನೂರಾರು ಜನರಿಗೆ ಪತ್ರಿಕೆಯಲ್ಲಿ ಬರೆಯಲು ಅವಕಾಶ ಕಲ್ಪಿಸಿತ್ತು. ಸಾಮಾಜಿಕ ಜವಾಬ್ದಾರಿ ನಿರ್ವಹಿಸಲು ಮೈಸೂರಿಗರಿಗೆ ಅಕ್ಷರ ಮಾಧ್ಯಮದ ವೇದಿಕೆಯೊಂದು ಸೃಷ್ಟಿಯಾಯಿತು. ಕೆ.ಬಿ.ಜಿಯವರು ತಾವೂ ಬೆಳೆದರು, ತಾವಿದ್ದ ಮೈಸೂರನ್ನು ಬೆಳಗಿಸಿದರು. ಅವರ ಕರ್ಮಯೋಗದಲ್ಲಿ ಜೊತೆಯಾದವರನ್ನೂ ಬೆಳೆಸಿದರು.**

ನಾನು 2013ರಲ್ಲಿ ಒಂದು ದಿನ **'ಮನದ ಮಾತೇಕೆ ಕಿವಿಗೆ ಕೇಳುವುದಿಲ್ಲ'** ಅಂಕಣ ಬರಹವೊಂದನ್ನು ಬರೆದುಕೊಂಡು ಅವರ ಬಳಿ ಹೋಗಿದ್ದೆ. ಬರಹವನ್ನು ಕೈಗೆತ್ತಿಕೊಂಡು ಓದಲು ಶುರು ಮಾಡಿದರು. ಮುಖದಲ್ಲೊಂದು ಮಂದಹಾಸ ಕಾಣಿಸಿತ್ತು. ಚೆನ್ನಾಗಿ ಬರೆದಿದ್ದೀಯಾ ಗುಬ್ಬಿ! ಇನ್ಮುಂದೆ ಪ್ರತೀ ಸೋಮವಾರ ನೀನು ನಮ್ಮ ಪತ್ರಿಕೆಗೆ ಬರೀಲೇಬೇಕು ಅಂತ ಹೇಳಿಯೇಬಿಟ್ಟರು. ಅಂದಿನಿಂದ ಇಂದಿನವರೆಗೆ ನಾನೂ ಒಬ್ಬ ಅಂಕಣಕಾರನಾದೆ. ಅವರು ತೆಗೆದುಕೊಳ್ಳುತ್ತಿದ್ದ ತೀರ್ಮಾನಗಳು ನಿಖರ ಮತ್ತು ನಿರ್ದಿಷ್ಟವಾಗಿರುತ್ತಿದ್ದವು. ಅಂದಿನಿಂದ ನಾನು ಹಿಂತಿರುಗಿ ನೋಡಲೇ ಇಲ್ಲ ಸುಮಾರು 500 ಅಂಕಣಗಳನ್ನು ಬರೆದು ಬಿಟ್ಟೆ. ಒಮ್ಮೊಮ್ಮೆ ಕೆಲವು ಅಂಕಣಗಳು ಇಷ್ಟವಾದರೆ ಫೋನ್ ಮಾಡಿ ಯಾವ ಎಗ್ಗು–ಸಿಗ್ಗು ಇಲ್ಲದೆ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. **'ಚಿಲ್ಲಿ ಚಿಕನ್ನು ಮಲ್ಲಿ ಮಟನ್ನು'** ಲೇಖನ ಓದಿ ಕರೆಮಾಡಿ ಮಾತಾ ಡಿದ್ದರು, ಏನು ಗುಬ್ಬಿ ನಿನ್ನ ಭಾಷೆ ರಾಗಿ ಹೊಲದಲ್ಲಿ ತೆನೆ ಬಿಡಿಸಿದ ಹಾಗೆ ದೇಸೀ ಕನ್ನಡ ನಿನ್ನ ಪೆನ್ನಿನಲ್ಲಿ ಹಾಗೇ ಓಡುತ್ತಿರುತ್ತದೆ ಎನ್ನುತ್ತಿ ದ್ದರು. ಹೀಗೆ ಸಾಮಾನ್ಯರನ್ನು ಅಷ್ಟು ಪ್ರೀತಿಯಿಂದ ಕಂಡ ಜೀವ ಅದು. ಅವರ ಬದುಕು ಮತ್ತು ಬರಹಕ್ಕೊಂದು ಅಕಾಡೆಮಿಕ್ ಶಿಸ್ತಿತ್ತು. ಆಗೀಗ ಒಮ್ಮೊಮ್ಮೆ ಫೋನ್ ಮಾಡಿ ಎಲ್ಲಿದ್ದೀಯಾ ಗುಬ್ಬಿ, ಏನು ಬರೀತಿದ್ದೀಯಾ ಅಂತ ಕೇಳುವ ಕಂಚಿನ ಕಂಠದ ಅವರ ಕಂಠಸಿರಿ ಇಂದಿಗೂ ಎಂದೆಂದಿಗೂ ಸದಾ ಕಿವಿಯಲ್ಲಿ ರಿಂಗಣಿಸುತ್ತಿರುತ್ತದೆ. ಆ ಕಂಠ ಸಿರಿ ಅಮರ.

ಒಬ್ಬ ಪತ್ರಕರ್ತನಿಗಿರಬೇಕಾದ ಸಮಯ ಪ್ರಜ್ಞೆ, ಪ್ರಶ್ನೆ, ಉತ್ತರದ ವಿಶ್ಲೇಷಣೆ–ವಿಷಯಾಲಂಬನೆ–ತಾರ್ಕಿಕ ಅಂತ್ಯ ಹೀಗೆ ಒಂದು ಕಥಾನಕದ ಮಾದರಿಯಲ್ಲಿ ಅವರ ಮಾತು–ಕತೆ, ನಡೆ–ನುಡಿ ರೂಪಗೊಳ್ಳುತ್ತಿತ್ತು. ಅವರ ಇಷ್ಟು ವರ್ಷದ ಸುದೀರ್ಘ ಪತ್ರಿಕೋದ್ಯಮದ ಜೀವನದಲ್ಲಿ ಅವರ ಹೆಸರು ಮಾತ್ರ ಪ್ರಧಾನ ಸಂಪಾದಕರೆಂದು ಪ್ರಕಟವಾಗುತ್ತಿದ್ದರೂ ಅವರ ಬದುಕಿನ ಕೊನೇ ದಿನದವರೆಗೂ ಅವರು ಕ್ರಿಯಾಶೀಲ ಪತ್ರಕರ್ತನ ಜೀವಂತಿಕೆಯನ್ನೇ ಉಳಿಸಿಕೊಂಡು ಬದುಕಿದರು.

ಒಮ್ಮೆ **'ಜಪ್ತಿಯಾಗಿವೆ ಜನತಾ ನ್ಯಾಯಾಲಯಗಳು'** ಎಂಬ ನನ್ನ ಲೇಖನ ಪ್ರಕಟಣೆಗೆ ಹೋಗಿತ್ತು. ನಾ ಮುಚ್ಚಿ ಮಡಗಿ ಮುಡಿಯುವ ಮಲ್ಲಿಗಿ ಅವಳೊಂದು ಗಳುಗೆ ಮುಡಿಯಾಲಿ ಹೋಗು– ಎನ್ನುವ ಜನಪದ ಗೀತೆಯ ಸಾಲೊಂದನ್ನು ಪ್ರಸ್ತಾಪಿಸಿದ್ದೆ. ಹಾಗೆ ಬರೆಯುವಾಗ ಓದುಗರಿಗೆ ಅದೊಂದು ಹಳ್ಳಿಯ ಕಥಾನಕದ ಹಂದರದಂತೆ ನಿರೂಪಣಾ ಶೈಲಿಯಲ್ಲಿ ಮೂಡಿ ಬರಲಿ ಎಂಬ ಕಾರಣಕ್ಕೆ, ಆ ಅಂಕಣದಲ್ಲಿ ಹೆಣ್ಣು ಮಗಳೊಬ್ಬಳ ಕಾಲ್ಪನಿಕ ಪಾತ್ರ ಸೃಷ್ಟಿಸಿ ಅದಕ್ಕೆ ಕಾಲ್ಪನಿಕವಾಗಿಯೇ ಸರೋಜ–ಅಂತ ಹೆಸರಿಟ್ಟು ಕಳಿಸಿದ್ದೆ. ಅದೇನೋ ಗೊತ್ತಿಲ್ಲ! ಪ್ರಕಟಣೆಗೂ ಮುನ್ನ ಅವರಿಗೆ ಆ ಲೇಖನ ಸಿಕ್ಕಿಬಿಟ್ಟಿದೆ. ಓದಿದವರೇ ಫೋನ್ ಮಾಡಿದರು. ಮತ್ತೆ ಅದೇ ಎಂದಿನ ಕಂಠ ಸಿರಿಯಲ್ಲಿ ಎಲ್ಲಿದ್ದೀಯಾ ಗುಬ್ಬಿ–ಎನ್ನುವ ಮಾತು ಕೇಳುತ್ತಿತ್ತು. ಗುರುಗಳೇ ಗಾಡಿ ಓಡಿಸುತ್ತಿದ್ದೇನೆ ಎಂದೆ. ಕೂಡಲೇ ನಿಲ್ಲಿಸು ಗಾಡಿಯನ್ನು, ನಿನ್ನ ಇವತ್ತಿನ ಲೇಖನದಲ್ಲಿ ಸರೋಜ–ಅಂತ ಒಂದು ಹೆಸರು ಬರೆದಿದ್ದೀಯಲ್ಲ ಯಾರದು? ಯಾರದು ಸರೋಜ? ಎಂದು ಮತ್ತದೇ ದನಿಯಲ್ಲಿ ಸೀರಿಯಸ್ ಆಗಿ ಕೇಳಿದರು. ನಾನು ಅದು ಗ್ರಾಮೀಣ ಸೊಗಡಿನ ಜನಪದ ಗೀತೆಯನ್ನು ವಿಶ್ಲೇಷಿಸುವಾಗ ಹಾಗೆ ಸುಮ್ಮನೆ ಬರೆದೆ, ಅದು ಕಾಲ್ಪನಿಕ ಹೆಸರು ಗುರುಗಳೇ, ಆ ತರಹದವರು ಯಾರು ಇಲ್ಲ ಎಂದೆ. ಸರಿ ನಾನೀಗ ಅದನ್ನು ತೆಗೆದುಹಾಕುತ್ತೇನೆ. ನೀನು ಕಥಾನಕದ ರೀತಿ ಬರೆದು common name ಹಾಕಿದ್ರೆ ಅಲ್ಲಿ ಬರುವ ಕತೆ ಏನಾದ್ರು negative image ಸೃಷ್ಟಿ ಮಾಡ್ತಾ ಇದ್ರೆ ಯಾವುದೋ ಹಳ್ಳಿಯ ಅದೇ ಹೆಸರಿನ ಹೆಣ್ಣು ಮಗಳು ನಿನ್ನ ಮೇಲಲ್ಲ, ನನ್ನ ಮೇಲೆ ಕೇಸ್ ಹಾಕ್ತಾಳೆ. ಕಾನೂನು ಗೊತ್ತಿದೆಯಾ ನಿನಗೆ? ನೀನೇ ಬದಲಾಯಿಸಿ ಕಳಿಸು ಎಂದು ಹೇಳಿ ಫೋನಿಟ್ಟರು.

ಇಂಗ್ಲೀಷ್ ಭಾಷೆಯ ಮೇಲೆ ಅವರಿಗೆ ಪ್ರಕಾಂಡ ಪ್ರಭುತ್ವವಿತ್ತು. ಅವರು 'ಸ್ಟಾರ್ ಆಫ್ ಮೈಸೂರ್'ನಲ್ಲಿ ಬರೆಯುತ್ತಿದ್ದ ಇಂಗ್ಲೀಷ್ ಸಂಪಾದಕೀಯದ ಕನ್ನಡ ಅವತರಣಿಕೆಯ ಸಂದರ್ಭಗಳು ಬಂದಾಗಲೆಲ್ಲ ಚಿಕ್ಕದೊಂದು ಪದಕ್ಕೆ ಸರಿಯಾದ ತರ್ಜುಮೆ ಸಿಗದಿದ್ದ ಪಕ್ಷದಲ್ಲಿ ಎಷ್ಟೇ ಸಮಯವಾದರೂ Dictionary ನೋಡಿ, ಹಾಗೆ ನೋಡಿದ ಮೇಲೂ ಅದಕ್ಕೊಂದು ಸಂವಾದಿ ದೇಸೀರೂಪ ಏನಾದರೂ ಬಳಕೆಯಲ್ಲಿದೆಯಾ ಅಂತ ಫೋನ್ ಮಾಡಿ ವಿಚಾರಿಸಿ ಸಮಜಾಯಿಷಿ ಪಡೆದುಕೊಳ್ಳುತ್ತಿದ್ದರು. ಹಾಗಾಗಿಯೇ ಅವರನ್ನ ಅಕ್ಷರ ಲೋಕದ ರಾಜಿಯಾಗದ ಪತ್ರಕರ್ತ ಅಂತ ನಾನು ಪರಿಭಾವಿಸುತ್ತಿದ್ದೆ. ಒಮ್ಮೆ 1992ರಲ್ಲಿ ಅವರು ಬರೆದ 'ಆದರ್ಶವಾದಿ' ಕಾದಂಬರಿ ಯನ್ನು ಅವರು ಸಿನಿಮಾ ಮಾಡಿದರೆ ಹೇಗೆ ಗುಬ್ಬಿ ಎಂಬ ಇಂಗಿತ ವ್ಯಕ್ತಪಡಿಸಿದ್ದರು. ಸಿನಿಮಾಕ್ಕೆ ಬೇಕಾದ ತಯಾರಿಯ ಬಗ್ಗೆ ಗೆಳೆಯ ಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣರ ಬಳಿ ಚರ್ಚಿಸಿದ್ದರು. ಕಡೆಗೆ ಅದು ನನಗೆ ಒಗ್ಗುವಂಥದಲ್ಲ ಗುಬ್ಬಿ ಎಂದು ಕೈ ಬಿಟ್ಟು ತನ್ನದಲ್ಲದ ಕ್ಷೇತ್ರದಲ್ಲಿ ಪ್ರಯೋಗ ಮಾಡಲಿಲ್ಲ.

ಪತ್ರಕರ್ತರಾಗಿಯಷ್ಟೇ ಅವರು ಬೆಳೆದಿದ್ದರೆ ಅವರು ಮಾತ್ರ ಬೆಳೆಯುತ್ತಿದ್ದರು. ಪತ್ರಿಕೆಯನ್ನ ಅವರು ಉದ್ಯಮವಾಗಿ ಬೆಳೆಸಿದರು. ಅದರಿಂದ ಅವರ ಸುತ್ತಲಿದ್ದವರೆಲ್ಲಾ ಬೆಳೆದರು. ಅವರ ಪತ್ರಿಕೋದ್ಯಮ ನೂರಾರು ಜನರಿಗೆ ಉದ್ಯೋಗ ಕೊಟ್ಟಿತು. ನೂರಾರು ಜನರಿಗೆ ಪತ್ರಿಕೆಯಲ್ಲಿ ಬರೆಯಲು ಅವಕಾಶ ಕಲ್ಪಿಸಿತ್ತು. ಸಾಮಾಜಿಕ ಜವಾಬ್ದಾರಿ ನಿರ್ವಹಿಸಲು ಮೈಸೂರಿಗರಿಗೆ ಅಕ್ಷರ ಮಾಧ್ಯಮದ ವೇದಿಕೆಯೊಂದು ಸೃಷ್ಟಿಯಾಯಿತು. ಕೆ.ಬಿ.ಜಿಯವರು ತಾವೂ ಬೆಳೆದರು, ತಾವಿದ್ದ ಮೈಸೂರನ್ನು ಬೆಳಗಿಸಿದರು. ಅವರ ಕರ್ಮಯೋಗದಲ್ಲಿ ಜೊತೆಯಾದವರನ್ನೂ ಬೆಳೆಸಿದರು. ಇವತ್ತು ಈ ಎಲೆಕ್ಟ್ರಾನಿಕ್ ಮೀಡಿಯಾಗಳ ಜೋರು ಭರಾಟೆಯಲ್ಲಿ ಪ್ರಾದೇಶಿಕ ಪತ್ರಿಕೆಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡುತ್ತಿವೆ. ಅಂಥಾದ್ದರಲ್ಲಿ ಐದು ಜಿಲ್ಲೆಗಳು ಲಕ್ಷ ಲಕ್ಷ ಓದುಗರನ್ನು ಸಂಪಾದಿಸುವ ಮಟ್ಟಕ್ಕೆ ಒಂದು ಪ್ರಾದೇಶಿಕ ದಿನಪತ್ರಿಕೆಯನ್ನಾಗಿ ಸ್ಥಳೀಯ ಪತ್ರಿಕೆಯನ್ನ ವಿಸ್ತರಿಸಲಿಕ್ಕೆ ಅತ್ಮಬಲ ಮತ್ತು ಧೀಃಶಕ್ತಿ ಬೇಕು. ಹಾಗಾಗಿಯೇ ನಾವು ಪತ್ರಿಕೋದ್ಯಮದಲ್ಲಿ 50 ವರ್ಷಗಳ ದಾರಿ ಸವೆಸಿ ಎತ್ತರಕ್ಕೇರಿದ ಕೆಬಿಜಿ ಯವರನ್ನು ನೋಡುವ ಮೊದಲು ಮುಂಬೈನಿಂದ ಬೆಂಗಳೂರು, ಬೆಂಗಳೂರಿಂದ ಮೈಸೂರು, ಮೈಸೂರಿನ ಮೊದಲ ಹೆಜ್ಜೆಯ ಮೊದಲ ಮೈಲಿಗಲ್ಲಾಗಿ 1978ರಲ್ಲಿ ಸ್ಟಾರ್ ಆಫ್ ಮೈಸೂರ್, ಅದಾದ ಎರಡು ವರ್ಷಗಳ ನಂತರ 'ಮೈಸೂರು ಮಿತ್ರ' ಸ್ಥಾಪಿಸಿದ ಆರಂಭದ ದಿನಗಳ ಕೆ.ಬಿ.ಜಿಯವರನ್ನು ನೋಡಬೇಕು ಅವರೇ ಕಲ್ಯಾಟಂಡ ಬಿ.ಗಣಪತಿ. ಐವತ್ತು ವರ್ಷಗಳ ಅವರ ಸುದೀರ್ಘ ಜೀವನದಲ್ಲಿ ಬರವಣಿಗೆ–ಉದ್ಯಮ–ಆರ್ಥಿಕ ಹೊಡೆತಗಳು–ಸಾಮಾಜಿಕ ಜವಾಬ್ದಾರಿಗಳು, ಪತ್ರಿಕೋದ್ಯಮದ ಸ್ಪರ್ಧೆಗಳು, ಸ್ಥಳೀಯರ ಪರ–ವಿರೋಧಗಳು ಹೀಗೆ ಎಲ್ಲವನ್ನು ಏಕಾಂಗಿಯಾಗಿ ಎದುರಿಸಿ ತಲಕಾವೇರಿಯಲ್ಲಿ ಹುಟ್ಟುವ ಜಲಬುಗ್ಗೆಯೊಂದು ಮುಂದೆ ತನ್ನ ವ್ಯಾಪ್ತಿ ವಿಸ್ತಾರದ ಹರವನ್ನು ಎಲ್ಲೆಡೆ ಆಕ್ರಮಿಸಿಕೊಂಡು ವಿಕ್ರಮ ಸಾಧಿಸಿದಂತೆ ಹರಿದ ಕಾವೇರಿಯ ಹಾಗೆ ಕೆ.ಬಿ.ಜಿಯವರ ಜೀವಯಾನ.

ಹೀಗೆ ತಮ್ಮ ಜೀವಿತಾವಧಿಯ ವಿಕ್ರಮ ಸಾಧಿಸಿದ ಕೆ.ಬಿ.ಜಿ, ವಿಕ್ರಂ ಮುತ್ತಣ್ಣ, ಮಿಕ್ಕಿ ಬೋಪಣ್ಣ ಅವರಿಗೆ ಸಾರಥ್ಯ ವಹಿಸಿ ತಮ್ಮ ಮೈಲಿಗಲ್ಲಿನ ಕ್ರಮಾಂಕ ಮುಂದುವರಿಯಬೇಕೆನ್ನುವ ಸೂಚನೆ ಕೊಟ್ಟೇ ನಿರ್ಗಮಿಸಿದ್ದಾರೆ.

ಬದುಕಿದ್ದಷ್ಟೂ ದಿನ ಜೀವನ್ಮುಖಿ ಸಂದೇಶದಂತೆ ತಮ್ಮ ಬದುಕು ಬರಹಗಳನ್ನು ರೂಪಿಸಿ ಹೋದ ಜಲದ ಒರತೆ ಕಾವೇರಿ ಮಾತೆಯ ಒಡಲು ನಮ್ಮ ಕೆ.ಬಿ.ಜಿ. ಮತ್ತೆ ಕಾವೇರಿ ಮಾತೆಯ ಮಡಿಲು ಸೇರಿದ ಕೊಡಗಿನ ಕಂದ ತಾವೇ ಬರೆಯುತ್ತಿದ್ದ 'ಭೂ ಮಂತ್ರ' ಹಾಕಿದರೆ ಎದ್ದು ಬರುತ್ತಾರೇನೊ ಎಂದರೆ ಅವರ ಮುಖದಲ್ಲಿ ಅದೇ ತೇಜಸ್ಸು, ಅದೇ ಐಸಿರಿ, ಅದೇ ವೈಖರಿ, ಆಫೀಸಿಗೆ ಬರಲು ಸಿದ್ಧರಾಗಿ ನಿಂತಿದ್ದಾರೇನೋ ಎನ್ನುವ ಮುಖಭಾವದಲ್ಲೇ ಯಾವ ಸುಳಿವೂ ಕೊಡದೆ ಎದ್ದುಹೊರಟರು ನಮ್ಮ ಕೆ.ಬಿ.ಜಿಯವರು. ಅನ್ನ, ಅಕ್ಷರ, ಗೆಳೆತನದ ಪ್ರೀತಿ ಕೊಟ್ಟ ಕೆ.ಬಿ.ಜಿ ನನ್ನಂಥಾ ಅಸಂಖ್ಯಾತರ ನೂರು ನೆನಪುಗಳಲ್ಲಿ ಪ್ರತೀ ಅಕ್ಷರಗಳ ಜೀವಜಾಲಗಳಲ್ಲಿ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತಾರೆ ಏನಂತೀರಿ?

ಜಡೇಜಾ ಹೋರಾಟ ವ್ಯರ್ಥ: ಭಾರತದ ವಿರುದ್ಧ ಇಂಗ್ಲೆಂಡ್‌ಗೆ ಜಯ

ಲಾರ್ಡ್ಸ್, ಜು.14– ಐತಿಹಾಸಿಕ ಲಾರ್ಡ್ಸ್ ಅಂಗಳದಲ್ಲಿ ನಡೆದ ರೋಚಕ ಟೆಸ್ಟ್ ಪಂದ್ಯದಲ್ಲಿ ಆಲ್‌ರೌಂಡರ್ ರವೀಂದ್ರ ಜಡೇಜಾ ಹೋರಾಟ ವ್ಯರ್ಥವಾಗಿದ್ದು, ಇಂಗ್ಲೆಂಡ್ ಭಾರತದ ವಿರುದ್ಧ 22 ರನ್ ಗೆಲುವು ಸಾಧಿಸಿದೆ. ಇದರೊಂದಿಗೆ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–1 ಅಂತರದಲ್ಲಿ ಮುನ್ನಡೆ ಸಾಧಿಸಿದೆ.

ಲಾರ್ಡ್ಸ್‌ನಲ್ಲಿ ನಡೆದ 3ನೇ ಟೆಸ್ಟ್ ಪಂದ್ಯದಲ್ಲಿ 193 ರನ್‌ಗಳ ಗುರಿ ಬೆನ್ನತ್ತಿದ್ದ ಭಾರತ 4ನೇ ದಿನದ ಅಂತ್ಯಕ್ಕೆ 58 ರನ್‌ಗಳಿಗೆ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಗಿತ್ತು. ಕೊನೆ ದಿನದಾಟದಲ್ಲಿ ಭಾರತದ ಗೆಲುವಿಗೆ 135 ರನ್ ಬೇಕಿತ್ತು. ಗೆಲ್ಲುವ ಉತ್ಸಾಹದೊಂದಿಗೆ ಕಣಕ್ಕಿಳಿದಿದ್ದ ಭಾರತಕ್ಕೆ ಇಂಗ್ಲೆಂಡ್ ಬೌಲರ್‌ಗಳು ಮರ್ಮಾಘಾತ ನೀಡಿದರು. ಅಗ್ರ ಬ್ಯಾಟರ್‌ಗಳು ಕೈಕೊಟ್ಟ ಪರಿಣಾಮ ರವೀಂದ್ರ ಜಡೇಜಾ ಅಜೇಯ ಹೋರಾಟದ ಹೊರತಾಗಿಯೂ ಭಾರತ 170 ರನ್‌ಗಳಿಗೆ ಆಲೌಟ್ ಆಯಿತು.

ಉತ್ತಮ ಪ್ರದರ್ಶನ ನೀಡುವ ಭರವಸೆಯೊಂದಿಗೆ ಕಣಕ್ಕಿಳಿದಿದ್ದ ರಿಷಭ್ ಪಂತ್ 12 ಎಸೆತಗಳಲ್ಲಿ 9 ರನ್ ಗಳಿಸಿದ್ದಾಗ ಜೋಫ್ರಾ ಆರ್ಚರ್‌ಗೆ ಕ್ಲೀನ್ ಬೌಲ್ಡ್ ಆದರು. ಇದರ ಬೆನ್ನಲ್ಲೇ ಕೆ.ಎಲ್.ರಾಹುಲ್ 58 ಎಸೆತಗಳಲ್ಲಿ 39 ರನ್ ಗಳಿಸಿ ಔಟಾದರು. ಮೊದಲ ಇನ್ನಿಂಗ್ಸ್‌ನಲ್ಲಿ ಕ್ರೀಸ್‌ನಲ್ಲಿ ಭದ್ರವಾಗಿ ನಿಂತಿದ್ದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ 4 ಎಸೆತಗಳಲ್ಲಿ ಡಕ್‌ಔಟ್ ಆಗಿ ಪೆವಿಲಿಯನ್‌ಗೆ ಮರಳಿದರು.

82 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದ ಭಾರತ 100 ರನ್ ಗಳಿಸುವುದೂ ಕಷ್ಟವೆಂದೇ ಭಾವಿಸಲಾಗಿತ್ತು. ಆದರೆ ನಿತೀಶ್ ರೆಡ್ಡಿ, ರವೀಂದ್ರ ಜಡೇಜಾ ಅವರ ಸಣ್ಣ ಜೊತೆಯಾಟ ಭಾರತದ ಗೆಲುವಿನ ಭರವಸೆ ಮೂಡಿಸಿತ್ತು. ಈ ವೇಳೆ 13 ರನ್ ಗಳಿಸಿದ್ದ ನಿತೀಶ್ ರೆಡ್ಡಿ ಔಟಾದರು. ಬಳಿಕ ಕಣಕ್ಕಿಳಿದ ಬುಮ್ರಾ 5 ರನ್ ಗಳಿಸಿದರೂ ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರಿದ್ದ ಜಡೇಜಾಗೆ ಉತ್ತಮ ಸಾಥ್ ನೀಡಿದ್ದರು. ಈ ವೇಳೆ ಜಡೇಜಾ ಉತ್ತಮ ಬ್ಯಾಟಿಂಗ್ ಕೂಡ ನಡೆಸುತ್ತಿದ್ದರು. ಆದ್ರೆ 54 ಎಸೆತಗಳನ್ನು ಎದುರಿಸಿದ ಬುಮ್ರಾ ಬೆನ್‌ಸ್ಟೋಕ್ಸ್ ಬೌಲಿಂಗ್‌ನಲ್ಲಿ ಕ್ಯಾಚ್ ನೀಡಿ ಔಟಾದರು. ಬಳಿಕ ಬಂದ ಸಿರಾಜ್ (4 ರನ್) ಕೂಡ ಜಡ್ಡುಗೆ ಉತ್ತಮ ಸಾಥ್ ನೀಡಿದ್ದರು. ಆದ್ರೆ ಶೋಯೆಬ್ ಬಶೀರ್ ಅವರ ಎಸೆತ ಬ್ಯಾಟ್‌ಗೆ ತಗುಲಿ ಬಳಿಕ ಸ್ವಿಂಗ್ ಆಗಿ ವಿಕೆಟ್‌ಗೆ ತಗುಲಿತು. ಈ ವೇಳೆ ಸಿರಾಜ್ ಚೆಂಡನ್ನು ತಡೆಯಲು ಯತ್ನಿಸಿದರೂ ಸಾಧ್ಯವಾಗ ಲಿಲ್ಲ. ಕೊನೆಗೆ ಜಡ್ಡು ಹೋರಾಟವೂ ವ್ಯರ್ಥವಾಯಿತು.



ಕೊನೆವರೆಗೂ ಹೋರಾಡಿದ ಜಡೇಜಾ 181 ಎಸೆತಗಳಲ್ಲಿ 61 ರನ್ ಗಳಿಸಿದರೆ, ಕರುಣ್ ನಾಯರ್ 14, ಶುಭಮನ್ ಗಿಲ್ 6, ಆಕಾಶ್ ದೀಪ್ 1, ಜೈಸ್ವಾಲ್, ವಾಷಿಂಗ್ಟನ್ ಸುಂದರ್ ಶೂನ್ಯ ಸುತ್ತಿದರು. ಇಂಗ್ಲೆಂಡ್ ಪರ ಬೆನ್ ಸ್ಟೋಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೆಬಿಜಿ ಅವರ ನಿಧನಕ್ಕೆ ಗಣ್ಯರ ಕಂಬನಿ



ನನ್ನ ಹಾಗೂ ಕೆ.ಬಿ.ಗಣಪತಿಯವರ ಸ್ನೇಹ ನಲವತ್ತು ವರ್ಷಗಳ ಹಳೆಯದು. ನಾನು 1985-86ರಲ್ಲಿ ಕೊಡಗು ಜಿಲ್ಲಾ ಆರೋಗ್ಯಾಧಿಕಾರಿಯಾಗಿದ್ದಾಗ ಕುಟುಂಬ ಕಲ್ಯಾಣದ ಕಾರ್ಯಕ್ರಮದಲ್ಲಿ ಜಿಲ್ಲೆಗೆ ರಾಜ್ಯದಲ್ಲೇ ಪ್ರಥಮ ಸ್ಥಾನ ಸಂದಿತ್ತು. ಆಗ ಕೆಬಿಜಿ ಅವರು ವಿಶೇಷ ಸಂಚಿಕೆ ಮೂಲಕ ಪ್ರಚಾರ ನೀಡಿದ್ದರು. ಅನಂತರ 1987-92ರವರೆಗೆ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಯಾಗಿದ್ದಾಗಲೂ ಆರೋಗ್ಯ ಇಲಾಖಾ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನಿರಂತರವಾಗಿ ನೀಡಿದ್ದನ್ನು ಸ್ಮರಿಸುತ್ತೇನೆ. ಅವರೊಬ್ಬ ಸ್ನೇಹ ಜೀವಿ, ಸದಾ ಹಸನ್ಮುಖಿ ಮತ್ತು ಶಿಸ್ತು ಸುದ್ದಿ ಮಾಧ್ಯಮದ ವ್ಯಕ್ತಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಆ ದೇವರಲ್ಲಿ ಪ್ರಾರ್ಥನೆ. ಓಂ ಶಾಂತಿ. **-ಡಾ.ಡಿ.ತಿಮ್ಮಯ್ಯ, ವಿಧಾನಪರಿಷತ್ ಸದಸ್ಯರು**



ಪ್ರತಿದಿನ ಬೆಳಗ್ಗೆ ಕಾಫಿ ಕುಡಿದು 'ಮೈಸೂರು ಮಿತ್ರ', ಸಂಜೆ 'ಸ್ಟಾರ್ ಆಫ್ ಮೈಸೂರ್' ನೋಡದಿದ್ದರೆ ಸಮಾಧಾನವೇ ಆಗುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಕೆ.ಬಿ.ಗಣಪತಿ ಅವರು ಮೈಸೂರಿಗರು ಮಾತ್ರವಲ್ಲದೆ ಹಳೆ ಮೈಸೂರು ಭಾಗದ ಜನತೆಗೆ ಚಿರಪರಿಚಿತರಾಗಿದ್ದಾರೆ. ಅವರ ಅಗಲಿಕೆ ಪತ್ರಿಕಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.
-ವಿವೇಕಾನಂದ, ವಿಧಾನಪರಿಷತ್ ಸದಸ್ಯರು



ಕೆಬಿಜಿ ಅವರ ನಿಧನ ಸುದ್ದಿ ತಿಳಿದು ನನಗೆ ತುಂಬಾ ನೋವುಂಟಾಯಿತು. ನಾನು ವಿದೇಶದಲ್ಲಿ ಇರುವುದರಿಂದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ನಾವು ಒಬ್ಬ ಪ್ರಖ್ಯಾತ ಅಂಕಣಕಾರರು ಮತ್ತು ವಿದ್ವಾಂಸರನ್ನು ಕಳೆದುಕೊಂಡಿದ್ದೇವೆ. ಈ ದುಃಖಕರ ನಿಧನವನ್ನು ತಡೆದುಕೊಳ್ಳುವ ಶಕ್ತಿಯನ್ನು ದೇವರು ಅವರ ಕುಟುಂಬಸ್ಥರಿಗೆ ನೀಡಲಿ. ಅವರ ಆತ್ಮಕ್ಕೆ ಶಾಂತಿ ಸಿಗಲಿ.
-ಪ್ರೊ.ಕೆ.ಎಸ್.ರಂಗಪ್ಪ, ವಿಶ್ರಾಂತ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ



ಮೈಸೂರು ಪತ್ರಿಕೋದ್ಯಮ ಕ್ಷೇತ್ರದ ಮಿನುಗುವ ತಾರೆ. ಕೆ.ಬಿ.ಗಣಪತಿ ಅವರ ನಿಧನ ನೋವು ತಂದಿದೆ. ತಮ್ಮ ಕೆಲಸದ ಮೂಲಕ ಮೈಸೂರು ನಗರಕ್ಕೆ ಅವರು ನೀಡಿದ ಕೊಡುಗೆಗಳು ಸದಾ ಸ್ಮರಣೀಯ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ತಾಯಿ ಚಾಮುಂಡೇಶ್ವರಿ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ. **-ಸಂದೇಶ್‌ಸ್ವಾಮಿ, ಮಾಜಿ ಮೇಯರ್**



ಮೈಸೂರು ನಿರ್ಮಾತೃಗಳಲ್ಲಿ ಕೆಬಿಜಿ ಅವರು ಒಬ್ಬರಾಗಿದ್ದಾರೆ. ಅವರೊಂದಿಗೆ ಸುಮಾರು 40 ವರ್ಷಗಳ ಒಡನಾಟ. ಮೈಸೂರಿನ ಯಾವುದೇ ಸಮಸ್ಯೆಗಳು ಎದುರಾದರೂ, ಆ ಸಮಸ್ಯೆ ಹಾಗೂ ಮೈಸೂರಿನ ಅಭಿವೃದ್ಧಿ ಕುರಿತು ಮಾತನಾಡುತ್ತಿದ್ದ ಶಕ್ತಿ ಅವರು. ಇವತ್ತು ಏನಾದರೂ ಮೈಸೂರು ಅಭಿವೃದ್ಧಿ ಆಗಿದೆ ಎಂದರೆ, ಅದರಲ್ಲಿ ಕೆಬಿಜಿ ಅವರ ಪಾತ್ರ ದೊಡ್ಡದಾಗಿದೆ. ನಮ್ಮೆಲ್ಲರಿಗೂ ದೊಡ್ಡ ಶಕ್ತಿಯಾಗಿದ್ದ ಕೆಬಿಜಿ ಅವರ ನಿಧನ, ಮೈಸೂರಿನ ಒಂದು ಯುಗ ಅಂತ್ಯವಾದಂತಾಗಿದೆ.
-ಸುಧಾಕರ್ ಶೆಟ್ಟಿ, ಮಾಜಿ ಅಧ್ಯಕ್ಷರು, ಎಫ್‌ಕೆಸಿಸಿಐ



ಮೈಸೂರಿನ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ಏನಾದರೂ ತೊಂದರೆಗಳಾದ ಸಂದರ್ಭದಲ್ಲಿ ಡಾ.ಕೆ.ಬಿ.ಗಣಪತಿ ಅವರು ತಮ್ಮ ಬರಹಗಳ ಮೂಲಕ ನೆರವಿಗೆ ಬರುತ್ತಿದ್ದರು. ಈಗ ಡಾ.ಗಣಪತಿ ಅವರ ನಿಧನದಿಂದ ಮೈಸೂರು ಬಡವಾಗಿದೆ.
-ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ಚೇಂಬರ್ಸ್ & ಕಾಮರ್ಸ್



ಡಾ.ಕೆ.ಬಿ.ಗಣಪತಿ ಅವರು ಕರ್ನಾಟಕದ ಮಾಧ್ಯಮ ಕ್ಷೇತ್ರದಲ್ಲಿ ಅತ್ಯುನ್ನತ ಶಕ್ತಿಯಾಗಿ ನಿಂತವರು. ಐದು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ಅವಿರತ ದುಡಿದ ಅವರು ವಸ್ತುನಿಷ್ಠ ಹಾಗೂ ವೃತ್ತಿಪರ ಬರಹಗಳಿಗೆ ಹೆಸರುವಾಸಿಯಾಗಿದ್ದವರು. ಹಳೇ ಮೈಸೂರು ಪ್ರಾಂತ್ಯದಲ್ಲಿ ದೊಡ್ಡ ಓದುಗ ವರ್ಗವನ್ನೇ ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದರು. ಜೊತೆಗೆ ನೂರಾರು ಪತ್ರಕರ್ತರನ್ನು ಈ ನಾಡಿಗೆ ಕೊಡುಗೆ ನೀಡಿದ ಹಿರಿಮೆ ಗಣಪತಿ ಅವರಿಗೆ ಸಲ್ಲುತ್ತದೆ. ಪತ್ರಿಕೋದ್ಯಮದಲ್ಲಿ ಅವರು ಮೂಡಿಸಿರುವ ಹೆಜ್ಜೆ ಗುರುತುಗಳು ಯುವ ಪತ್ರಕರ್ತರಿಗೆ ಸ್ಫೂರ್ತಿ ಮತ್ತು ಮಾದರಿಯಾಗಲಿ. ಅವರ ಕುಟುಂಬ, ಸಹೋದ್ಯೋಗಿಗಳು ಮತ್ತು ಅವರ ಬರಹದಲ್ಲಿ ಸ್ಪಷ್ಟತೆ ಮತ್ತು ಧೈರ್ಯ ಕಂಡುಕೊಂಡ ಅಸಂಖ್ಯಾತ ಓದುಗರಿಗೆ ದುಃಖ ಭರಿಸುವ ಶಕ್ತಿ ದೊರಕಲಿ.
-ಬಿ.ಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷರು, ಕರ್ನಾಟಕ ಪ್ರದೇಶ ಕುರುಬರ ಸಂಘ



ಮೈಸೂರು ಅಭಿವೃದ್ಧಿಗೆ ಅಪಾರ ಕಾಳಜಿ ಹೊಂದಿದ್ದ ಕೆಬಿಜಿ ಅವರ ಬರವಣಿಗೆಗಳು, ಮೈಸೂರು ಅಭಿವೃದ್ಧಿಗೆ ಸಾಕಷ್ಟು ದಾರಿ ಮಾಡಿಕೊಟ್ಟಿದೆ. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನಲ್ಲಿ ಒಂದು ಸುದ್ದಿ ಪ್ರಕಟವಾದರೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿ ಕಾರ್ಯರೂಪಕ್ಕೆ ಬರ್‍ತಾ ಇತ್ತು. ಅಂತಹ ವ್ಯಕ್ತಿತ್ವವನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸುತ್ತೇನೆ.
-ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ



ಮೈಸೂರು ಪತ್ರಿಕೋದ್ಯಮದ ಭೀಷ್ಮ ಕೆ.ಬಿ.ಗಣಪತಿ ಅವರ ನಿಧನ, ನಾಡಿನ ಪತ್ರಿಕಾರಂಗ ಮಾತ್ರವಲ್ಲದೇ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ ಉಂಟು ಮಾಡಿದೆ. 1978ರಲ್ಲಿ 'ಸ್ಟಾರ್ ಆಫ್ ಮೈಸೂರ್', 1980ರಲ್ಲಿ 'ಮೈಸೂರು ಮಿತ್ರ' ಪತ್ರಿಕೆಗಳನ್ನು ಪ್ರಾರಂಭಿಸಿ, ನೂರಾರು ಪತ್ರಕರ್ತರನ್ನು ನಾಡಿಗೆ ಕೊಡುಗೆ ನೀಡಿದ ಹಿರಿಮೆ ಅವರಿಗೆ ಸಲ್ಲುತ್ತದೆ. ಭೂಮಂತ್ರ, ಅಬ್ರಕಡಬ್ರ ಅಂಕಣಗಳ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದ ಅವರು, 'ಆದರ್ಶವಾದಿ' ಕಾದಂಬರಿ, 'ಅಮೆರಿಕ- ಆಯನ್ ಏರಿಯಾ ಆಫ್ ಲೈಟ್' ಪ್ರವಾಸ ಕಥನ, ದಿ ಕ್ರಾಸ್ ಆಂಡ್ ದಿ ಕೂರ್ಗ್' ಇಂಗ್ಲಿಷ್ ಕಾದಂಬರಿ, 'ಸ್ವೋರ್ಡ್ ಆಫ್ ಶಿವಾಜಿ' ಜೀವನ ಚರಿತ್ರೆ ಶ್ರೇಷ್ಠ ಪತ್ರಕರ್ತನೊಳಗಿದ್ದ ಶ್ರೇಷ್ಠ ಬರಹಗಾರನಿಗೆ ಸಾಕ್ಷಿಯಾಗಿವೆ. ಕೆ.ಬಿ.ಗಣಪತಿ ಅವರ ಶಿಸ್ತುಬದ್ಧ ಜೀವನ ಯುವ ಜನತೆಗೆ ಮಾದರಿಯಾಗಿದೆ. **-ಕೆ.ವಿ.ಶ್ರೀಧರ್, ನಗರಪಾಲಿಕೆ ಮಾಜಿ ಸದಸ್ಯರು**



ಮೈಸೂರಿನ ಪತ್ರಿಕಾ ಪರಂಪರೆಗೆ ಗಣಪತಿ ಅವರು ಕೀರ್ತಿ ತಂದು ಕೊಟ್ಟಿದ್ದಾರೆ. ಅವರ ಪತ್ರಿಕೆಯ ಹೆಸರು ಹೇಳುವಂತೆ ಮೈಸೂರಿಗೆ ಡಾ.ಗಣಪತಿ ಅವರು 'ಸ್ಟಾರ್' ಆಗಿದ್ದರು. ಜನ್ಮಭೂಮಿ ಕೊಡಗಾದರೂ, ಕರ್ಮಭೂಮಿ ಮೈಸೂರಾಗಿತ್ತು. ಮೈಸೂರಿನ ವೃತ್ತಿ ಪರತೆಗೆ ಮಾದರಿಯಾಗಿದ್ದ ಡಾ.ಕೆ.ಬಿ.ಗಣಪತಿ ಅವರು ಬಹಳಷ್ಟು ಪತ್ರಕರ್ತರನ್ನು ಬೆಳೆಸಿದ್ದಾರೆ. **-ಕೆ.ದೀಪಕ್, ಅಧ್ಯಕ್ಷರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ**



ಹಳೇ ಮೈಸೂರು ಪ್ರಾಂತ್ಯದಲ್ಲಿ ಯಾವುದೇ ಸ್ಥಳೀಯ ಪತ್ರಿಕೆಗಳು, ಇಂಗ್ಲಿಷ್ ಪತ್ರಿಕೆಗಳು ಇಲ್ಲದಂತಹ ಸಂದರ್ಭದಲ್ಲಿ ಬಹಳಷ್ಟು ಶ್ರಮವಹಿಸಿ, ಏಳುಬೀಳುಗಳನ್ನು ಕಂಡು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳನ್ನು ಸ್ಥಾಪಿಸಿ, ಯಶಸ್ವಿಯಾಗಿ ಮುನ್ನಡೆಸಿದ ಕೆ.ಬಿ.ಗಣಪತಿ ಅವರು, ಸತ್ಯ ನಿಷ್ಠೂರವಾದ ವಿಷಯಗಳನ್ನು ಯಾವುದೇ ಮುಲಾಜಿಗೆ ಒಳಗಾಗದೆ ಓದುಗರಿಗೆ ನೀಡಿದ್ದಾರೆ. ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಶಕ್ತಿಗಳ ಬಗ್ಗೆ ಜನರನ್ನು ಎಚ್ಚರಿಸುವುದರ ಜೊತೆಗೆ ಸರ್ಕಾರದ ಆಡಳಿತದ ವೈಖರಿ ಜನವಿರೋಧಿ ಎನಿಸಿದಾಗ ನೇರ-ನಿಷ್ಠೂರವಾಗಿ ಖಂಡಿಸುತ್ತಿದ್ದರು. ಒಂದಿಲ್ಲೊಂದು ರೀತಿಯಲ್ಲಿ ಶೋಷಿತ ಸಮುದಾಯಗಳ ಪರ ನಿಲ್ಲುತ್ತಿದ್ದರು. ನಿಜವಾದ ಪತ್ರಿಕಾ ಧರ್ಮದ ಮೂಲಕ ಮೈಸೂರಿಗರಿಗೆ ಮಿತ್ರರೇ ಆಗಿದ್ದ ಕೆ.ಬಿ. ಗಣಪತಿ ಅವರ ಅಗಲಿಕೆ, ಸಮಾಜಕ್ಕೆ ತುಂಬಲಾಗದ ನಷ್ಟ ಉಂಟು ಮಾಡಿದೆ.
-ಎನ್.ಆರ್.ನಾಗೇಶ್, ಅಧ್ಯಕ್ಷರು, ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗ

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರ ನಿಧನದ ಸುದ್ದಿ ನಾಡಿಗೆ, ಮೈಸೂರಿಗೆ ನೋವಿನ ಸಂಗತಿ. ಅವರು 50 ವರ್ಷಗಳ ಕಾಲ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿ ಮೇರು ಶಿಖರವಾಗಿದ್ದರು. 1980ರ ದಶಕದಲ್ಲಿ ಮೈಸೂರು ನಗರದಲ್ಲಿ ಯುವ ಲೇಖಕರು, ಕಲೆ ಮತ್ತು ಸಂಸ್ಕೃತಿಗೆ ಅತೀ ಹೆಚ್ಚು ಪ್ರೋತ್ಸಾಹ ನೀಡಿದ್ದರು. ಅವರು ದೇಶದ ಅತ್ಯುತ್ತಮ ಪತ್ರಕರ್ತರಲ್ಲಿ ಒಬ್ಬರಾಗಿದ್ದು, ಧೈರ್ಯವಂತ ಮತ್ತು ಪರಿಣಾಮಕಾರಿಯಾದ ಬರವಣಿಗೆಯ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತರಾಗಿದ್ದರು. ಕೆಬಿಜಿ ಅವರನ್ನು ಬಹುತೇಕ ಓದುಗರು ಸ್ನೇಹಭಾವದಿಂದ 'ಸ್ಟಾರ್ ಆಫ್ ಮೈಸೂರ್ ಮ್ಯಾನ್' ಎಂದು ಕರೆಯುತ್ತಿದ್ದರು. ಈ ಪದಗಳು ಅವರ ವ್ಯಕ್ತಿತ್ವ ಮತ್ತು ಕೊಡುಗೆಗೆ ಸಾಕ್ಷಿಯಾಗಿವೆ. ಇಂದು ನಾವು ನಿಜವಾದ ಸ್ಟಾರ್ ಆಫ್ ಮೈಸೂರ್ (ಕೆಬಿಜಿ) ಅನ್ನು ಕಳೆದುಕೊಂಡಿದ್ದೇವೆ. ಪರಮಾತ್ಮ ಅವರ ಆತ್ಮಕ್ಕೆ ಸದ್ಗತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.
-ಡಾ.ಎಸ್.ಟಿ.ರಾಮಚಂದ್ರ, ಜನರಲ್ ಮ್ಯಾನೇಜರ್(ನಿ), ಕೆನರಾ ಬ್ಯಾಂಕ್

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಗಣಪತಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಕೆಬಿಜಿಗೆ ಕೊಡಗು ಜನ್ಮಭೂಮಿ; ಮೈಸೂರು ಕರ್ಮಭೂಮಿ: ಜಿಟಿಡಿ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಪತ್ರಕರ್ತರ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಡಾ.ಕೆ.ಬಿ.ಗಣಪತಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರು ಕೆಬಿಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವುದು.

ಮೈಸೂರು,ಜು.14(ಎಂಟಿವೈ)- ಭಾನುವಾರ ನಿಧನರಾದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಬೆಳಗ್ಗೆ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮೈಸೂರಿನ ಪ್ರಮುಖ ರಾಜಕಾರಣಿಗಳು, ಕೆಬಿಜಿ ಅವರ ಹಿತೈಷಿಗಳು ಹಾಗೂ ಹಿರಿಯ ಮತ್ತು ಕಿರಿಯ ಪತ್ರಕರ್ತರು ಪಾಲ್ಗೊಂಡು, ನಮ್ಮನ್ನಗಲಿರುವ ಡಾ.ಕೆ.ಬಿ.ಗಣಪತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಸಮರ್ಪಿಸಿದರು.

ಕೆಬಿಜಿಗೆ ಕೊಡಗು ಜನ್ಮಭೂಮಿ, ಮೈಸೂರು ಕರ್ಮಭೂಮಿ: ಕೆಬಿಜಿ ಅವರ ಸಂತಾಪ ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಡಾ.ಕೆ.ಬಿ.ಗಣಪತಿ ಅವರಿಂದ ನಾನು ಪ್ರೇರಣೆ, ಸ್ಫೂರ್ತಿ ಪಡೆದಿದ್ದೇನೆ. 1978ರಲ್ಲಿ 'ಸ್ಟಾರ್ ಆಫ್ ಮೈಸೂರ್', 1980ರಲ್ಲಿ 'ಮೈಸೂರು ಮಿತ್ರ' ಪತ್ರಿಕೆಯನ್ನು ಆರಂಭಿಸಿದ ಅವರು ಸುದೀರ್ಘ 4 ದಶಕಗಳಿಂದ ಪತ್ರಿಕೋದ್ಯಮವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ. ಪ್ರತಿಯೊಬ್ಬರನ್ನು ನೇರವಾಗಿ ಪ್ರಶ್ನೆ ಮಾಡುತ್ತಿದ್ದ ಅವರು, ಒಳ್ಳೆಯ ಕೆಲಸ ಮಾಡಿದಾಗ ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು. ನನ್ನನ್ನೂ ಒಳಗೊಂಡಂತೆ ಮೈಸೂರು ಭಾಗದ ರಾಜಕಾರಣಿಗಳು ಕೆಬಿಜಿ ಅವರಿಗೆ ಸದಾ ಚಿರಋಣಿ, ಕೃತಜ್ಞರಾಗಿದ್ದೇವೆ. ನಮಗೆ ಸದಾ ಮಾರ್ಗದರ್ಶನ ಮಾಡುತ್ತಿದ್ದ ಅವರು, ಪ್ರೇರಣೆ ನೀಡಿ ಶಕ್ತಿ ತುಂಬಿದ್ದಾರೆ ಎಂದರು.

ಮಾಜಿ ಶಾಸಕ ದಿ.ಹೆಚ್.ಎಸ್.ಶಂಕರಲಿಂಗೇಗೌಡರು ಎತ್ತರಕ್ಕೆ ಬೆಳೆಯಲು 'ಮೈಸೂರು ಮಿತ್ರ' ಪತ್ರಿಕೆ ಕಾರಣ. ಕೆ.ಬಿ.ಗಣಪತಿ ಅವರ ಶಿಷ್ಯನಂತೆ ಶಂಕರಲಿಂಗೇಗೌಡ ಇದ್ದರು. ಭಾರತೀಯ ವಿದ್ಯಾಭವನದ ಅಧ್ಯಕ್ಷರಾಗಿದ್ದ ಕೆಬಿಜಿ ಅವರು ಇಲವಾಲದಲ್ಲಿ ಬಿವಿಬಿ ಸಂಸ್ಥೆಯ ಶಾಲೆ ತೆರೆದು, ಆ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಉತ್ಸುಕರಾಗಿದ್ದರು. ಕೆಬಿಜಿ ಅವರ ನಿಧನದಿಂದಾಗಿ ಮೈಸೂರು, ಕರ್ನಾಟಕ ಮಾತ್ರವಲ್ಲದೆ, ದೇಶವೇ ಹೆಮ್ಮೆಯ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ. ಕೆಬಿಜಿ ಅವರಿಗೆ ಕೊಡಗು ಜನ್ಮಭೂಮಿಯಾಗಿದ್ದರೆ, ಮೈಸೂರು ಅವರ ಕರ್ಮಭೂಮಿಯಾಗಿತ್ತು. ಆ ಕಾರಣದಿಂದಲೇ ಇಲ್ಲಿಯೇ ಅವರ ಅಂತ್ಯಕ್ರಿಯೆ ನೆರವೇರಿದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ ಎಂದರು.

ಆಕರ್ಷಿಸುತ್ತಿದ್ದ 'ಮೈಸೂರು ಮಿತ್ರ': ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಮಾತನಾಡಿ, ನಾನು ಹಾಗೂ ಕೆ.ಬಿ. ಗಣಪತಿ ಅವರು ಸಮಕಾಲೀನರು. ನಾನು ರಾಜಕೀಯ ಕ್ಷೇತ್ರದಲ್ಲಿದ್ದರೆ, ಕೆಬಿಜಿ ಪ್ರತಿಕಾ ರಂಗದ ಮೂಲಕ ಸಮಾಜ ಸೇವೆ ಮಾಡುತ್ತಿದ್ದರು. ಮೈಸೂರು ಸಣ್ಣಪತ್ರಿಕೆಗಳ ತವರೂರು. ಚಿಕ್ಕಗಡಿಯಾರ ವೃತ್ತದ ಬಳಿ ಹೋಗಿ ಆ ಕಾಲದಲ್ಲಿ ಸಿಗುತ್ತಿದ್ದ 3 ಕಾಸಿನ ಪತ್ರಿಕೆಯನ್ನು ಕೊಂಡುಕೊಂಡರೆ ದೇಶದ ವಿದ್ಯಮಾನಗಳೆಲ್ಲ ತಿಳಿಯುತ್ತಿತ್ತು. ಕೆಬಿಜಿ ಅವರ 'ಮೈಸೂರು ಮಿತ್ರ' ಪತ್ರಿಕೆ ನಮ್ಮೆಲ್ಲರನ್ನು ಆಕರ್ಷಿಸಿತ್ತು ಎಂದರು.

ಪತ್ರಿಕೆ ನಡೆಸುವವರು ಸಮಾಜಮುಖಿಯಾಗಿದ್ದರೆ, ಸಮಾಜವನ್ನು ನಿಯಂತ್ರಿಸಬಹುದು ಎನ್ನುವುದನ್ನು ತೋರಿಸಿ ಕೊಟ್ಟರು. ಅವರು ರಾಜಕಾರಣಿಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ನಾವೇನಾದರೂ ತಪ್ಪು ಮಾಡಿದರೆ ಎಲ್ಲಿ ಬೆಳಗ್ಗೆ ಪತ್ರಿಕೆಗಳಲ್ಲಿ ಸುದ್ದಿ ಬರುತ್ತದೋ ಎಂಬ ಭಯ ರಾಜಕಾರಣಿಗಳಲ್ಲಿತ್ತು. ಪರಿಸರ ಸಂರಕ್ಷಣೆ, ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು ಎಂದರು.

ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ: ವಕೀಲ ಎಸ್.ಅರುಣ್‌ಕುಮಾರ್ ಮಾತನಾಡಿ, ಕೆಬಿಜಿ ಅವರು ಯಾವುದೇ ಒಂದು ಧರ್ಮ, ಜಾತಿಗೆ ಸೀಮಿತವಾಗಿರದೆ, 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯನ್ನು ಕಟ್ಟಿ ಬೆಳೆಸಿದರು. ಆದರೆ, ಈ ಪತ್ರಿಕೆಗಳನ್ನು ಹೆಚ್ಚಾಗಿ ಮುಸ್ಲಿಂ ಹಾಗೂ ಕ್ರೈಸ್ತರು ಓದುತ್ತಿದ್ದಾರೆ. ಹಿಂದುಗಳು ಕಡಿಮೆ ಸಂಖ್ಯೆಯಲ್ಲಿ ಓದುತ್ತಾರೆ ಎಂಬ ನೋವು ಅವರಲ್ಲಿತ್ತು. ಆದರೆ, ಕೆಬಿಜಿ ಅವರು ಎಂದಿಗೂ ಧರ್ಮ, ಜಾತಿಗೆ ಸೀಮಿತವಾದವರಲ್ಲ. ಎಲ್ಲಾ ಜಾತಿ, ಧರ್ಮದವರನ್ನು ಒಂದುಗೂಡಿಸುವಂತೆ ಪತ್ರಿಕೆ ಮುನ್ನಡೆಸಿದರು. ಈ ವಿಚಾರದಲ್ಲಿ ಯಾರೂ ಅವರನ್ನು ಬೆರಳು ತೋರಿಸಿ ಮಾತನಾಡುವಂತೆ ಮಾಡಲಿಲ್ಲ. ಸುದ್ದಿ ವಿಚಾರದಲ್ಲಿ ಬ್ಯಾಲೆನ್ಸ್ಡ್ ಆಗಿ ನೋಡಿಕೊಂಡರು. ಇಂದು ನಾನು ಏನೇ ಸಾಧನೆ ಮಾಡಿದ್ದರೂ ಅದಕ್ಕೆ ಕೆಬಿಜಿ ಅವರು ನೀಡಿದ ನೆರವು ಕಾರಣ ಎಂದು ಸ್ಮರಿಸಿದರು.

ವಸ್ತುನಿಷ್ಠ ವರದಿಗೆ ಹೆಸರು: ಕೆಬಿಜಿ ಅವರ ಒಡನಾಡಿ, ಅರುಣಾಚಲ ಪ್ರದೇಶದ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮಾತನಾಡಿ, ನನಗೂ ಕೆಬಿಜಿ ಅವರಿಗೂ ನಾಲ್ಕು ದಶಕದ ಒಡನಾಟ. ಎರಡೂ ಪತ್ರಿಕೆಗಳಿಂದ 120 ಸಿಬ್ಬಂದಿಗಳಿರುವ ಸಂಸ್ಥೆಯನ್ನು ಮುನ್ನಡೆಸುತ್ತಿದ್ದರು. ಎಲ್ಲವನ್ನೂ ಪ್ರಶ್ನೆ ಮಾಡುವ ಗಟ್ಟಿ ವ್ಯಕ್ತಿತ್ವ ಅವರದ್ದಾಗಿತ್ತು. 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ರಾಜ್ಯ ಸರ್ಕಾರದಿಂದ ಜಾಹೀರಾತು ಬರುತ್ತಿಲ್ಲ. ಲಕ್ಷಾಂತರ ರೂ. ಮೌಲ್ಯದ ಜಾಹೀರಾತು ಸ್ಥಗಿತಗೊಳಿಸಲಾಗಿದೆ. ಆದರೂ, ಕೆಬಿಜಿ ಅವರು ತಾರತಮ್ಯ ಮಾಡದೇ ಸರ್ಕಾರದ ಸುದ್ದಿ ನಿಲ್ಲಿಸದೇ ಪ್ರಕಟಿಸುವ ವಿಶಾಲ ಮನೋಭಾವ ಪ್ರದರ್ಶಿಸಿದ್ದಾರೆ. ನೇರ, ನಿಷ್ಠುರವಾದಿಯಾಗಿ ಬರೆಯುತ್ತಿದ್ದ ಅವರು, ಕೇವಲ ಪತ್ರಿಕೆ ನಡೆಸದೇ, ವಿವಿಧ ಸಂದರ್ಭದಲ್ಲಿ ಸಮಾಜ ಸೇವೆಗಾಗಿ ಪತ್ರಿಕೆ ಮೂಲಕ ಚಂದಾ ಸಂಗ್ರಹಿಸುವ ಮಹತ್ಕಾರ್ಯವನ್ನು ಮಾಡಿದ್ದಾರೆ. ಕೆ.ಬಿ.ಗಣಪತಿ ನಿಜಕ್ಕೂ 'ರಿಯಲ್ ಸ್ಟಾರ್' ಎಂದು ಗುಣಗಾನ ಮಾಡಿದರು.

> “ ಡಾ.ಕೆ.ಬಿ.ಗಣಪತಿ ಅವರು ಜ್ಞಾನವಂತರಾಗಿದ್ದು, ಶಿಸ್ತು, ತ್ಯಾಗದ ಪ್ರತೀಕ. ಅವರು ಒಮ್ಮೊಮ್ಮೆ ಕಠಿಣವಾಗಿರುವಂತೆ ಕಂಡರು ಮನಸ್ಸು ಮಾತ್ರ ಮೃದು ಸ್ವಭಾವವುಳ್ಳರಾಗಿದ್ದರು. ಪ್ರಧಾನಿ ಮೋದಿ ಅವರನ್ನು ಹೆಚ್ಚಾಗಿ ಹೊಗಳುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟೀಕಿಸುತ್ತಿದ್ದರು. ಹಲವು ಬಾರಿ ಪ್ರಶಂಸೆ ವ್ಯಕ್ತಪಡಿಸಿದ್ದರು. ಕುರುಬಾರಹಳ್ಳಿ ಸರ್ವೆ ನಂ.4ರ ಸಮಸ್ಯೆ ಬಗೆಹರಿಯಲು ಕೆಬಿಜಿ ಅವರೇ ಕಾರಣ. ಮೈಸೂರು ನಗರವನ್ನು ಯೋಜನಾಬದ್ಧವಾಗಿ ಸರ್ವತೋಮುಖ ಅಭಿವೃದ್ಧಿ ಮಾಡಬೇಕೆಂದು ಸದಾ ಯೋಚಿಸುತ್ತಿದ್ದರು. ಯುವ ಪತ್ರಕರ್ತರು ಕೆಬಿಜಿ ಅವರ ಕಾರ್ಯವೈಖರಿಯನ್ನು ಸ್ಫೂರ್ತಿಯಾಗಿ ಸ್ವೀಕರಿಸಬೇಕು. **-ಜಿ.ಟಿ.ದೇವೇಗೌಡ**

> “ 2012ರಲ್ಲಿ ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿ ನನ್ನನ್ನು ಅಧ್ಯಕ್ಷರನ್ನಾಗಿ ನೇಮಿಸಿದಾಗ, ಕೆಬಿಜಿ ದೇವಾಲಯಗಳನ್ನು ಮುಜರಾಯಿ ಇಲಾಖೆಗಿಂತ ಪ್ರಾಧಿಕಾರದ ಮೂಲಕ ಹೆಚ್ಚಾಗಿ ಅಭಿವೃದ್ಧಿ ಮಾಡಬಹುದು ಎಂದು ಹೇಳಿದ್ದರು. ಆ ಕಾರಣದಿಂದಲೇ ಸಮಾನ ಮನಸ್ಕರನ್ನು ಕಚೇರಿಗೆ ಆಹ್ವಾನಿಸಿ, ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಕ್ರಿಯೆ ಆರಂಭಿಸಿದ್ದರು. ಅವರ ಕನಸಿನ ಫಲವಾಗಿ ಚಾಮುಂಡೇಶ್ವರಿ ಕ್ಷೇತ್ರಭಿವೃದ್ಧಿ ಪ್ರಾಧಿಕಾರ ರಚನೆಯಾಗಿದೆ. ಪ್ರಸಾದ ಯೋಜನೆಯಡಿ ಬೆಟ್ಟದ ಅಭಿವೃದ್ಧಿಗೆ ಹಣ ಬಂದಿದೆ. **-ಡಿ.ಮಾದೇಗೌಡ**

18ರ ಕ್ರಿಯಾಶೀಲತೆ: ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಮಾತನಾಡಿ, ಕೆ.ಬಿ.ಗಣಪತಿ ಅವರಿಗೆ 85 ವರ್ಷವಾಗಿದ್ದರೂ, ಅವರಲ್ಲಿ 18ನೇ ವಯಸ್ಸಿನವರಂತೆ ಕ್ರಿಯಾಶೀಲರಾಗಿದ್ದರು. ದಿನದ 24 ಗಂಟೆಯೂ ಪತ್ರಿಕೋದ್ಯಮದ ಬಗ್ಗೆ ಯೋಚಿಸುತ್ತಿದ್ದರು. 24x7 ಪತ್ರಕರ್ತರಾಗಿದ್ದರು. ಅಚ್ಚುಕಟ್ಟಾದ ಜೀವನ ನಡೆಸುತ್ತಿದ್ದರು. ಸಮಾಜಮುಖಿಯಾಗಿ ಚಿಂತಿಸುತ್ತಿದ್ದ ಅವರು, ಯಾರನ್ನೂ ದ್ವೇಷಿಸುತ್ತಿರಲಿಲ್ಲ. ನಾನು ಅನುಭವಿಸಿದ ವೈಫಲ್ಯಗಳಿಗೆಲ್ಲಾ ಕೆಬಿಜಿ ನೋವುಂಟು ಮಾಡಿಕೊಳ್ಳುತ್ತಿದ್ದರು ಎಂದರು.

ಶಿಸ್ತಿನ ವ್ಯವಸ್ಥೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಪತ್ರಿಕೋದ್ಯಮದಲ್ಲಿ ವೃತ್ತಿಪರತೆ ಎತ್ತಿ ಹಿಡಿಯುವ ಮೂಲಕ ಶಿಸ್ತಿನ ವ್ಯವಸ್ಥೆ ಮಾಡಿದ ಕೀರ್ತಿ ಡಾ.ಕೆ.ಬಿ.ಗಣಪತಿ ಅವರಿಗೆ ಸಲ್ಲುತ್ತದೆ. ಸಣ್ಣ ಪತ್ರಿಕೆಗಳಲ್ಲಿ ಸಿಬ್ಬಂದಿಗಳಿಗೆ ವೇತನ ಸರಿಯಾಗಿ ನೀಡುವುದಿಲ್ಲ ಎಂಬ ಆರೋಪದ ನಡುವೆ ಕೆಬಿಜಿ ಅವರು ನಿರ್ದಿಷ್ಟ ದಿನಾಂಕದಂದು ಎಲ್ಲಾ ಸಿಬ್ಬಂದಿಗಳಿಗೂ ಕಡ್ಡಾಯವಾಗಿ ವೇತನ ನೀಡುವುದು, ಆರೋಗ್ಯ ಸೇವೆ ಸೇರಿದಂತೆ ಇನ್ನಿತರ ವ್ಯವಸ್ಥೆ ನೀಡುವ ಮೂಲಕ ಕಾರ್ಪೋರೇಟ್ ವ್ಯವಸ್ಥೆಯನ್ನು ತಮ್ಮ ಸಂಸ್ಥೆಯಲ್ಲಿ ಜಾರಿಗೊಳಿಸಿದ್ದಾರೆ. ಅವರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾಗಿದ್ದರೆ, ಸಂಘವನ್ನು ದೊಡ್ಡಮಟ್ಟಕ್ಕೆ ಕೊಂಡೊಯ್ಯುತ್ತಿದ್ದರು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಸುಯೋಗ್ ಆಸ್ಪತ್ರೆಯ ಮುಖ್ಯಸ್ಥ ಡಾ.ಎಸ್.ಪಿ. ಯೋಗಣ್ಣ, ಪಿಂಜರಾಪೋಲ್ ಸೊಸೈಟಿ ಮುಖ್ಯಸ್ಥ ಎಸ್.ಕೆ. ಮಿತ್ತಲ್, ಛಾಯಾಗ್ರಾಹಕ ಪ್ರಗತಿ ಗೋಪಾಲಕೃಷ್ಣ, ಹಿರಿಯ ಪತ್ರಕರ್ತ ಟಿ.ಗುರುರಾಜ್, ಪತ್ರಕರ್ತ ದೊಡ್ಡಹುಂಡಿ ರಾಜಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ರಾಜ್ಯ ವಕ್ತಾರ ಹೆಚ್.ಎ.ವೆಂಕಟೇಶ್, ಮುಖಂಡ ವಿಕ್ರಾಂತ್ ಪಿ.ದೇವೇಗೌಡ, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ಉಪಾಧ್ಯಕ್ಷ ರವಿ ಪಾಂಡವಪುರ, ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಟಿ.ಯೋಗೇಶ್‌ಕುಮಾರ್, ಕವಿತಾ, ಸೋಮಶೇಖರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೆಬಿಜಿ, ಸರೋಜಾದೇವಿಯವರಿಗೆ ಶ್ರದ್ಧಾಂಜಲಿ



ಮೈಸೂರು ಕನ್ನಡ ವೇದಿಕೆ ವತಿಯಿಂದ ಅಗ್ರಹಾರ ವೃತ್ತದಲ್ಲಿ ಹಿರಿಯ ಪತ್ರಕರ್ತ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಮತ್ತು ಹಿರಿಯ ನಟಿ ಬಿ.ಸರೋಜಾದೇವಿ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್ ಬಾಬು, ಹರೀಶ್, ಗೋಪಿ, ಮನೋಹರ್, ಕಾವೇರಮ್ಮ, ಸ್ವಾಮಿ, ಗೋವಿಂದ್‌ರಾಜ್, ನಾಗರಾಜ್ ಮಹದೇವಸ್ವಾಮಿ, ಲತಾ ಮೋಹನ್ ಮತ್ತಿತರರಿದ್ದರು.



ಮೈಸೂರಿನ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಶ್ರೀನಿವಾಸ್ ಅವರಿಂದ ಕೆಬಿಜಿ ಅವರಿಗೆ ಅಂತಿಮ ನಮನ.



ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಅವರಿಂದ ಗಣಪತಿಯವರ ಅಂತಿನ ದರ್ಶನ.



ಎಂಜಿಪಿಯ ಭಾಮಿಶೆಣೈ ಅವರಿಂದ ಅಂತಿಮ ನಮನ.



ಕೆಬಿಜಿಯವರ ಅಂತಿಮ ದರ್ಶನ ಪಡೆದ ಖ್ಯಾತ ಇತಿಹಾಸಕಾರ ಎ.ವಿ.ನರಸಿಂಹ ಮೂರ್ತಿ, ಭಾರತೀಯ ವಿದ್ಯಾ ಭವನ ಮೈಸೂರು ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ.



ಅಂಕಣಕಾರ ಬನ್ನೂರು ಕೆ.ರಾಜು ಅವರಿಂದ ಗಣಪತಿಯವರಿಗೆ ಅಂತಿಮ ನಮನ.



ಬಿಜೆಪಿ ಹಿರಿಯ ಮುಖಂಡರಾದ ಬಿ.ಪಿ.ಮಂಜುನಾಥ್‌ರಿಂದ ನಮನ.



ವಿದ್ಯಾವರ್ಧಕ ವಿದ್ಯಾಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡ ಮತ್ತು ಕಾರ್ಯದರ್ಶಿ ಪಿ.ವಿಶ್ವನಾಥ್ ಅವರಿಂದ ಕೆಬಿಜಿ ಅಂತಿಮ ದರ್ಶನ.



ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಶನ್ ಮುಖ್ಯಸ್ಥ ರಾಜ್‌ಕುಮಾರ್ ದೇವರಾಜ ಅರಸ್ ಅವರು ಅಂತಿಮ ದರ್ಶನ ಪಡೆಯುತ್ತಿರುವುದು.

ಕಸಾಪ ಸಮ್ಮೇಳನದಲ್ಲಿ ಭ್ರಷ್ಟಾಚಾರ: ಉನ್ನತ ತನಿಖೆಗೆ ಒತ್ತಾಯ

ಮಂಡ್ಯ, ಜು.14– ಕಳೆದ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದು, ಈ ಸಂಬಂಧ ಉನ್ನತ ತನಿಖೆ ನಡೆಸಬೇಕು ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ಆಗ್ರಹಿಸಿದರು.

ಸೋಮವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಕಣ್ಣಿಗೆ ಕಾಣಿಸುತ್ತಿದೆ. ಅದರಲ್ಲೂ ವೇದಿಕೆ ಸಮಿತಿಗಾಗಿ 8.45 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿತ್ತು. ಆದರೆ ಅಲ್ಲಿ ಖರ್ಚಾಗಿರುವುದು ಕೇವಲ 3.50 ಕೋಟಿ ರೂ. ಮಾತ್ರ. ಶಾಲು, ಹಣ್ಣಿನ ಬುಟ್ಟಿ, ನೆನಪಿನ ಕಾಣಿಕೆಗೆ ವ್ಯಾಪಕ ಹಣ ವ್ಯಯಿಸಿರುವುದಾಗಿ ಲೆಕ್ಕದಲ್ಲಿ ತೋರಿಸಲಾಗಿದೆ ಎಂದು ಆರೋಪಿಸಿದರು.

ಒಂದು ನೆನಪಿನ ಕಾಣಿಕೆಗೆ 31 ಸಾವಿರ ರೂ., ಒಂದು ಶಾಲು, ಹಣ್ಣಿನ ಬುಟ್ಟಿಗೆ 2 ಸಾವಿರ ರೂ. ವ್ಯಯಿಸಿರುವುದಾಗಿ ತೋರಿಸಲಾಗಿದೆ. ಆದರೆ ಹಣ್ಣಿನ ಬುಟ್ಟಿ ಹಾಗೂ ಶಾಲು 500 ರೂ., ನೆನಪಿನ ಕಾಣಿಕೆಗಾಗಿ 8 ರಿಂದ 10 ಸಾವಿರ ಖರ್ಚು ಮಾಡಿರುವುದು ಇಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಕಿಡಿಕಾರಿದರು.

ಕೇವಲ ವೇದಿಕೆ ಸಮಿತಿಯಲ್ಲೇ ಇಷ್ಟೊಂದು ಭ್ರಷ್ಟಾಚಾರ ನಡೆದಿದೆ ಎನ್ನುವುದಾದರೆ, ವಸತಿ, ಸಾರಿಗೆ, ಊಟ, ಪುಸ್ತಕ ಮಳಿಗೆ ಇನ್ನಿತರೆ ಸಮಿತಿಗಳಲ್ಲಿ ಇನ್ನೆಷ್ಟು ಭ್ರಷ್ಟಾಚಾರ ನಡೆದಿರಬಹುದು ಎಂದು ಪ್ರಶ್ನಿಸಿದರು.

ಸಮ್ಮೇಳನಕ್ಕೆ ಸರ್ಕಾರ 30 ಕೋಟಿ ಬಿಡುಗಡೆ ಮಾಡಿತ್ತು. ಸಂಘ–ಸಂಸ್ಥೆಗಳು, ಉದ್ಯಮಿಗಳು ಲೆಕ್ಕವಿಲ್ಲದಷ್ಟು ದೇಣಿಗೆ ನೀಡಿದ್ದಾರೆ. ಉದ್ಯಮಿ ಅಮರಾವತಿ ಚಂದ್ರಶೇಖರ್ ಉಚಿತವಾಗಿ ಜಾಗ ನೀಡಿದ್ದಾರೆ. ಆದರೆ 15 ರಿಂದ 16 ಕೋಟಿಯಲ್ಲಿ ಮುಗಿಯಬಹುದಾದ ಸಮ್ಮೇಳನಕ್ಕೆ 30 ಕೋಟಿ ರೂ. ಅಧಿಕ ಹಣ ತೋರಿಸಿ ವ್ಯಾಪಕ ಭ್ರಷ್ಟಾಚಾರ ಮಾಡಿದ್ದಾರೆ ಎಂದು ದೂರಿದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಅನ್ನದಾನಿ ಮಾತನಾಡಿದರು.

ಮಳವಳ್ಳಿ ಕಡೇ ಭಾಗಕ್ಕೆ ನೀರು ಕೊಡಿ

ಕೆಆರ್‌ಎಸ್ ಈಗಾಗಲೇ ಭರ್ತಿಯಾಗಿ ತಿಂಗಳು ಕಳೆಯುತ್ತಿದೆ. ಜೊತೆಗೆ ಕಳೆದ ಕೆಲ ದಿನಗಳಿಂದ ನಾಲೆಗಳಿಗೆ ನೀರನ್ನು ಹರಿಸಲಾಗುತ್ತಿದೆ. ಆದರೆ ಇದುವರೆಗೂ ಮಳವಳ್ಳಿ ಕಡೇ ಭಾಗಕ್ಕೆ ನೀರು ಸಿಕ್ಕಿಲ್ಲ. ಡ್ಯಾಂ ಭರ್ತಿಯಾಗಿ ಹಲವಾರು ವರ್ಷಗಳೇ ಕಳೆದರೂ ಸರ್ಕಾರ ನಾಲಾ ಆಧುನೀಕರಣ ಕಾಮಗಾರಿ ನೆಪ ಹೇಳಿಕೊಂಡು ನೀರು ಬಿಟ್ಟಿಲ್ಲ. ಡ್ಯಾಂನಲ್ಲಿ ನೀರಿದೆ ಎಂದರೆ ತಮಿಳುನಾಡಿನವರು ನೀರಿಗಾಗಿ ಬೇಡಿಕೆ ಇಡುತ್ತಾರೆ. ಮೊದಲು ನಮ್ಮ ನಾಲೆಗಳಿಗೆ ನೀರು ಹರಿಸಬೇಕು ಎಂದು ಅನ್ನದಾನಿ ಒತ್ತಾಯಿಸಿದರು.

ವೇದಿಕೆ ಸಮಿತಿ ಅಧ್ಯಕ್ಷ, ಶಾಸಕ ಪಿ.ಎಂ.ನರೇಂದ್ರಸ್ವಾಮಿ ಸಮ್ಮೇಳನದಲ್ಲಿ ವ್ಯಾಪಕ ಭ್ರಷ್ಟಾಚಾರ ಎಸಗಿದ್ದಾರೆ. ಕನ್ನಡದ ಕಾರ್ಯಕ್ರಮಗಳಿಗೆ ಇಷ್ಟೊಂದು ಹಣ ಲೂಟಿ ಮಾಡಿರುವ ಇವರು, ಇನ್ನೂ ಮಳವಳ್ಳಿ ತಾಲೂಕಿನ ವಿವಿಧ ಕಾಮಗಾರಿಗಳ ಹೆಸರಲ್ಲಿ ಇನ್ನೆಷ್ಟು ಕೋಟಿ ರೂ. ಲೂಟಿ ಹೊಡೆಯು ತ್ತಿರಬಹುದು. ಸಮ್ಮೇಳನದ ಹೆಸರಲ್ಲಿ ಭ್ರಷ್ಟಾಚಾರ ಎಸಗಿರುವ ಶಾಸಕ ನರೇಂದ್ರಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ನಾನು ಈ ಪ್ರಕರಣವನ್ನು ಇಲ್ಲಿಗೆ ಬಿಡುವುದಿಲ್ಲ. ಜೊತೆಗೆ ಜಿಲ್ಲಾಧಿಕಾರಿ ಸಮ್ಮೇಳನದ ಕೋಶಾಧ್ಯಕ್ಷರಾಗಿದ್ದರು. ಆದ್ದರಿಂದ ಈ ಪ್ರಕರಣದಲ್ಲಿ ಅವರದ್ದೂ ಪಾಲಿದ್ದರೂ ಅಚ್ಚರಿ ಇಲ್ಲ. ಹೀಗಾಗಿ ರಾಜ್ಯ, ಕೇಂದ್ರ ಸರ್ಕಾರ ಹಾಗೂ ಲೋಕಾಯುಕ್ತರಿಗೆ ದೂರು ನೀಡಲಾಗುವುದು ಎಂದರು.

ಐಶ್ವರ್ಯ ಬಂಧನ ಹಿಂದೆ ನನ್ನ ಹೋರಾಟ: ಇಡಿ ಅಧಿಕಾರಿಗಳಿಂದ ಬಂಧಿತರಾಗಿರುವ ಐಶ್ವರ್ಯಗೌಡ ಬಹುಕೋಟಿ ಚಿನ್ನ ವಂಚನೆ ಪ್ರಕರಣದ ವಿರುದ್ಧ ಹೋರಾಟ ಮಾಡಿದ್ದೇ ನಾನು. ಈ ಹಿಂದೆಯೇ ನಾನು ಪ್ರಕರಣದ ವಿಚಾರದ ಬಗ್ಗೆ ಇಡಿ ತನಿಖೆಯಾಗಬೇಕು ಎಂದು ಆಗ್ರಹಿಸಿದ್ದೆ. ಆ ಪ್ರಕಾರ ಇಡಿ ಆಕೆಯನ್ನು ವಶಪಡಿಸಿಕೊಂಡು ವಿಚಾರಣೆ ನಡೆಸುತ್ತಿದೆ. ಜೊತೆಗೆ ಕೆಲ ರಾಜಕಾರಣಿಗಳು ಶಾಮೀಲಾಗಿದ್ದಾರೆ ಎಂದು ಆರೋಪ ಮಾಡಿದ್ದೆ. ಅದರಂತೆ ಶಾಸಕ ವಿನಯ್ ಕುಲಕರ್ಣಿ, ಮಾಜಿ ಸಂಸದ ಡಿ.ಕೆ.ಸುರೇಶ್ ಅವರನ್ನು ವಿಚಾರಣೆಗೆ ಒಳಪಡಿಸಿದೆ ಎಂದರು.

ಕಾವೇರಿ ಆರತಿಗೆ ನಮ್ಮ ವಿರೋಧ: ರಾಜ್ಯ ಸರ್ಕಾರ ಕೋಟ್ಯಾಂತರ ರೂ. ವ್ಯಯಿಸಿ ಮಾಡಲು ಹೊರಟಿರುವ ಕಾವೇರಿ ಆರತಿಗೆ ನಮ್ಮ ವಿರೋಧವಿದೆ. ಅದೇ ಹಣವನ್ನು 92 ವರ್ಷ ಹಳೆಯದಾಗಿರುವ ಡ್ಯಾಂನ ನವೀಕರಣಕ್ಕೆ ಬಳಸಿಕೊಳ್ಳಲಿ. ಸರ್ಕಾರ ಲೂಟಿ ಹೊಡೆಯಲು ಇಂತಹ ಕಾರ್ಯಕ್ರಮ ನಡೆಸುವುದು ಬೇಡ ಎಂದು ಸಲಹೆ ನೀಡಿದರು.

ಕನಕಪುರಕ್ಕೆ ಕಾವೇರಿ ನೀರು: ಮಳವಳ್ಳಿ ಭಾಗದ ಹಲಗೂರು, ಬಿ.ಜಿ.ಪುರ ಹೋಬಳಿಯ ನಾಲೆಗಳು ಪ್ರಸ್ತುತ ವರ್ಷದಲ್ಲಿ ನೀರನ್ನೇ ಕಂಡಿಲ್ಲ. ಕಸಬಾ ಹೋಬಳಿಗೆ ಶೇ.20ರಷ್ಟು ಮಾತ್ರ ನೀರು ಬಿಡಲಾಗಿದೆ. ನಮ್ಮ ತಾಲೂಕಿನಲ್ಲಿ ಪರಿಸ್ಥಿತಿ ಹೀಗಿರುವಾಗ ಪಕ್ಕದ ಕನಕಪುರ ಕ್ಷೇತ್ರದ ಶಾಸಕ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಾತನೂರು ಹೋಬಳಿಯ 27 ಕೆರೆಗಳಿಗೆ ಕಾವೇರಿ ನೀರು ತೆಗೆದುಕೊಂಡು ಹೋಗಿದ್ದಾರೆ. ಮೊದಲು ಮಂಡ್ಯ ಜಿಲ್ಲೆಗೆ ನೀರು ಕೊಡದೆ, ಕಾವೇರಿ ಜಲಾನಯನ ಪ್ರದೇಶವಲ್ಲದ ಕನಕಪುರಕ್ಕೆ ನೀರು ಕೊಂಡೊಯ್ದಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ಹನುಮಂತು, ಮುಖಂಡರಾದ ಚಂದಳ್ಳಿ ಶ್ರೀಧರ್, ಪುಟ್ಟಬುದ್ಧಿ, ಸಿದ್ದಚಾರಿ, ಮರಿಸ್ವಾಮಿ, ಸದಾನಂದ, ಕಾಂತರಾಜು, ಸಿದ್ದರಾಜು, ಸಾತನೂರು ಜಯರಾಂ ಉಪಸ್ಥಿತರಿದ್ದರು.

ಖಾಸಗಿ ಬಸ್ ಡಿಕ್ಕಿ: ಸ್ಥಳದಲ್ಲೇ ಜಿಂಕೆ ಸಾವು



ಹಲಗೂರು, ಜು.14– ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಜಿಂಕೆ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಮುತ್ತತ್ತಿ ಬಳಿಯ ಕಾವೇರಿ ವನ್ಯಜೀವಿ ವಲಯದಲ್ಲಿ ಭಾನುವಾರ ಸಂಜೆ ನಡೆದಿದೆ.

ಬೆಂಗಳೂರಿನಿಂದ ಪ್ರವಾಸಕ್ಕಾಗಿ ಬಂದಿದ್ದ ಖಾಸಗಿ ಬಸ್ ಹಲಗೂರು ಕಡೆ ಹೋಗುತ್ತಿದ್ದ ವೇಳೆ ಕಾವೇರಿ ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಬಳಿ ಜಿಂಕೆ ರಸ್ತೆ ದಾಟುತ್ತಿದ್ದಾಗ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಜಿಂಕೆ ಸ್ಥಳದಲ್ಲೇ ಸಾವನ್ನಪ್ಪಿದೆ. ಘಟನೆ ಬಳಿಕ ಚಾಲಕ ಬಸ್ ನಿಲ್ಲಿಸದೇ ಪರಾರಿಯಾಗಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆಅಧಿಕಾರಿಗಳು ಪರಿಶೀಲನೆ ನಡೆಸಿ ತಾಳವಾಡಿಯ ಚೆಕ್‌ಪೋಸ್ಟ್ ಬಳಿ ವಾಹನವನ್ನು ವಶಕ್ಕೆ ಪಡೆದು ಚಾಲಕನನ್ನು ಬಂಧಿಸಿ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ವಲಯ ಅರಣ್ಯ ಸಂರಕ್ಷಣಾಧಿಕಾರಿ ಪ್ರಮೋದ್ ಕುಮಾರ್ ದೇವ್, ಉಪವಲಯ ಅರಣ್ಯಾಧಿಕಾರಿ ಸಾಜು ಫ್ರಾನ್ಸಿಸ್, ಸಿಬ್ಬಂದಿಗಳಾದ ಮೋಹನ್ ಕುಮಾರ್, ಮಹದೇವ್ ನಾಡಗೌಡ ಇತರರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಜು.14– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ 2025–26ನೇ ಸಾಲಿಗೆ ಮಳವಳ್ಳಿ ಟೌನ್‌ನಲ್ಲಿ ಹೊಸದಾಗಿ ಮೌಲಾನಾ ಆಜಾದ್ ಮಾದರಿ ಶಾಲೆ ಪ್ರಾರಂಭಿಸಬೇಕಿದ್ದು, 6 ರಿಂದ 10 ಕೊಠಡಿಗಳು, 5 ಶೌಚಾಲಯಗಳು, ನೀರು ಮತ್ತು ವಿದ್ಯುತ್ ವ್ಯವಸ್ಥೆ ಹಾಗೂ ಸಾರಿಗೆ ವ್ಯವಸ್ಥೆಯುಳ್ಳ ಮಳವಳ್ಳಿ ಟೌನ್‌ನ ಕೇಂದ್ರ ಭಾಗದಲ್ಲಿರುವ ಸುಸಜ್ಜಿತ ಕಟ್ಟಡವು ಬಾಡಿಗೆಗೆ ಅಗತ್ಯವಿದೆ. ಸ್ವಂತ ಕಟ್ಟಡ ಮಾಲೀಕರು ಜು.19 ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ: 08232–297240 / 08232–297240 ಅನ್ನು ಸಂಪರ್ಕಿಸಬಹುದಾಗಿದೆ.

ದೊಡ್ಡರಸಿನಕೆರೆ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಭಾರತೀನಗರ, ಜು.14– ದೊಡ್ಡರಸಿನಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಂಡಿಮಾಯೀಗೌಡ, ಉಪಾಧ್ಯಕ್ಷರಾಗಿ ಅಂದಾನಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಂಡಿಮಾಯೀಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಅಂದಾನಯ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಆಶಾ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ವೇಳೆ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಮುಖಂಡರು, ನಿರ್ದೇಶಕರು ಅಭಿನಂದಿಸಿದರು. ಮಾಜಿ ಕಾರ್ಯದರ್ಶಿ ಪುಟ್ಟಸ್ವಾಮಿ ಮಾತನಾಡಿದರು. ಮುಖಂಡರಾದ ಅರವಿಂದ್, ಎಂ.ಚಿಕ್ಕಹುಚ್ಚೇಗೌಡ, ಪ್ರದೀಪ್, ಆನಂದ್, ಸಂದೀಪ್, ಉಮೇಶ, ದೀಪು, ಮಹೇಶ್, ಕುಮಾರ, ನಿರ್ದೇಶಕರಾದ ಡಿ.ಎಚ್.ಮಹೇಶ್, ಶಿವಕುಮಾರ್, ಡಿ.ಎನ್.ಚಂದ್ರಶೇಖರ್, ಮಹೇಂದ್ರ, ಪುಟ್ಟಸ್ವಾಮಿ, ಶಂಕರ್, ಬಿ.ಶಂಕರ್, ಭಾನುಮತಿ, ಆರತಿ, ಕಾರ್ಯದರ್ಶಿ ಹುಚ್ಚೇಗೌಡ, ಮಾಜಿ ಕಾರ್ಯದರ್ಶಿ ಪುಟ್ಟಸ್ವಾಮಿ ಸೇರಿದಂತೆ ಹಲವರಿದ್ದರು.

ಕೆ.ಆರ್.ಪೇಟೆಯಲ್ಲಿ ಶಕ್ತಿ ಯೋಜನೆ ಸಂಭ್ರಮೋತ್ಸವ

ಕೆ.ಆರ್.ಪೇಟೆ, ಜು.14– ಶಕ್ತಿ ಯೋಜನೆಯಡಿ 500 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣ ಮಾಡಿದ್ದು, ಈ ಯೋಜನೆಗೆ 13 ಸಾವಿರ ಕೋಟಿ ವಿನಿಯೋಗಿಸಲಾಗಿದೆ. ತಾಲೂಕಿನಲ್ಲಿ 1,65,6639 ಮಂದಿ ಉಚಿತ ಟಿಕೆಟ್ ಪಡೆದು ಪ್ರಯಾಣಿಸಿದ್ದು, ಇದರ ವೆಚ್ಚ 43.49 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಕೆಎಸ್‌ಆರ್‌ಟಿಸಿಗೆ ನೀಡಿದೆ ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ತಿಳಿಸಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಆಯೋಜಿಸಿದ್ದ ಶಕ್ತಿ ಯೋಜನೆ 500 ಕೋಟಿ ಪ್ರಯಾಣದ ಸಂಭ್ರಮೋತ್ಸವ ಹಿನ್ನೆಲೆಯಲ್ಲಿ ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಟಿಕೆಟ್ ವಿತರಿಸುವ ಮೂಲಕ ಅವರು ಮಾತನಾಡಿದರು.

ಕಳೆದ 2023ರ ವಿಧಾನಸಭಾ ಚುನಾವಣೆ ವೇಳೆ ನೀಡಿದ್ದ ಭರವಸೆಯಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿದೆ ಈ ಪೈಕಿ ಶಕ್ತಿ ಯೋಜನೆಯಡಿ ರಾಜ್ಯದ ಮಹಿಳೆಯರಿಗೆ ಸಾರಿಗೆ ಬಸ್‌ಗಳಲ್ಲಿ ಉಚಿತ ಬಸ್ ಪ್ರಯಾಣದ ಸೌಲಭ್ಯ ಕಲ್ಪಿಸಲಾಯಿತು. ಈ ಯೋಜನೆಯಡಿ ಮಹಿಳೆಯರು ಧಾರ್ಮಿಕ ಕ್ಷೇತ್ರಗಳು, ಪ್ರವಾಸಿ ತಾಣಗಳಿಗೆ ಕುಟುಂಬ ಸಮೇತರಾಗಿ ಪ್ರವಾಸ ಕೈಗೊಂಡಿದ್ದಾರೆ. ದೂರದ ತವರು ಮನೆಯಲ್ಲಿರುವ ತಂದೆ–ತಾಯಿ, ಅಣ್ಣ ತಮ್ಮಂದಿರನ್ನು ನೋಡಿಕೊಂಡು ಬಂದಿದ್ದಾರೆ. ತಮ್ಮ ಜೀವನದಲ್ಲಿ ನೋಡಲು ಸಾಧ್ಯವಾಗದ ಪ್ರವಾಸಿ ಸ್ಥಳ, ಧಾರ್ಮಿಕ ಕ್ಷೇತ್ರಗಳನ್ನು ನೋಡಿಕೊಂಡು ಬಂದಿದ್ದಾರೆ. ಶಕ್ತಿ ಯೋಜನೆಯಿಂದ ಪ್ರವಾಸಿ ಸ್ಥಳಗಳ ಅಭಿವೃದ್ಧಿಯಾಗಿದೆ. ಧಾರ್ಮಿಕ ಕ್ಷೇತ್ರಗಳಲ್ಲಿ ಕಾಣಿಕೆ ರೂಪದಲ್ಲಿ ಹಣ ಕೋಟಿ ಕೋಟಿ ಸಂದಾಯವಾಗಿದೆ. ಪ್ರವಾಸಿ ಸ್ಥಳಗಳಲ್ಲಿ ವ್ಯಾಪಾರ ವಹಿವಾಟು ಹೆಚ್ಚು ನಡೆದಿದ್ದು, ವರ್ತಕರಿಗೆ ಬೀದಿ ಬದಿ ವ್ಯಾಪಾರಿಗಳಿಗೆ ಲಾಭವಾಗಿದೆ. ಹೀಗೆ ಶಕ್ತಿ ಯೋಜನೆಯಿಂದ ರಾಜ್ಯಕ್ಕೆ ಅನುಕೂಲವಾಗಿದೆ ಎಂದರು.



ಕೆ.ಆರ್.ಪೇಟೆಯಲ್ಲಿ ಶಕ್ತಿ ಯೋಜನೆಯ ಸಂಭ್ರಮೋತ್ಸವ ನಡೆಯಿತು.

ಈ ವೇಳೆ ವಿಭಾಗೀಯ ತಾಂತ್ರಿಕ ಅಧಿಕಾರಿ ಸಿ. ಚುಂಚಯ್ಯ, ಕೆ.ಆರ್.ಪೇಟೆ ಸಾರಿಗೆ ಡಿಪೋ ಮ್ಯಾನೇಜರ್ ಉಮಾ ಮಹೇಶ್ವರಿ, ಸೂಪರ್‌ವೈಸರ್ ರಮೇಶ್, ವಿಶ್ವನಾಥ್, ಸಂಚಾರ ನಿಯಂತ್ರಕ ಸತೀಶ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಸಿ.ಆರ್.ಪಿ.ಕುಮಾರ್, ಗೋಪಾಲ್, ಯೋಗೇಶ್, ಬಿ.ಸಿ.ಮಾಧು, ಕೆಎಸ್‌ಆರ್‌ಟಿಸಿ ಶಿವಣ್ಣ, ಶಿವಮ್ಮ, ಲತಾ, ಅಫೀಜ್ ಉಲ್ಲಾ, ರೂಪಾ, ಶಿವಲಿಂಗಪ್ಪ, ಶ್ಯಾಮಣ್ಣ, ಸೋಮಶೇಖರ್ ಸೇರಿದಂತೆ ಎಲ್ಲಾ ಸದಸ್ಯರು ಹಾಗೂ ಕೆಎಸ್‌ಆರ್‌ಟಿಸಿ ನೌಕರರು, ಮಹಿಳೆಯರು ಭಾಗವಹಿಸಿದ್ದರು.

ನೇರ ಸಂದರ್ಶನ

ಮಂಡ್ಯ, ಜು.14– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ. ಪ್ಯಾಲೆಸ್ ಟೊಯೋಟಾ ಮೆ. ಕೋಲ್‌ಮನ್ ಸರ್ವಿಸಸ್ ಮತ್ತು ಮೆ. ಹೆಚ್.ಡಿ.ಬಿ ಫೈನಾನ್ಸ್ ಸರ್ವಿಸಸ್ ಲಿಮಿಟೆಡ್ ಸಂಸ್ಥೆಯಲ್ಲಿ ಖಾಲಿ ಇರುವ "ಟೆಕ್ನಿಷಿಯನ್, ಇನ್ಶೂರೆನ್ಸ್ ಎಕ್ಸಿಕ್ಯೂಟಿವ್, ಫೀಲ್ಡ್ ಎಕ್ಸಿಕ್ಯೂಟಿವ್ ಹಾಗೂ ಸೇಲ್ಸ್" ಹುದ್ದೆಗಳಿಗೆ ಜು.17ರಂದು ಬೆಳಗ್ಗೆ 10 ಗಂಟೆಗೆ ನೇರ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಹಾಗೂ ಯಾವುದೇ ಪದವಿ ಉತ್ತೀರ್ಣರಾಗಿರುವ 18 ರಿಂದ 32 ವರ್ಷ ವಯೋಮಾನವುಳ್ಳ ಅಭ್ಯರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿ ಸೇರಿದಂತೆ ಇನ್ನಿತರ ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗೆ ಆಗಮಿಸಿ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ದೂ: 08232–295124. 9164642684 ಅನ್ನು ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಬಿ.ಸರೋಜಾ ದೇವಿ ವಿಧಿವಶ

ಪ್ರಕಾಶ್ ರೈ: ಸರೋಜಾದೇವಿಯವರ ಬಗ್ಗೆ ಮಾತಾಡಿರುವ ನಟ ಪ್ರಕಾಶ್ ರೈ, ಭಾರತೀಯ ಚಿತ್ರರಂಗದ ಎಲ್ಲಾ ಭಾಷೆಯ ಸಿನಿಮಾದಲ್ಲಿ ಅವರು ನಟಿಸಿದ್ದಾರೆ. 160ಕ್ಕೂ ಹೆಚ್ಚಿನ ಸಿನಿಮಾದಲ್ಲಿ ನಾಯಕಿಯಾಗಿ ನಟಿಸೋದು ಸಾಮಾನ್ಯವಾದ ಮಾತಲ್ಲ. ಅವರ ಜೊತೆ ನಾನು ನಟಿಸದೇ ಹೋದರೂ ಸಾಕಷ್ಟು ಬಾರಿ ಮಾತನಾಡಿದ್ದೆ. ಯಾವಾಗ ಸಿಕ್ಕರು ಆತ್ಮೀಯವಾಗಿ ಮಾತನಾಡುತ್ತಿದ್ದರು. ನನಗೆ ಅವಾರ್ಡ್ ಸಿಕ್ಕಾಗ ಕರೆ ಮಾಡಿ, ಮಾತನಾಡಿದರು. ಗಂಭೀರವಾಗಿ ತುಂಬು ಜೀವನ ನಡೆಸಿದ್ದಾರೆ. ಅದ್ಭುತವಾದ ನಟಿ ಅವರು, ಅವರ ಅಗಲಿಕೆ ಚಿತ್ರರಂಗಕ್ಕೆ ಸಾಕಷ್ಟು ನಷ್ಟ ತಂದಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದಿದ್ದಾರೆ.

ಗುರುಕಿರಣ್: ಸಂಗೀತ ನಿರ್ದೇಶಕ ಗುರುಕಿರಣ್ ಪ್ರತಿಕ್ರಿಯಿಸಿ, ಕನ್ನಡ, ದಕ್ಷಿಣ ಭಾರತ ಕಂಡ ಅತ್ಯುತ್ತಮ ನಟಿ ಸರೋಜಾದೇವಿಯವರು. ಅಂತಹ ಸ್ಟಾರ್ ಇನ್ನೂ ಸಿಗಲ್ಲ. ದಕ್ಷಿಣ ಭಾರತ ಆಳಿದವರು. ಹೀರೋಗಳು ಕೂಡ ಇವರ ಡೇಟ್‌ಗಾಗಿ ಕಾಯುತ್ತಿದ್ದರು. ಅವರ ಅಗಲುವಿಕೆ ತುಂಬಲಾರದ ನಷ್ಟ ಎಂದಿದ್ದಾರೆ.

ಶ್ರೀನಿವಾಸಮೂರ್ತಿ: ಸರೋಜಾದೇವಿಯವರ ಅಗಲುವಿಕೆ ಕನ್ನಡ ಚಿತ್ರರಂಗ ಮಾತ್ರ ಅಲ್ಲ, ಭಾರತೀಯ ಚಿತ್ರರಂಗಕ್ಕೆ ದುಃಖದ ವಿಚಾರ. ಪಂಚಭಾಷೆ ತಾರೆ ಅಂತ ಹೆಸರು ಪಡೆದವರು. ಎಲ್ಲಾರ ಜೊತೆ ನಟಿಸಿದ್ದವರು. ಹೀರೋಗೆ ಕೊಟ್ಟಷ್ಟೇ ಪ್ರಾಮುಖ್ಯತೆ ಇವರಿಗೂ ಇತ್ತು. ನನ್ನ ಪುಣ್ಯ, ಅವರ ಜೊತೆ ಗಂಡನ ಪಾತ್ರ ಮಾಡಿದ್ದೆ. ಒಂದೂವರೆ ತಿಂಗಳ ಹಿಂದೆ ಮಾತನಾಡಿದ್ದೆ. ಈ ವೇಳೆ, ಅವರ ದಿನಚರಿ ಬಗ್ಗೆಯೂ ಹೇಳಿಕೊಂಡಿದ್ದರು. ಪೂಜೆ, ಸಿನಿಮಾ ನೋಡೋದು. ಕಲಾವಿದರಿಗೆ ಪ್ರೋತ್ಸಾಹ ಮಾಡುತ್ತಿದ್ದರು. ಕನ್ನಡದಷ್ಟೇ ಒಳ್ಳೆಯ ಪಾತ್ರಗಳನ್ನ ಬೇರೆ ಭಾಷೆಯಲ್ಲಿ ಮಾಡಿ ಸಾಧನೆ ಮಾಡಿದ್ದರು. ಹುಟ್ಟಿದ ಮೇಲೆ ಸಾವು ಇರುತ್ತೆ. ಬೆಳಗ್ಗೆ ಪೂಜೆ ಮಾಡಿ ತಿಂಡಿ ಮಾಡಿದ ಕೂಡಲೇ ಸಾವಾಗಿದೆ ಎಂದು ಹಿರಿಯ ನಟ ಶ್ರೀನಿವಾಸ ಮೂರ್ತಿ ಯವರು ಹೇಳಿಕೊಂಡಿದ್ದಾರೆ.

ರಾಜೇಂದ್ರಸಿಂಗ್ ಬಾಬು: ಹಿರಿಯ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಪ್ರತಿಕ್ರಿಯಿಸಿ, ಸರೋಜಾದೇವಿಯವರು ಅವರು, ನಮ್ಮ ಕುಟುಂಬಕ್ಕೆ ತುಂಬಾ ಆತ್ಮೀಯವಾಗಿದ್ದರು. ಆಕೆ ಒಬ್ಬ ಮಹಾನ್ ನಟಿ, ಅಚ್ಚಕನ್ನಡ ಮಾತನಾಡುವಂತಹ ಹಿರೋಯಿನ್. ಕಿತ್ತೂರು ರಾಣಿ ಚೆನ್ನಮ್ಮನ ಪಾತ್ರವನ್ನು ಅವರಂತೆ ಯಾರು ಮಾಡಲು ಸಾಧ್ಯವಿಲ್ಲ. ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಬರಬೇಕು ಅಂತಾ ಪತ್ರ ಬರೆದಿದ್ದೆ. ಪಂಚಭಾಷೆಯಲ್ಲಿ ಅವರು ನಟನೆ ಮಾಡಿದ್ದಾರೆ. ಅವರ ನಿಧನ ಚಿತ್ರರಂಗಕ್ಕೆ ತುಂಬಲಾರದ ನಷ್ಟ ಎಂದಿದ್ದಾರೆ.



ಬೆಂಗಳೂರು ಮಲ್ಲೇಶ್ವರಂನ ಬಿ. ಸರೋಜಾದೇವಿ ನಿವಾಸದ ಮುಂದೆ ದುಃಖತಪ್ತ ಅಭಿಮಾನಿಗಳು.

ನಿರ್ಮಾಪಕ ಬಾ.ಮಾ ಹರೀಶ್ ಮಾತನಾಡಿ, ಯಾವುದೇ ಭಾಷೆಯಲ್ಲೂ ಅವರು ನಟನೆ ಮಾಡಿದರೂ ಕನ್ನಡ ಭಾಷೆಗೆ ತುಂಬಾ ಗೌರವ ಕೊಡುತ್ತಿದ್ದರು. ಈ ಹನ್ನೊಂದನೇ ಕ್ರಾಸ್‌ಗೆ ಬಿ. ಸರೋಜಾದೇವಿ ಹೆಸ್ರು ಇಡಬೇಕು ಎಂದು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದರು. ಅವರ ನಿಧನದ ನಂತರ ಹೆಸರು ಇಡುವುದಾಗಿ ಅಧಿಕಾರಿಗಳು ಹೇಳಿದ್ದರು. ಈಗಿನ ಸರ್ಕಾರ ಈ ರಸ್ತೆಗೆ ಅವರ ಹೆಸರು ಇಡಬೇಕು ಎಂದು ಮನವಿ ಮಾಡುತ್ತೇವೆ ಎಂದಿದ್ದಾರೆ.

ವಾಟಾಳ್: ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಪ್ರತಿಕ್ರಿಯಿಸಿ, ಸರೋಜಾ ದೇವಿಯವರು ಕರ್ನಾಟಕದವರು, ಕನ್ನಡಿಗರು, ಕನ್ನಡ ಚಿತ್ರಕ್ಕಿಂತ ಹೆಚ್ಚಾಗಿ ತಮಿಳು ಚಿತ್ರಗಳಲ್ಲಿ ಭಾರಿ ಪಾತ್ರ ಮಾಡಿದ್ದಾರೆ. ಚಿತ್ರರಂಗಕ್ಕೆ ಬರುವ ಮುನ್ನ ರಾಜ್ಯ ಕಂಡಂತಹ ಸಂಗೀತಗಾರ ಹೊನ್ನಪ್ಪ ಭಾಗವತರ್ ಬಳಿ ಸಂಗೀತ ಕಲಿತಿದ್ದರು. ಹೊನ್ನಪ್ಪ ಭಾಗವತರ್ ಅವರನ್ನು ಸಿನಿಮಾಕ್ಕೆ ಕರೆದುಕೊಂಡು ಬಂದರು. ತಮಿಳಿನಲ್ಲಿ ಎಂ.ಜಿ ರಾಮಚಂದ್ರನ್ ಜೊತೆ ಸಾಕಷ್ಟು ಸಿನಿಮಾ ಮಾಡಿದ್ದಾರೆ. ಇವರು ತಮಿಳುನಾಡಿನ ಮುಖ್ಯಮಂತ್ರಿ ಆಗಬೇಕಿತ್ತು ಅಷ್ಟೊತ್ತಿಗೆ ಜಯಲಲಿತಾ ಬಂದರು. ಇವರ ನಿಧನದಿಂದ ನಮ್ಮ ನಾಡಿಗೆ ಅಪಾರವಾದ ನೋವಾಗಿದೆ. ಸುಮಾರು 3 ವರ್ಷದ ಹಿಂದೆ ನನ್ನ ಜೊತೆ ಮಾತನಾಡಿದ್ದರು ಎಂದು ಹೇಳಿಕೊಂಡಿದ್ದಾರೆ.

ಹರ್ಷಿಕಾ ಪೂಣಚ್ಚ: ಸರೋಜದೇವಿಯವರು ಸಿನಿಮಾ ಲೆಜೆಂಡ್. ಅವರ ಜೊತೆ ಹಲವು ಕಾರ್ಯಕ್ರಮದಲ್ಲಿ ಹೆಜ್ಜೆ ಹಾಕಿದ್ದೇನೆ. ಅವರನ್ನ ಈಗ ಮುಟ್ಟಿದಾಗಲೂ ಮೈ ರೋಮಾಂಚನ ಆಯ್ತು. ಇವರಿಗೆಲ್ಲ ಸಾವು ಬರಬಾರದು ಅಂತ ಅನ್ನಿಸುತ್ತೆ. ನಾವೆಲ್ಲ ಸಿನಿಮಾ ರಂಗಕ್ಕೆ ಬರಲು ಇವರೇ ಸ್ಫೂರ್ತಿ. ರಾಣಿ ಹಾಗೇ ಬದುಕಿ ಸಿನಿಮಾ ಮಾಡಿ ಬಿಟ್ಟು ಹೋಗಿದ್ದೀರಾ. ಜಯಮಾಲರ ಮಗಳ ಮದುವೆಯಲ್ಲಿ ಭೇಟಿಯಾಗಿದ್ದೆವು. ಈಗಲೂ ಅವರು ಹಂಸ ನಡಿಗೆಯಲ್ಲೇ ನಡೆಯುತ್ತಿದ್ದರು ಎಂದು ನಟಿ ಹರ್ಷಿಕಾ ಪೂಣಚ್ಚ ಹೇಳಿದ್ದಾರೆ.

ಅನು ಪ್ರಭಾಕರ್: ಚಿತ್ರರಂಗ ಹಿರಿಯರನ್ನ ಕಳೆದುಕೊಳ್ಳುತ್ತಿದೆ ಅನ್ನೋದು ಬೇಸರದ ವಿಷಯ. ಅವರು ಬಹಳ ಸ್ಟ್ರಾಂಗ್ ಲೇಡಿ. ಇತ್ತೀಚೆಗೆ ಅವರನ್ನು ಭೇಟಿಯಾಗಲು ಆಗಿರಲಿಲ್ಲ. ಅವರು ಕನ್ನಡಿಗರಷ್ಟೇ ಅಲ್ಲ ಭಾರತೀಯ ಕಲಾವಿದರಿಗೆ ಮಾದರಿ. ನಮ್ಮ ಕನ್ನಡಿಗರಿಗೆ ಕಿತ್ತೂರು ರಾಣಿ ಚೆನ್ನಮ್ಮ ಅಂದ್ರೆ ಸರೋಜಮ್ಮ ಎಂದು ನಟಿ ಅನುಪ್ರಭಾಕರ್ ಹೇಳಿದ್ದಾರೆ.

ಅಶೋಕ್ ಖೇಣಿ: ಸರೋಜದೇವಿ ಮತ್ತು ನಮ್ಮ ತಾಯಿಯ ಸ್ನೇಹಿತರು. ಅವರ ಅಗಲುವಿಕೆ ಬಹಳ ದೊಡ್ಡ ನಷ್ಟ, ನಮ್ಮ ತಾಯಿ ಕೂಡ ಸ್ವರ್ಗದಲ್ಲಿದ್ದಾರೆ. ಮತ್ತೆ ಅವರೆಲ್ಲ ಅಲ್ಲಿ ಒಟ್ಟಿಗೆ ಸೇರುತ್ತಾರೆ ಎಂದು ಉದ್ಯಮಿ ಹಾಗೂ ಮಾಜಿ ಶಾಸಕ ಅಶೋಕ್ ಖೇಣಿ ಹೇಳಿದ್ದಾರೆ.

ಕಿಚ್ಚಾ ಸುದೀಪ್: ಅಭಿನಯ ಸರಸ್ವತಿ ಎಂದೇ ಖ್ಯಾತಿಯಾಗಿರುವ ಬಿ.ಸರೋಜಾದೇವಿ ನಿಧನಕ್ಕೆ ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಹಾಗೂ ನಟ ದರ್ಶನ್ ಸಂತಾಪ ಸೂಚಿಸಿದ್ದಾರೆ.

ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಅಭಿನಯ ಸರಸ್ವತಿ ಎಂದೇ ಹೆಸರಾದ ಬಹುಭಾಷಾ ತಾರೆ ಸರೋಜಾದೇವಿ ಅವರು ತಮ್ಮ ಮೋಹಕತೆಯೊಂದಿಗೆ ಹೊರಟಿದ್ದಾರೆ. ಹಲವು ಭಾಷೆಗಳ ಪ್ರೌಢಿಮೆ ಹೊಂದಿದ್ದ ಅವರು ಅನೇಕ ದಿಗ್ಗಜ ರೊಂದಿಗೆ ನಟಿಸಿ ತಾನೇ ಪಾತ್ರವಾಗಿ ಬೆಳ್ಳಿತೆರೆಯಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ಪಾರಿಜಾತ ಪುಷ್ಪವೊಂದು ತನ್ನ ಪರಿಮಳದೊಂದಿಗೆ ತುಂಬು ಜೀವನ ನಡೆಸಿ ನಮ್ಮನ್ನು ಅಗಲಿ ಹೊರಟಿದೆ. ನಮ್ಮ ಕಲಾ ಸರಸ್ವತಿಗೆ ವಿನಯ ಪೂರ್ವಕ ನಮನಗಳನ್ನು ತಿಳಿಸಿದ್ದಾರೆ.

ದರ್ಶನ್: ಇನ್ನೂ ಬಿ.ಸರೋಜಾದೇವಿ ನಿಧನಕ್ಕೆ ನಟ ದರ್ಶನ್, ಹಿರಿಯ ನಟಿ, ಅಭಿನಯ ಸರಸ್ವತಿ ಎಂದೇ ಖ್ಯಾತರಾಗಿದ್ದ ಪದ್ಮ ಭೂಷಣ ಬಿ.ಸರೋಜಾದೇವಿ ಅವರು ವಿಧಿವಶರಾದ ಸುದ್ದಿ ತಿಳಿದು ಅತ್ಯಂತ ದುಃಖವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ. ದೇವರು ಅವರ ಕುಟುಂಬದವರಿಗೆ, ಅವರ ಅಪಾರ ಅಭಿಮಾನಿಗಳಿಗೆ ಹಿರಿಯ ಕಲಾವಿದೆಯ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ನಿಖಿಲ್ ಕುಮಾರಸ್ವಾಮಿ, ಆರ್. ಅಶೋಕ್ ಸಂತಾಪ: ಕನ್ನಡ ಚಿತ್ರರಂಗದ ಹಿರಿಯ ನಟಿ ಬಿ.ಸರೋಜಾದೇವಿ ಅವರ ನಿಧನಕ್ಕೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಪಕ್ಷ ನಾಯಕ ಆರ್.ಅಶೋಕ್ ಸಂತಾಪ ಸೂಚಿಸಿದರು.

ಈ ಬಗ್ಗೆ ಶೋಕ ಸಂದೇಶ ಬಿಡುಗಡೆ ಮಾಡಿರುವ ಅವರು, ಕನ್ನಡ ಚಿತ್ರರಂಗದ ಹಿರಿಯ ನಟಿ, ಅಭಿನಯ ಸರಸ್ವತಿ ಎಂದೇ ಖ್ಯಾತರಾಗಿದ್ದ ಬಿ.ಸರೋಜಾದೇವಿ ಅವರು ನಿಧನರಾದ ಸುದ್ದಿ ತಿಳಿದು ಅತೀವ ದುಃಖವಾಗಿದೆ. ಆರು ದಶಕಗಳಿಗೂ ಹೆಚ್ಚು ಕಾಲ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ ಅವರು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು ಎಂದು ಹೇಳಿದರು.

ಸರೋಜಾದೇವಿ ಅವರ ಸಾವಿನಿಂದ ಇಡೀ ಕಲಾಜಗತ್ತು ಬಡವಾಗಿದೆ. ಸರೋಜಾದೇವಿಯವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಕುಟುಂಬವರ್ಗ ಹಾಗೂ ಅಭಿಮಾನಿ ಬಳಗಕ್ಕೆ ದುಃಖವನ್ನು ಭರಿಸುವ ಶಕ್ತಿ ತುಂಬಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದರು.

ಸದ್ಯದಲ್ಲೇ ಬಿಹಾರ್, ಪ.ಬಂಗಾಳ, ಕೇರಳ, ತಮಿಳ್ನಾಡು ವಿಧಾನಸಭಾ ಚುನಾವಣೆ ಹಿನ್ನೆಲೆ

ನಾಳೆಯಿಂದ ಬೆಂಗಳೂರಲ್ಲಿ ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಮಾವೇಶ

- ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವ
- ಕೆಪಿಸಿಸಿ ಉಸ್ತುವಾರಿಯಲ್ಲಿ ಸಮಾವೇಶ

ಬೆಂಗಳೂರು, ಜು. 14(ಕೆಎಂಶಿ)– ಮುಂಬರುವ ದಿನಗಳಲ್ಲಿ ಬಿಹಾರ ಸೇರಿದಂತೆ ನಾಲ್ಕು ರಾಜ್ಯಗಳ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಮತಗಳ ಕ್ರೋಢೀಕರಣಕ್ಕೆ ರಣನೀತಿ ರೂಪಿಸಲು ಎಐಸಿಸಿ ನಾಳೆಯಿಂದ ನಗರದಲ್ಲಿ ಎರಡು ದಿನಗಳ ಸಮಾವೇಶ ನಡೆಸುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ರಚಿಸಲಾಗಿರುವ ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಸಭೆ ಆಯೋಜಿಸಲಾಗಿದೆ. ಬಿಹಾರ, ಪಶ್ಚಿಮ ಬಂಗಾಳ, ಕೇರಳ ಹಾಗೂ ತಮಿಳುನಾಡು ವಿಧಾನಸಭೆಗಳಿಗೆ ಚುನಾವಣೆ ಮುಂದಿನ ದಿನಗಳಲ್ಲಿ ನಡೆಯಲಿವೆ. ಈ ನಾಲ್ಕೂ ರಾಜ್ಯಗಳಲ್ಲಿ ಬಿಹಾರದಲ್ಲಿ ಎನ್‌ಡಿಎ ಮೈತ್ರಿ ಸರ್ಕಾರವಿದ್ದು, ಉಳಿದ ರಾಜ್ಯಗಳು ಪ್ರಾದೇಶಿಕ ಪಕ್ಷಗಳ ಹಿಡಿತದಲ್ಲಿವೆ.



ಸಿದ್ದರಾಮಯ್ಯ

ಈ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಮತಗಳು ನಿರ್ಣಾಯಕವಾಗಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಸಮುದಾಯಗಳನ್ನು ಸೆಳೆಯಲು ಹಿಂದುಳಿದ ವರ್ಗಗಳ ನಾಯಕ ಸಿದ್ದರಾಮಯ್ಯ ವರ್ಚಸ್ಸು ಬಳಸಿಕೊಳ್ಳಲು ಎಐಸಿಸಿ ನಿರ್ಧರಿಸಿದೆ ಕೆಪಿಸಿಸಿ ಕಚೇರಿಯಲ್ಲಿ ನಾಳೆ ಸಂಜೆ 5 ಗಂಟೆಗೆ ದುಂಡುಮೇಜಿನ ಸಭೆ ನಡೆಯಲಿದ್ದು, ಜುಲೈ 16ರಂದು ಬೆಳಗ್ಗೆ 10 ಗಂಟೆಗೆ ಎರಡನೇ ಸಭೆ ನಡೆಯಲಿದೆ.

ಹಿಂದುಳಿದ ವರ್ಗಗಳ ಸಮಸ್ಯೆಗಳು ಹಾಗೂ ಪರಿಹಾರಕ್ಕೆ ಸಂಬಂಧಿಸಿದಂತೆ ಚಿಂತನೆ ನಡೆಸಿ, ಕೆಲವು ನಿರ್ಣಯಗಳನ್ನು ಸಭೆ ಕೈಗೊಳ್ಳಲಿದೆ. ನಿರ್ಣಯಗಳನ್ನು ನಾಲ್ಕು ರಾಜ್ಯಗಳ ಚುನಾವಣೆಯಲ್ಲಿ ಅಸ್ತ್ರವಾಗಿ ಬಳಸಿಕೊಂಡು ಪಕ್ಷಕ್ಕೆ ರಾಜಕೀಯ ಲಾಭ ಮಾಡಿಕೊಳ್ಳಲು ಕಾಂಗ್ರೆಸ್ ಹೊರಟಿದೆ.

ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಸಭೆ ಉಸ್ತುವಾರಿಯನ್ನು ಸಿದ್ದರಾಮಯ್ಯ ಅವರಿಗೆ ವಹಿಸಿದ್ದು, ನಗರದಲ್ಲಿ ನಡೆಯಲಿರುವ ಮೊದಲ ಸಭೆಗೆ ಹಾಜರಾಗುವಂತೆ ಎಲ್ಲಾ 23 ಸದಸ್ಯರಿಗೆ ಖುದ್ದು ಆಹ್ವಾನ ನೀಡಿದ್ದಾರೆ. ಜುಲೈ 16ರಂದು ನಡೆಯುವ ಸಭೆಗೆ ಸಲಹಾ ಮಂಡಳಿ ಸದಸ್ಯರಲ್ಲದೆ, ರಾಷ್ಟ್ರಮಟ್ಟದಲ್ಲಿ ಪಕ್ಷದ ಹಿಂದುಳಿದ ಸಮುದಾಯಗಳಿಗೆ ಸೇರಿದ ಸಂಸದರು, ಶಾಸಕರು ಹಾಗೂ ಮುಖಂಡರನ್ನು ಆಹ್ವಾನಿಸಲಾಗಿದೆ.

ಕೆಪಿಸಿಸಿ, ಸಭೆ ಉಸ್ತುವಾರಿ ವಹಿಸಿಕೊಂಡಿರುವುದರಿಂದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಉಪಸ್ಥಿತರಿರುವರು.

ಮಹಿಳೆಗೆ 500ನೇ ಕೋಟಿ ಟಿಕೆಟ್

ಹೆಣ್ಣುಮಕ್ಕಳು ಉದ್ಯೋಗ, ಶಿಕ್ಷಣ, ವೈದ್ಯಕೀಯ ಚಿಕಿತ್ಸೆ ಮುಂತಾದ ಉದ್ದೇಶಗಳಿಗೆ ಕುಟುಂಬದ ಯಜಮಾನನ ಮೇಲೆ ಅವಲಂಬಿತರಾಗದೆ ಸ್ವತಂತ್ರ ನಿರ್ಣಯ ಕೈಗೊಂಡು ಸ್ವಾವಲಂಬಿ ಬದುಕಿನೆಡೆಗೆ ಪಯಣಿಸಬೇಕು ಎಂಬ ಉದ್ದೇಶದಿಂದ ಈ ಯೋಜನೆಯನ್ನು ಜಾರಿ ಮಾಡ ಲಾಗಿದ್ದು, ಇದು ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಬಗ್ಗೆ ಹೆಮ್ಮೆಯಿದೆ. ಶಕ್ತಿ ರಾಜ್ಯದ ಲಕ್ಷಾಂತರ ಮಹಿಳೆಯರ ಕನಸುಗಳನ್ನು ನನಸಾಗಿಸಿ, ನಿಜಾರ್ಥದಲ್ಲಿ ಅವರ ಬದುಕಿಗೆ ಶಕ್ತಿ ತುಂಬಿದೆ ಎಂದು ಹೇಳಿದರು.

5 ಗ್ಯಾರಂಟಿ ಯೋಜನೆಗಳ ಪೈಕಿ ಶಕ್ತಿ ಯೋಜನೆ ಮೊದಲ ಗ್ಯಾರಂಟಿ ಯೋಜನೆಯಾಗಿದ್ದು, ಈ ಯೋಜನೆಗೆ 2023ರ ಜೂ.11ರಂದು ಚಾಲನೆ ನೀಡಲಾಗಿತ್ತು. ಅಂದಿನಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ), ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯೂಕೆಆರ್‌ಟಿಸಿ) ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ)–ನಾಲ್ಕು ಬಸ್ ನಿಗಮಗಳಲ್ಲಿ 497.79 ಕೋಟಿ ಮಹಿಳೆಯರು ಪ್ರಯಾಣ ಮಾಡಿದ್ದಾರೆ.

ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರು ಉಚಿತ ಟಿಕೆಟ್ ಪಡೆದು ಪ್ರಯಾಣಿಸಿದ ಟಿಕೆಟ್‌ಗಳ ಮೌಲ್ಯ ಅಂದಾಜು 12,600 ಕೋಟಿ ರೂಪಾಯಿಗಳಾಗಿದೆ. ಪ್ರತಿ ದಿನ ಅಂದಾಜು 80 ಲಕ್ಷಕ್ಕೂ ಹೆಚ್ಚಿನ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯಡಿ ಉಚಿತ ಟಿಕೆಟ್ ಪಡೆದು ಪ್ರಯಾಣಿಸುತ್ತಿದ್ದಾರೆ.

ಶಕ್ತಿ ಯೋಜನೆ ದೇಶಕ್ಕೆ ಮಾದರಿ: 500 ಕೋಟಿ ಟ್ರಿಪ್‌ಗಳನ್ನು ಕಂಡಿರುವ ಶಕ್ತಿ ಯೋಜನೆ ಇಡೀ ದೇಶಕ್ಕೆ ಮಾದರಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬಣ್ಣಿಸಿದರು.

ಯಾವುದೇ ಕಾರಣಕ್ಕೂ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಎಲ್ಲಿಯವರೆಗೆ ದೇವರು ಶಕ್ತಿ ಹಾಗೂ ಜನ ಅಧಿಕಾರ ನೀಡುತ್ತಾರೋ ಅಲ್ಲಿಯತನಕ ಯೋಜನೆಗಳು ಮುಂದುವರೆಯುತ್ತವೆ ಎಂದರು. ಕಾಂಗ್ರೆಸ್ ಪಕ್ಷ ಈ ದೇಶದ ಜನರಿಗೆ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ನೀಡಿದೆ. ಹಲವಾರು ಪಿಂಚಣಿ ಯೋಜನೆಗಳು, ನರೇಗಾ, ಬ್ಯಾಂಕ್ ರಾಷ್ಟ್ರೀಕರಣ ಸೇರಿದಂತೆ ನಮ್ಮ ಯೋಜನೆಗಳನ್ನು ಬಿಜೆಪಿ ಸೇರಿದಂತೆ ಯಾರೂ ಸಹ ನಿಲ್ಲಿಸಲು ಸಾಧ್ಯವಿಲ್ಲ. ಇವು ಜನರ ಹೃದಯ ಹಾಗೂ ಬದುಕಿಗೆ ಬೇಕಾದಂತಹ ಕಾರ್ಯಕ್ರಮಗಳು. ಇವು ನಿರಂತರವಾಗಿರುತ್ತವೆ ಎಂದರು.

ಈ ಯೋಜನೆಯಿಂದ ರಾಜ್ಯದ ಉದ್ದಗಲಕ್ಕೂ ಮಹಿಳೆಯರು ಉಚಿತವಾಗಿ ಸಂಚಾರ ಮಾಡಬಹುದು. ಯಾವುದೇ ಖರ್ಚು ಮಾಡದೇ ತಮ್ಮ ಪ್ರೀತಿಪಾತ್ರರ ಮನೆಗಳಿಗೆ ಹೋಗಬಹುದು. ಕೆಲಸಕ್ಕೆ ಹೋಗುವ ಅನೇಕ ಮಹಿಳೆಯರಿಗೆ ಪ್ರತಿ ತಿಂಗಳು 500 ರಿಂದ 1 ಸಾವಿರಕ್ಕೂ ಹೆಚ್ಚು ಹಣ ಉಳಿತಾಯವಾಗುತ್ತಿದೆ ಎಂದರು. ಮಹಿಳೆಯೊಬ್ಬರು ಸಂತೋಷದಿಂದ ನನಗೆ ರೊಟ್ಟಿ, ಶೇಂಗಾ ಹೋಳಿಗೆ ನೀಡಿದರು. ನಮ್ಮ ಯೋಜನೆ ಬಗ್ಗೆ ಯಾರು ಎಷ್ಟೇ ಟೀಕೆ ಮಾಡಿದರೂ ಅವುಗಳು ಕಾಲಕ್ರಮೇಣ ಸತ್ತು ಹೋಗುತ್ತವೆ. ನಮ್ಮ ಕೆಲಸಗಳು ಶಾಶ್ವತವಾಗಿ ಉಳಿಯುತ್ತವೆ. ನಾವು ಕೊಟ್ಟ ಮಾತನ್ನು ಉಳಿಸಿಕೊಂಡಿ ರುವ ಕಾರಣಕ್ಕೆ ನಮಗೆ ಹೆಚ್ಚು ಸಂತೋಷ ವಾಗಿದೆ. ಇದೆಲ್ಲವನ್ನು ಜಾರಿ ಮಾಡಲು ಜನ ನೀಡಿರುವ ಶಕ್ತಿಯಿಂದ ನಮಗೆ ಬಲಬಂದಿದೆ ಎಂದರು.

ಸಿಎಂ ಸಿದ್ದರಾಮಯ್ಯ ಆಪ್ತ ಸಚಿವರಿಂದ ಉಸ್ತುವಾರಿ ಸುರ್ಜೇವಾಲ ಅಭಿವೃದ್ಧಿ ಅಭಿಪ್ರಾಯ ಸಂಗ್ರಹ

ಬೆಂಗಳೂರು, ಜು. 14(ಕೆಎಂಶಿ)– ರಾಜ್ಯ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ನಗರದಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರ ಅಭಿಪ್ರಾಯ ಸಂಗ್ರಹಿಸಿದರು.

ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಬೈರತಿ ಸುರೇಶ್, ದಿನೇಶ್ ಗುಂಡೂರಾವ್, ರಹೀಮ್ ಖಾನ್, ಜಮೀರ್ ಅಹಮದ್ ಖಾನ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಆಹ್ವಾನವಿತ್ತು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಬ್ಲಾಕ್ ಕಾಂಗ್ರೆಸ್ ಸಂಘಟನೆ, ಅಭಿವೃದ್ಧಿ ಕಾರ್ಯಗಳು ಹಾಗೂ ಸಚಿವರ ಕಾರ್ಯವೈಖರಿ ಬಗ್ಗೆ ಪಕ್ಷದ 100ಕ್ಕೂ ಹೆಚ್ಚು ಶಾಸಕರಿಂದ ಮಾಹಿತಿ ಪಡೆದ ನಂತರ ಸಚಿವರ ಅಭಿಪ್ರಾಯ ಸಂಗ್ರಹಣೆಗೆ ಮುಂದಾಗಿದ್ದಾರೆ.

ಸಾರಿಗೆ ಬಸ್‌ಗಳಲ್ಲಿ ದೃಷ್ಟಿ ವಿಶೇಷಚೇತನರಿಗೆ ದಾರಿದೀಪವಾದ 'ಧ್ವನಿ ಸ್ಪಂದನ'

ಮೈಸೂರಲ್ಲಿ ವಿಶೇಷ ಬಸ್‌ಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

ಮೈಸೂರು, ಜು.14(ಬಿಎಲ್‌ಯು)– ದೃಷ್ಟಿ ವಿಶೇಷಚೇತನರು ಸಾರಿಗೆ ಬಸ್‌ಗಳಲ್ಲಿ ಸ್ವತಂತ್ರವಾಗಿ ಪ್ರಯಾಣಿಸಲು ಅನುಕೂಲವಾಗುವಂತೆ ಆಧುನಿಕ ತಂತ್ರಜ್ಞಾನದ ಧ್ವನಿಸ್ಪಂದನ ಬಸ್‌ಗಳ ಸಂಚಾರಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮೈಸೂರಿನಲ್ಲಿ ಸೋಮವಾರ ಚಾಲನೆ ನೀಡಿದರು.

ಮೈಸೂರು ನಗರ ಬಸ್ ನಿಲ್ದಾಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಧ್ವನಿ ಸ್ಪಂದನ ಬಸ್‌ಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಿ, ಮಾತನಾಡಿದ ಅವರು, ದೃಷ್ಟಿ ವಿಶೇಷಚೇತನರು ಸಾರಿಗೆ ಬಸ್‌ಗಳಲ್ಲಿ ಸ್ವತಂತ್ರವಾಗಿ ಪ್ರಯಾಣ ಮಾಡಲು ಧ್ವನಿಸ್ಪಂದನ ಸಹಾಯ ಮಾಡುತ್ತದೆ. ಈ ಸಾಧನ ಮೂರು ಪ್ರತ್ಯೇಕ ಯೂನಿಟ್ ಒಳಗೊಂಡಿದ್ದು, ಬಸ್‌ನಲ್ಲಿ ಒಂದು ಯೂನಿಟ್, ರಿಮೋಟ್ ಮತ್ತು ಸ್ಪೀಕರ್ ಹೊಂದಿರುತ್ತದೆ ಎಂದು ಹೇಳಿದರು.

ದೃಷ್ಟಿ ವಿಶೇಷಚೇತನರು ಬಸ್ ನಿಲ್ದಾಣದ ಬಳಿ ಬಂದಾಗ ಫೈಂಡ್ ಬಟನ್ ಒತ್ತಿದರೆ ಬಸ್‌ನಲ್ಲಿ ಅಳವಡಿಸಿರುವ ಸ್ಪೀಕರ್‌ನಿಂದ ಬಸ್ ಮಾರ್ಗ ಸಂಖ್ಯೆ ಘೋಷಣೆಯಾಗುತ್ತದೆ. ಸೆಲೆಕ್ಟ್ ಬಟನ್ ಒತ್ತಿದಾಗ ಬಸ್‌ನಲ್ಲಿ ಅಳವಡಿಸಿರುವ ಯೂನಿಟ್‌ಗೆ ಸಿಗ್ನಲ್ ರವಾನೆಯಾಗುತ್ತದೆ. ಆಗ ಚಾಲಕ ಮತ್ತು ನಿರ್ವಾಹಕನಿಗೆ ದೃಷ್ಟಿ ವಿಶೇಷಚೇತನ ಬರುತ್ತಿರುವ ಬಗ್ಗೆ ಮಾಹಿತಿ ದೊರೆಯುತ್ತದೆ ಎಂದು ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ದೃಷ್ಟಿ ವಿಶೇಷಚೇತನ, ಸಂವಹನಕ್ಕಾಗಿ ತನಗೆ ಅವಶ್ಯವಿರುವ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಇದರಿಂದ ವಿವಿಧ ಭಾಷೆಯ ಹಿನ್ನೆಲೆ ಇರುವ ವ್ಯಕ್ತಿಗಳಿಗೆ ಇದು ಬಹುಪಯೋಗಿಯಾಗಿದೆ. 30 ಮೀ. ಸುತ್ತಳತೆಯಲ್ಲಿ ಈ ಸಾಧನ ಕೆಲಸ ನಿರ್ವಹಿಸಲಿದ್ದು, ದೃಷ್ಟಿವಿಶೇಷಚೇತನನಿಗೆ ಬಸ್ ಮಾರ್ಗ ಸಂಖ್ಯೆಯ ಬಗ್ಗೆ ಮಾಹಿತಿ ಸರಳವಾಗಿ ದೊರೆಯಲಿದೆ ಎಂದರು.



ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಸೋಮವಾರ 'ಧ್ವನಿಸ್ಪಂದನ' ಸಾರಿಗೆ ಬಸ್‌ಗಳ ಸಂಚಾರಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಸಿರು ನಿಶಾನೆ ತೋರಿದರು. ಶಾಸಕರಾದ ಜಿ.ಟಿ.ದೇವೇಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಹೆಚ್ಚು ಬಸ್‌ಗಳಿಗೆ ಧ್ವನಿಸ್ಪಂದನ ಅಳವಡಿಸಿರುವ ದೇಶದ ಮೊದಲ ನಗರ ಮೈಸೂರು

ಮುಂಬೈ ಮತ್ತು ದೆಹಲಿಯಲ್ಲಿ ಅಲ್ಪಾವಧಿ ಪ್ರಯೋಗ ನಡೆಸಲಾಗಿದೆ. ಆದರೆ ಮೈಸೂರು ಧ್ವನಿ ಸ್ಪಂದನೆಯನ್ನು ಹೆಚ್ಚು ಬಸ್‌ಗಳಲ್ಲಿ ಅಳವಡಿಸಿರುವ ದೇಶದ ಮೊದಲ ನಗರವಾಗಿದೆ. ನಗರದ 200 ಬಸ್‌ಗಳಲ್ಲಿ ಧ್ವನಿ ಸ್ಪಂದನ ಸಾಧನವನ್ನು ಅಳವಡಿಸಲಾಗಿದೆ. ನಗರ ಬಸ್ ನಿಲ್ದಾಣದಿಂದ ಬನ್ನಿಮಂಟಪ, ಕೃಷ್ಣರಾಜಸಾಗರ, ನಾಯ್ಡುನಗರ, ಮಾವನಹಳ್ಳಿ, ಗೊರೂರು ಸೇರಿದಂತೆ ಹಲವು ಬಸ್‌ಗಳಲ್ಲಿ ಇದನ್ನು ಅಳವಡಿಸಲಾಗಿದೆ. ಈ ಸಾಧನದ ಬಳಕೆಯ ಬಗ್ಗೆ ಈಗಾಗಲೇ 400 ದೃಷ್ಟಿಹೀನರಿಗೆ ಸ್ವಾಮಿ ವಿವೇಕಾನಂದ ಯುವ ಚಳವಳಿ ಮತ್ತು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ತರಬೇತಿ ನೀಡಲಾಗಿದೆ.

ಎಸಿ ರೂಂ ಬಿಟ್ಟು ಹೊರಗೆ ಬಂದು ಕೆಲಸ ಮಾಡಿ

“ ಪ್ರಯಾಣಿಕರ ಬೇಡಿಕೆ ಹೆಚ್ಚಾಗಿರುವ ಕಡೆ ಹೆಚ್ಚಿನ ಬಸ್‌ಗಳ ಸೌಲಭ್ಯ ಕಲ್ಪಿಸಬೇಕು ಎಂದು ಶಾಸಕ ತನ್ವೀರ್ ಸೇಠ್ ಸಾರಿಗೆ ಅಧಿಕಾರಿಗಳಿಗೆ ಸಲಹೆ ನೀಡಿದರು. ಅಧಿಕಾರಿಗಳು ಎಸಿ ರೂಂನಲ್ಲಿ ಕುಳಿತು ಈ ಕೆಲಸ ಮಾಡಿದರೆ ಸಾಧ್ಯವಿಲ್ಲ. ಹೊರಗೆ ಬಂದು ಕೆಲಸ ಮಾಡಿ. ನಗರದ ಪ್ರದಕ್ಷಿಣೆ ಹಾಕಿ ಖುದ್ದು ಪರಿಶೀಲನೆ ನಡೆಸಿದರೆ ಹೆಚ್ಚು ಬಸ್‌ಗಳ ಅವಶ್ಯಕತೆ ಇರುವ ಸ್ಥಳಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಅಧಿಕಾರಿಗಳು ಈ ಸಂಬಂಧ ಸರ್ವೆ ಮಾಡಿದರೆ ಒಳಿತು. ಈ ಮೂಲಕ ಪ್ರಯಾಣಿಕರ ಬೇಡಿಕೆ ಹೆಚ್ಚಿರುವ ಸ್ಥಳಗಳಿಗೆ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಿ ಎಂದು ತನ್ವೀರ್ ಸೇಠ್ ಒತ್ತಾಯಿಸಿದರು.

ಫ್ಲೆಕ್ಸ್‌ನಲ್ಲಿ ಶಾಸಕ ಹರೀಶ್‌ಗೌಡರ ಫೋಟೋ ನಾಪತ್ತೆ; ಮಾತಿನ ಚಕಮಕಿ

ಧ್ವನಿಸ್ಪಂದನ ಕಾರ್ಯಕ್ರಮದ ಫ್ಲೆಕ್ಸ್‌ನಲ್ಲಿ ಶಾಸಕ ಕೆ.ಹರೀಶ್‌ಗೌಡರ ಭಾವಚಿತ್ರ ಹಾಕದಿರುವ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಹರೀಶ್‌ಗೌಡರು ಈ ಕ್ಷೇತ್ರದ ಶಾಸಕರಾಗಿದ್ದು, ಅಧ್ಯಕ್ಷತೆ ಕೂಡ ಅವರೇ ವಹಿಸಬೇಕಿತ್ತು. ಆದರೆ ಇಲ್ಲಿನ ಫ್ಲೆಕ್ಸ್‌ನಲ್ಲಿ ಅವರ ಭಾವಚಿತ್ರವನ್ನೆ ಹಾಕಿಲ್ಲ ಎಂದು ಹರೀಶ್‌ಗೌಡ ಬೆಂಬಲಿಗರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಆಗ ಅಲ್ಲೇ ಇದ್ದ ಕೆಲವು ಕಾಂಗ್ರೆಸ್ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿ, ಇದು ನಾವು ಖಾಸಗಿಯಾಗಿ ಹಾಕಿರುವ ಫ್ಲೆಕ್ಸ್‌ಗಳಾಗಿವೆ. ಸರ್ಕಾರದಿಂದ ಹಾಕುವ ಫ್ಲೆಕ್ಸ್‌ನಲ್ಲಿ ಹರೀಶ್‌ಗೌಡರ ಫೋಟೋ ಹಾಕದಿದ್ದರೆ ಆಕ್ಷೇಪ ವ್ಯಕ್ತಪಡಿಸಿ ಎಂದು ತಿರುಗೇಟು ನೀಡಿದರು.

ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರ ಎರಡು ಗುಂಪಿನ ನಡುವೆ ಮಾತಿನ ಚಕಮಕಿ ನಡೆದಾಗ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಇನ್ನು ಮುಂದೆ ಕೆಎಸ್‌ಆರ್‌ಟಿಸಿ ಖರೀದಿಸುವ ಹೊಸ ಬಸ್‌ಗಳಲ್ಲಿ ಧ್ವನಿ ಸ್ಪಂದನ ಸಾಧನವನ್ನು ಕಡ್ಡಾಯವಾಗಿ ಅಳವಡಿಸಲಾಗುವುದು ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ವಿಶೇಷ ಪೂಜೆ...



ಮೈಸೂರು ಪರಕಾಲ ಮಠಕ್ಕೆ ಯದುವಂಶದ ರಾಜಮಾತೆ ಪ್ರಮೋದಾದೇವಿ ಒಡೆಯರ್ ಕುಟುಂಬ ಸಮೇತರಾಗಿ ಭೇಟಿ ನೀಡಿ, ಶ್ರೀ ಲಕ್ಷ್ಮಿ ಹಯಗ್ರೀವರಿಗೆ ವಿಶೇಷ ಪೂಜೆ ಸಲ್ಲಿಸಿ, ರಾಜಗುರುಗಳಾದ ಶ್ರೀಮದ್ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳಿಗೆ ಗೌರವ ಸಮರ್ಪಿಸಿ, ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮೈಸೂರು ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪತ್ನಿ ತ್ರಿಷಿಕಾ ಒಡೆಯರ್, ಪುತ್ರರಾದ ಆದ್ಯವೀರ್ ನರಸಿಂಹ ರಾಜ ಒಡೆಯರ್, ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್, ಶ್ರೀಮಠದ ವೀರ ರಾಘವಚಾರ್, ಶ್ರೀನಿವಾಸ್ ರಾಘವನ್, ಭಾರತ್ ಆಕಾಶ್, ಟಿ.ಎಸ್.ಅರುಣ್ ಇನ್ನಿತರರು ಉಪಸ್ಥಿತರಿದ್ದರು.

ಜು.17ರಂದು ಪಡುವಾರಹಳ್ಳಿಯಲ್ಲಿ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ

ಮೈಸೂರು, ಜು.14–ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ)ದ ಶ್ರೀ



ಚಾಮುಂಡೇಶ್ವರಿ ಅಮ್ಮನವರ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಜು.17ರಂದು ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ ನಡೆಯಲಿದೆ. ಅಂದು ಬೆಳಗ್ಗೆ ಅಮ್ಮನವರಿಗೆ ಪಂಚಾಮೃತಾಭಿಷೇಕ, ದುರ್ಗಾಹೋಮ, ಮಧ್ಯಾಹ್ನ 12ಕ್ಕೆ ಮಹಾಪೂರ್ಣಾಹುತಿ, ಮಹಾ ಮಂಗಳಾರತಿ ಹಾಗೂ ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 7 ಗಂಟೆಗೆ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿಯನ್ನು ಪಡುವಾರಹಳ್ಳಿ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾತಂಡಗಳ ಸಮೇತ ಮೆರವಣಿಗೆ ಮಾಡಲಾಗುವುದು. ಇದೇ ವೇಳೆ ಉತ್ಸವ ಮೂರ್ತಿಗೆ ಬೆಳ್ಳಿ ಕವಚ ಧಾರಣೆ ಮಾಡಲಾಗುವುದು. ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಭಾಗವಹಿಸಲಿದ್ದಾರೆ.

ಕರ್ನಾಟಕ ಹೈಕೋರ್ಟ್ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ವಿಭು ಬಖ್ರು ನೇಮಕ

ನವದೆಹಲಿ: ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ವಿಭು ಬಖ್ರು ಅವರನ್ನು ನೇಮಿಸಿ ಕೇಂದ್ರ ಸರ್ಕಾರವು ಆದೇಶ ಹೊರಡಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ.



ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳಲಿರುವ ನ್ಯಾ. ಬಖ್ರು ಅವರು 1966ರಲ್ಲಿ ನಾಗಪುರದಲ್ಲಿ ಜನಿಸಿದರು. ದೆಹಲಿಯ ಮಥುರಾ ರಸ್ತೆಯಲ್ಲಿರುವ ದೆಹಲಿ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದು, 1987ರಲ್ಲಿ ದೆಹಲಿ ವಿಶ್ವವಿದ್ಯಾಲಯದಿಂದ ವಾಣಿಜ್ಯ ವಿಷಯದಲ್ಲಿ ಪದವಿ ಪಡೆದಿದ್ದಾರೆ. 1989ರಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿಯೂ ಅರ್ಹತೆ ಪಡೆದಿದ್ದರು. ಆನಂತರ 1990ರಲ್ಲಿ ಎಲ್‌ಎಲ್‌ಬಿ ಪದವಿ ಪಡೆದು, ಅದೇ ವರ್ಷ ದೆಹಲಿ ವಕೀಲರ ಪರಿಷತ್‌ನಲ್ಲಿ ವಕೀಲರಾಗಿ ನೋಂದಣಿ ಮಾಡಿಸಿದ್ದರು.

ನ್ಯಾ. ಬಖ್ರು ಅವರು ವಕೀಲರಾಗಿದ್ದ ಅವಧಿಯಲ್ಲಿ ಸುಪ್ರೀಂ ಕೋರ್ಟ್, ದೆಹಲಿ ಹೈಕೋರ್ಟ್, ಕಂಪನಿ ಕಾನೂನು ಮಂಡಳಿ ಮತ್ತು ಇತರೆ ನ್ಯಾಯ ಮಂಡಳಿಗಳಲ್ಲಿ ವಕೀಲಿಕೆ ಮಾಡಿದ್ದಾರೆ. 2011ರಲ್ಲಿ ಹಿರಿಯ ವಕೀಲರಾಗಿ ಅವರು ಪದೋನ್ನತಿ ಪಡೆದಿದ್ದರು. 2013ರ ಏಪ್ರಿಲ್ 17ರಂದು ದೆಹಲಿ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡ ಅವರು 2015ರ ಮಾರ್ಚ್ 18ರಂದು ಕಾಯಂಗೊಂಡಿದ್ದರು. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿ ಬಿ ಆರ್ ಗವಾಯಿ ನೇತೃತ್ವದ ಕೊಲಿಜಿಯಂ ಮುಖ್ಯ ನ್ಯಾಯಮೂರ್ತಿಗಳ ಹುದ್ದೆಗೆ ಈ ಮೇಲಿನ ಹೆಸರುಗಳನ್ನು ಶಿಫಾರಸ್ಸುಗಳನ್ನು ಮಾಡಿತ್ತು.

5 ಹುಲಿಗಳ ಸಾವು ಪ್ರಕರಣ

ಡಿಸಿಎಫ್ ವೈ.ಚಕ್ರಪಾಣಿ ಅಮಾನತು

ಚಾಮರಾಜನಗರ: ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಈಚೆಗೆ ನಡೆದ ಐದು ಹುಲಿಗಳ ಅಸಹಜ ಸಾವಿನ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿರುವ ಎಂ.ಎಂ ಹಿಲ್ಸ್ ವನ್ಯಜೀವಿ ವಿಭಾಗದ ಡಿಸಿಎಫ್ ವೈ.ಚಕ್ರಪಾಣಿ ಅವರನ್ನು ಸರ್ಕಾರ ಅಮಾನತುಗೊಳಿಸಿದೆ.



ಹುಲಿಗಳ ಸಾವಿನ ಸಂಬಂಧ ಸರ್ಕಾರ ರಚಿಸಿದ್ದ ಉನ್ನತ ಮಟ್ಟದ ತನಿಖಾ ಸಮಿತಿ ನೀಡಿರುವ ಶಿಫಾರಸಿನ ಆಧಾರದ ಮೇಲೆ ವೈ.ಚಕ್ರಪಾಣಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದ್ದು ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಲಾಗಿದೆ.

ಸಮಿತಿ ಶಿಫಾರಸು: ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗೆ ಮಾರ್ಚ್‌ನಿಂದ ಮೇವರೆಗೆ ವೇತನ ಬಿಡುಗಡೆ ಮಾಡದಿರುವುದು, ವೇತನಕ್ಕಾಗಿ ಆಗ್ರಹಿಸಿ ಜೂನ್ 23ರಂದು ಕಳ್ಳಬೇಟೆ ತಡೆ ಶಿಬಿರದ ವಾಚರ್‌ಗಳು ಕೊಳ್ಳೇಗಾಲದ ವಿಭಾಗೀಯ ಕಚೇರಿ ಎದುರು ಪ್ರತಿಭಟನೆ ಮಾಡಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

ಹೊರಗುತ್ತಿಗೆ ಸಿಬ್ಬಂದಿಗೆ ವೇತನ ಪಾವತಿಸುವ ಜವಾಬ್ದಾರಿ ಹೊತ್ತಿದ್ದ ಗುತ್ತಿಗೆದಾರ ಸಂಸ್ಥೆಯು ಸಮಯಕ್ಕೆ ಸರಿಯಾಗಿ ವೇತನ ಪಾವತಿ ಮಾಡದಿದ್ದರೂ ಡಿಸಿಎಫ್ ಸರಿಯಾಗಿ ಕರ್ತವ್ಯ ನಿರ್ವಹಿಸದಿರುವುದು ಕಂಡುಬಂದಿದೆ. ವೇತನ ಪಾವತಿಗೆ ಅಗತ್ಯ ಅನುದಾನ ಲಭ್ಯವಿದ್ದರೂ ಸಿಬ್ಬಂದಿಗೆ ಮಾರ್ಚ್ ತಿಂಗಳ ವೇತನ ಪಾವತಿ ಮಾಡಿಲ್ಲ. ಏಪ್ರಿಲ್ ಹಾಗೂ ಮೇ ತಿಂಗಳ ವೇತನ ಪಾವತಿ ಕೋರಿ ಖಜಾನೆಗೆ ಬಿಲ್ ಸಲ್ಲಿಸಲು ವಿಳಂಬ ತೋರಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಅಮಾನತುಗೊಂಡಿರುವ ವೈ.ಚಕ್ರಪಾಣಿ ಸರ್ಕಾರದ ಅನುಮತಿ ಇಲ್ಲದೆ ಕೇಂದ್ರಸ್ಥಾನ ತೊರೆಯುವಂತಿಲ್ಲ ಎಂದೂ ತಿಳಿಸಲಾಗಿದೆ.

ನಂಜುಂಡಸ್ವಾಮಿ ನಿಧನ



ಶ್ರೀರಂಗಪಟ್ಟಣ: ಪಟ್ಟಣದ ಪೂರ್ಣಯ್ಯ ಬೀದಿ ನಿವಾಸಿ ಛಾಯಾಗ್ರಾಹಕ ನಂಜುಂಡ (52) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಪಟ್ಟಣದ ಶಂಭುಲಿಂಗಯ್ಯನ ಕಟ್ಟೆಯಲ್ಲಿ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬವರ್ಗ ತಿಳಿಸಿದೆ.

ಪವರ್ ಶೇರಿಂಗ್ ಬಗ್ಗೆ ಏನು ಚರ್ಚೆ ನಡೆದಿದೆಯೋ ನನಗೆ ಗೊತ್ತಿಲ್ಲ

ಮೈಸೂರಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ

ಮೈಸೂರು, ಜು.14(ಬಿಎಲ್‌ಯು)– ಪವರ್ ಶೇರಿಂಗ್ ಕುರಿತಂತೆ ನಾಲ್ಕು ಗೋಡೆ ಮಧ್ಯೆ ಹೈಕಮಾಂಡ್‌ನಲ್ಲಿ ಏನು ಚರ್ಚೆ ನಡೆದಿದೆಯೋ ಎಂದು ನನಗೆ ಗೊತ್ತಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದರು.

ನಗರದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಯಾವ ಕ್ರಾಂತಿಯೂ ಆಗುವುದಿಲ್ಲ. ನಾನೇ ಐದು ವರ್ಷ ಸಿಎಂ ಆಗಿರುತ್ತೇನೆ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸೆಪ್ಟೆಂಬರ್ ಕ್ರಾಂತಿಗೆ ಫುಲ್‌ಸ್ಟಾಪ್ ಇಟ್ಟಿದ್ದಾರೆ ಎಂದರು.

ಕರ್ನಾಟಕದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಬಳಿ ಶಾಸಕರು ಯಾವ ಮಂತ್ರಿ ವಿರುದ್ಧ ದೂರು ನೀಡಿದ್ದಾರೆ ಎಂಬ ಮಾಹಿತಿ ನನಗಿಲ್ಲ. ಏನೇ ಭಿನ್ನಾಭಿಪ್ರಾಯ ಇದ್ದರೂ ಹೈಕಮಾಂಡ್ ಸರಿ ಮಾಡುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹೊರಗಿನಿಂದ ಬಂದ ಸಿದ್ದರಾಮಯ್ಯ ಎರಡು ಬಾರಿ ಸಿಎಂ ಆಗಿದ್ದಾರೆ ಎಂಬ ಕೆಲವು ಕಾಂಗ್ರೆಸ್ ನಾಯಕರ ಆಕ್ಷೇಪಣೆ ಬಗ್ಗೆ ಪ್ರತಿಕ್ರಿಯೆ ನೀಡಿದ ರಾಮಲಿಂಗಾರೆಡ್ಡಿ, ಎಲ್ಲಿಂದಲೇ ಬರಲಿ, ಅವರು ಈಗ ಕಾಂಗ್ರೆಸ್ ನಾಯಕರು. ಮಾಸ್ ಲೀಡರ್ ಆಗಿ ಒಳ್ಳೆಯ ಕೆಲಸ ಮಾಡಿರುವ ಹಿನ್ನೆಲೆಯಲ್ಲಿ 2ನೇ ಬಾರಿ ಸಿಎಂ ಆಗಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಕೂಡ ಹುಟ್ಟು ಹೋರಾಟಗಾರ. ವಿದ್ಯಾರ್ಥಿ ದಿಸೆಯಿಂದ ಕಾಂಗ್ರೆಸ್‌ನಲ್ಲಿ ತೊಡಗಿಸಿಕೊಂಡು ಈಗ ಈ ಮಟ್ಟಕ್ಕೆ ಬಂದಿದ್ದಾರೆ. ಕಾಲ ಕೂಡಿ ಬಂದಾಗ ಡಿ.ಕೆ.ಶಿವಕುಮಾರ್ ಕೂಡ ಮುಖ್ಯಮಂತ್ರಿ ಆಗುತ್ತಾರೆ. ಆದರೆ ಯಾವಾಗ ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದರು.

ಸೆ.7ರವರೆಗೆ ಚಿಕ್ಕಹಳ್ಳಿಯಲ್ಲಿ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿಗಳ ಚಾತುರ್ಮಾಸ್ಯ

ಮೈಸೂರು,ಜು.14(ಎಂಟಿವೈ)– ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯ ಚಿಕ್ಕಳ್ಳಿಯಲ್ಲಿರುವ ಅರೆಮಾದನಹಳ್ಳಿ ಶಾಖಾ ಮಠದ ವಿಶ್ವಕರ್ಮ ಸಮುದಾಯ ಭವನದಲ್ಲಿ ವಿಶ್ವಕರ್ಮ ಸಮುದಾಯ ಶ್ರೀ ಶಿವಸುಜ್ಞಾನತೀರ್ಥ ಸ್ವಾಮೀಜಿ ಜು.10ರಿಂದ ಆರಂಭಿಸಿರುವ 43ನೇ ಚಾತುರ್ಮಾಸ್ಯ ವ್ರತಾಚರಣೆ ಸೆ.7ರವರೆಗೂ ನಡೆಯಲಿದೆ ಎಂದು ಸಮುದಾಯ ಮುಖಂಡ ಮರೂರು ನಂಜುಂಡಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರೆಮಾದನಹಳ್ಳಿ ಶಾಖಾ ಮಠದ ಆಡಳಿತ ಮಂಡಳಿ ಹಾಗೂ ಶ್ರೀ ಶಿವ ಸುಜ್ಞಾನತೀರ್ಥ ಸ್ವಾಮೀಜಿ ನಡುವೆ ಇದ್ದ ಭಿನ್ನಾಭಿಪ್ರಾಯವನ್ನು ಚಾತುರ್ಮಾಸ್ಯದ ವ್ರತದ ನಂತರ ಬಗೆಹರಿಸುವುದಾಗಿ ಶ್ರೀಗಳು ಭರವಸೆ ನೀಡಿದ್ದಾರೆ ಎಂದರು.

ಈ ಹಿನ್ನೆಲೆಯಲ್ಲಿ ಸಮುದಾಯದ ಗೌರವ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಶಾಖಾ ಮಠದ ಆಡಳಿತ ಮಂಡಳಿ ಚಾತುರ್ಮಾಸ್ಯದ ಜವಾಬ್ದಾರಿ ವಹಿಸಿಕೊಂಡಿದೆ. ಇದರಿಂದ ಶ್ರೀಗಳು ಶಾಖಾ ಮಠದಲ್ಲಿಯೇ ವಾಸ್ತವ್ಯ ಹೂಡಿದ್ದಾರೆ. ಭಕ್ತರು ಆಗಮಿಸಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಎಂ.ಸಿ.ಮರಿಸ್ವಾಮಿ, ಸಿ.ಎ.ಈಶ್ವರಾಚಾರ್, ವಿ.ರುದ್ರಣ್ಣ ಎಚ್.ಎಸ್.ನಾಗೇಂದ್ರಕುಮಾರ್, ಚಂದ್ರು, ಹೆಚ್.ಆರ್.ರಂಗಪ್ಪ ಇದ್ದರು.

ಕೆವಿಕೆ ಫೌಂಡೇಶನ್‌ನಿಂದ ಸರೋಜಾದೇವಿ ನಿಧನಕ್ಕೆ ಸಂತಾಪ



ಸೋಮವಾರ ನಿಧನರಾದ ಹಿರಿಯ ನಟಿ ಸರೋಜಾದೇವಿ ಅವರಿಗೆ ಕೆವಿಕೆ ಫೌಂಡೇಶನ್‌ನಿಂದ ಮೌನಾಚರಣೆ ಮೂಲಕ ಸಂತಾಪ ಸಲ್ಲಿಸಲಾಯಿತು.

ಮೈಸೂರು,ಜು.14–ಕೆವಿಕೆ ಫೌಂಡೇಶನ್ ವತಿಯಿಂದ ಆರ್‌ಟಿಓ ವೃತ್ತದಲ್ಲಿ ನಮ್ಮನ್ನು ಅಗಲಿದ ಅಭಿನಯ ಸರಸ್ವತಿ ಎಂದೇ ಖ್ಯಾತರಾಗಿದ್ದ ಕನ್ನಡ ಚಿತ್ರರಂಗದ ಹಿರಿಯ ನಟಿ ಬಿ ಸರೋಜಾದೇವಿ ಅವರ ಭಾವಚಿತ್ರ ಹಿಡಿದು ಮೌನಾಚರಣೆ ಮಾಡುವ ಮೂಲಕ ಸಂತಾಪ ಸಲ್ಲಿಸಲಾಯಿತು.

ಕೆವಿಕೆ ಫೌಂಡೇಶನ್ ಅಧ್ಯಕ್ಷೆ ಖುಷಿ ವಿನು ಮಾತನಾಡಿ, ಕನ್ನಡದ ಹಿರಿಯ ನಟಿ ಬಿ.ಸರೋಜಾದೇವಿ ಅವರ ನಿಧನ ವಾರ್ತೆ ನೋವುಂಟು ಮಾಡಿದೆ. ಕನ್ನಡ ಚಿತ್ರರಂಗವು ಸೇರಿದಂತೆ ತಮಿಳು, ತೆಲುಗು ಮತ್ತು ಹಿಂದಿಯ ಸುಮಾರು 200 ಚಿತ್ರಗಳಲ್ಲಿ ನಟಿಸಿ, ಅಭಿನಯ ಸರಸ್ವತಿ ಎಂದೇ ಖ್ಯಾತರಾಗಿದ್ದರು.

ಸರೋಜಾದೇವಿ ಎಂದಾಕ್ಷಣ ಕಿತ್ತೂರು ಚೆನ್ನಮ್ಮ, ಬಬ್ರುವಾಹನ, ಅಣ್ಣ–ತಂಗಿ ಮುಂತಾದ ಚಿತ್ರಗಳಲ್ಲಿನ ಅವರ ಮನೋಜ್ಞ ಅಭಿನಯ ಕಣ್ಣಮುಂದೆ ಬರುತ್ತದೆ. ಸದಭಿರುಚಿಯ ಚಿತ್ರಗಳ ಮೂಲಕ ಹಲವು ದಶಕಗಳ ಕಾಲ ಸಿನಿಪ್ರಿಯರನ್ನು ರಂಜಿಸಿದ್ದ ಅವರ ಅಗಲಿಕೆ ಭಾರತೀಯ ಚಿತ್ರರಂಗಕ್ಕಾದ ಬಹುದೊಡ್ಡ ನಷ್ಟ. ಸರೋಜಾದೇವಿಯವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸುವೆ ಎಂದರು.

ರೇಖಾ ಶ್ರೀನಿವಾಸ್, ಕೇಬಲ್ ಮಹೇಶ್, ಅಪೂರ್ವ ಸುರೇಶ್, ನೀಲಾ, ನಗರ ಪಾಲಿಕೆ ಮಾಜಿ ಸದಸ್ಯರಾದ ಜಗದೀಶ್, ಜಿ.ರಾಘವೇಂದ್ರ, ಎಸ್.ಎನ್.ರಾಜೇಶ್, ಜತ್ತಿ ಪ್ರಸಾದ್, ಪುರುಷೋತ್ತಮ್, ಸುಚೇಂದ್ರ ಹರೀಶ್ ನಾಯ್ಡು ಕಿರಣ್ ಹಾಗೂ ಇನ್ನಿತರರು ಸಂತಾಪ ಸಭೆಯಲ್ಲಿದ್ದರು.

ಪೋಸ್ಟರ್ ಬಿಡುಗಡೆ



ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ವತಿಯಿಂದ ಆ.1ರಂದು ಬಂದಂತಮ್ಮ ಕಾಳಮ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿರುವ ಒಕ್ಕಲಿಗ ಮಹಿಳಾ ಸಮಾಜದ 25ನೇ ವರ್ಷದ ವಾರ್ಷಿಕೋತ್ಸವದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಪದಾಧಿಕಾರಿಗಳಾದ ರಾಜೇಶ್ವರಿ ನಾಗರಾಜ, ಅನಿತ ಸುನಂದ, ವಸಂತ, ಸುವರ್ಣ, ಗಣೇಶ, ವಿಮಲ, ರತ್ನ, ರುಕ್ಮಿಣಿ ರಮೇಶ್, ಸಂಘದ ಸದಸ್ಯರು ಭಾಗವಹಿಸಿದ್ದರು.

ದೇಶ – ವಿದೇಶ


ಬಾಹ್ಯಾಕಾಶಯಾನ ಮುಗಿಸಿ ಭೂಮಿಯತ್ತ ಹೊರಟ ಶುಕ್ಲಾ

ನವದೆಹಲಿ: ಆಕ್ಸಿಯಮ್–4 ಅಡಿಯಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಸೇರಿದಂತೆ ನಾಲ್ವರು ಗಗನಯಾತ್ರಿಗಳು ಭಾರತಕ್ಕೆ ವಾಪಸಾಗುತ್ತಿದ್ದಾರೆ. ಡ್ರ್ಯಾಗನ್ ನೌಕೆ ಮೂಲಕ ಭೂಮಿಯತ್ತ ಆಗಮಿಸುತ್ತಿರುವ ನಾಲ್ವರು ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ ಭೂಮಿಯತ್ತ ಪ್ರಯಾಣ ಬೆಳೆಸಿದ್ದಾರೆ. ಐಎಸ್‌ಎಸ್‌ನಿಂದ ಯಶಸ್ವಿಯಾಗಿ ಹೊರಟಿರುವ ಡ್ರ್ಯಾಗನ್ ನೌಕೆ ನಾಳೆ (ಮಂಗಳವಾರ) ಮಧ್ಯಾಹ್ನ 3ಕ್ಕೆ (ಭಾರತೀಯ ಕಾಲಮಾನ) ಭೂಮಿ ತಲುಪಲಿದೆ. ಭಾರತೀಯ ಗ್ರೂಪ್ ಕ್ಯಾಪ್ಟನ್ ಶುಕ್ಲಾ, ಅಮೆರಿಕದ ಪೆಗ್ಗಿ ವ್ಹಿಟ್ಸನ್, ಪೋಲೆಂಡ್‌ನ ಮಿಷನ್ ಸ್ಪೆಷಲಿಸ್ಟ್ ಸ್ಲಾವೋಸ್ಜ್ ಉಜ್ನಾನ್ಸ್ಕಿ–ವಿಸ್ನೀವ್ಸ್ಕಿ, ಹಂಗೇರಿಯದ ಗಗನಯಾನಿ ಟಿಬೋರ್ ಕಾಪು ಭೂಮಿಯತ್ತ ಪ್ರಯಾಣ ಬೆಳೆಸಿದ್ದಾರೆ. 1ಈ ಗಗನಯಾತ್ರಿಗಳನ್ನು ಹೊತ್ತು ಕರೆತರುತ್ತಿರುವ ಡ್ರ್ಯಾಗನ್ ನೌಕೆ ನಾಳೆ ಮಧ್ಯಾಹ್ನ ಕ್ಯಾಲಿಫೋರ್ನಿಯಾದ ಕರಾವಳಿ ಪ್ರದೇಶದಲ್ಲಿ ಇಳಿಯಲಿದೆ ಎಂದು ಕೇಂದ್ರ ಭೂವಿಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ.



ಕರಾಚಿ ತಲುಪಬೇಕಾಗಿದ್ದವನು ಸೌದಿ ಅರೇಬಿಯಾದಲ್ಲಿ ಬಂದಿಳಿದ

ಕರಾಚಿ: ಪಾಕಿಸ್ತಾನದ ವ್ಯಕ್ತಿಯೊಬ್ಬರು ಲಾಹೋರ್‌ನಿಂದ ಕರಾಚಿಗೆ ಹೊರಟವರು ವಿಮಾನಯಾನ ಸಂಸ್ಥೆಯ ಎಡವಟ್ಟಿನಿಂದ ಸೌದಿ ಅರೇಬಿಯಾಕ್ಕೆ ತಲುಪಿದ್ದಾರೆ. ಜುಲೈ 7ರಂದು ತನ್ನ ಮಗನಿಗೆ ಅನಾರೋಗ್ಯವಿರುವುದು ತಿಳಿದು ಏರ್‌ಸಿಯಾಲ್ ವಿಮಾನದಲ್ಲಿ ಕರಾಚಿಗೆ ಹೊರಟಿದ್ದ ಮಲಿಕ್ ಶಹರ್ಝ್ಯನ್ ಎನ್ನುವ ವ್ಯಕ್ತಿಯು ವಿಮಾನಯಾನ ಸಂಸ್ಥೆಯ ಎಡವಟ್ಟಿನಿಂದ ಸೌದಿ ತಲುಪಿದ್ದಾರೆ. ಆದರೆ, ಅವರ ವಸ್ತುಗಳು ಕರಾಚಿಗೆ ತಲುಪಿವೆ. ವಿಮಾನ ನಿಲ್ದಾಣದಲ್ಲಿ ಎರಡು ಏರ್‌ಸಿಯಾಲ್ ವಿಮಾನಗಳಿದ್ದವು, ಅದರಲ್ಲಿ ಒಂದು ಕರಾಚಿ ಹಾಗೂ ಇನ್ನೊಂದು ಜೆಡ್ಡಾಗೆ ತೆರಳಲು ಸಿದ್ಧವಾಗಿದ್ದವು. ಆದರೆ, ವಿಮಾನಯಾನ ಸಿಬ್ಬಂದಿಯು ಸರಿಯಾಗಿ ತಪಾಸಣೆ ಮಾಡದೇ ಅಂತರರಾಷ್ಟ್ರೀಯ ವಿಮಾನದಲ್ಲಿ ನನ್ನನ್ನು ಕರೆದುಕೊಂಡು ಹೋಗಿದ್ದಾರೆ. 2 ಗಂಟೆ ವಿಮಾನಯಾನದ ನಂತರವೂ ನಿಲ್ದಾಣ ತಲುಪದೇ ಇದ್ದಾಗ, ಎಡವಟ್ಟಿನ ಅರಿವಾಗಿದೆ ಎಂದು ಮಲಿಕ್ ಶಹರ್ಝ್ಯನ್ ತಿಳಿಸಿದ್ದಾರೆ. ಜೆಡ್ಡಾ ವಿಮಾನ ನಿಲ್ದಾಣದಲ್ಲಿ ವಲಸೆ ಅಧಿಕಾರಿಗಳು ಮಲಿಕ್ ಶಹರ್ಝ್ಯನ್ ಅವರನ್ನು ವಿಚಾರಣೆಗೆ ಒಳಪಡಿಸಿದ ನಂತರ, ಅವರ ತಪ್ಪಿಲ್ಲದಿರುವುದು ಗೊತ್ತಾಗಿದೆ. ನಂತರ, ವಿಮಾನಯಾನ ಸಂಸ್ಥೆಗೆ ಮುಂದಿನ ವಿಮಾನದಲ್ಲಿ ಅವರನ್ನು ಕರಾಚಿಗೆ ಕಳಿಸುವಂತೆ ಸೂಚಿಸಿದ್ದಾರೆ.



6 ದಿನದಿಂದ ನಾಪತ್ತೆಯಾಗಿದ್ದ ವಿದ್ಯಾರ್ಥಿನಿ ಮೃತದೇಹ ಯಮುನಾ ನದಿಯಲ್ಲಿ ಪತ್ತೆ

ನವದೆಹಲಿ: ಕಳೆದ 6 ದಿನಗಳಿಂದ ನಾಪತ್ತೆಯಾಗಿದ್ದ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯ ಮೃತದೇಹ ಯಮುನಾ ನದಿಯಲ್ಲಿ ಭಾನುವಾರ ಸಂಜೆ ಪತ್ತೆಯಾಗಿದೆ. ಉತ್ತರ ದೆಹಲಿಯ ಗೀತಾ ಕಾಲೋನಿ ಬಳಿ ಇರುವ ಯಮುನಾ ನದಿಯಲ್ಲಿ ಮೃತದೇಹ ಪತ್ತೆಯಾಗಿದ್ದು ಮೃತ ವಿದ್ಯಾರ್ಥಿನಿಯನ್ನು ತ್ರಿಪುರ ಮೂಲದ ಸ್ನೇಹಾ ದೇಬ್ನಾಥ್ (19) ಎಂದು ಗುರುತಿಸಲಾಗಿದೆ. ಸ್ನೇಹಾ ದಕ್ಷಿಣ ದೆಹಲಿಯ ಪರ್ಯಾವರಣ್‌ನಲ್ಲಿ ವಾಸವಾಗಿದ್ದು ಜುಲೈ 7ರಂದು ಬೆಳಿಗ್ಗೆ 5.56ಕ್ಕೆ ತಮ್ಮ ಕುಟುಂಬ ಸದಸ್ಯರಿಗೆ ಕರೆ ಮಾಡಿ, ಸ್ನೇಹಿತೆಯನ್ನು ರೈಲು ನಿಲ್ದಾಣಕ್ಕೆ ಬಿಡಲು ಸರೈ ರೋಹಿಲ್ಲಾ ರೈಲ್ವೆ ನಿಲ್ದಾಣಕ್ಕೆ ಹೋಗುತ್ತಿರುವುದಾಗಿ ತಿಳಿಸಿದರು. ಇದಾದ ಕೆಲ ಸಮಯದ ಬಳಿಕ ಸ್ನೇಹಾಳ ಫೋನ್ ಸ್ವಿಚ್ ಆಫ್ ಆಗಿತ್ತು. ಈ ವೇಳೆ ಸ್ನೇಹಾ ಸಹೋದರಿ ಸ್ನೇಹಾಳ ಸ್ನೇಹಿತೆಗೆ ಕರೆ ಮಾಡಿ ಸ್ನೇಹಾಳ ಬಗ್ಗೆ ವಿಚಾರಿಸಿದ್ದಾರೆ ಈ ವೇಳೆ ಆಕೆ ನನ್ನ ಜೊತೆ ಇಲ್ಲ ಎಂದು ಹೇಳಿದ್ದಾಳೆ. ಇದಾದ ಬಳಿಕ ಸ್ನೇಹಾ ರೈಲ್ವೆ ನಿಲ್ದಾಣಕ್ಕೆ ಹೋಗಿರುವುದಲ್ಲ ಬದಲಾಗಿ ಸಿಗ್ನೇಚರ್ ಸೇತುವೆ ಬಳಿಗೆ ಎಂಬುದು ತಿಳಿದುಬಂದಿದೆ. ಘಟನೆ ಕುರಿತು ಪೋಷಕರು ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ನೀಡಿದ್ದರು.



ಎಲ್ಲ ಬೋಗಿಯಲ್ಲೂ ಕ್ಯಾಮರಾ ಅಳವಡಿಸಲು ರೈಲ್ವೇ ಸಿದ್ಧತೆ

ಹೊಸದಿಲ್ಲಿ: ರೈಲು ಪ್ರಯಾಣಿಕರ ಸುರಕ್ಷೆಯನ್ನು ಹೆಚ್ಚಳ ಮಾಡುವುದಕ್ಕಾಗಿ ಎಲ್ಲ ರೈಲಿನ ಎಲ್ಲ ಬೋಗಿಗಳಲ್ಲೂ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲು ನಿರ್ಧರಿಸಿರುವುದಾಗಿ ಭಾರತೀಯ ರೈಲ್ವೇ ಹೇಳಿದೆ. ರೈಲು ಬೋಗಿಗಳು ಮತ್ತು ಎಂಜಿನ್‌ಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸುವ ಯೋಜನೆಯನ್ನು ಉತ್ತರ ರೈಲ್ವೇ ವಿಭಾಗದಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿತ್ತು. ಈ ಯೋಜನೆ ಯಶಸ್ಸು ಕಂಡ ಬೆನ್ನಲ್ಲೇ ಇದನ್ನು ದೇಶಾದ್ಯಂತ ಎಲ್ಲ ರೈಲುಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ. ಹೀಗಾಗಿ 74,000 ಬೋಗಿಗಳು ಹಾಗೂ 15000 ಲೋಕೋ ಎಂಜಿನ್‌ಗಳಲ್ಲಿ ಸಿಸಿಟಿವಿ ಅಳವಡಿಕೆ ಮಾಡಲು ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅನುಮತಿ ನೀಡಿದ್ದಾರೆ ಎನ್ನಲಾಗಿದೆ. ರೈಲು ಬೋಗಿಗಳಲ್ಲಿ ಸಿಸಿಟಿವಿ ಅಳವಡಿಕೆ ಮಾಡುವುದರಿಂದ ರೈಲಿನಲ್ಲಿ ನಡೆಯುತ್ತಿರುವ ದರೋಡೆಗಳನ್ನು ತಡೆಗಟ್ಟಬಹುದು, ಗುಂಪುದಾಳಿಗಳನ್ನು ತಡೆಯಬಹುದು ಎಂದು ರೈಲ್ವೇ ಹೇಳಿದೆ. ಪ್ರಯಾಣಿಕರ ಬೋಗಿಗಳಲ್ಲಿ ಸಿಸಿಟಿವಿಗಳನ್ನು ಅಳವಡಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಈವರೆಗೆ ಸಕಾರಾತ್ಮಕ ಫಲಿತಾಂಶ ಸಿಕ್ಕಿದೆ.



ಲಂಡನ್: ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ವಿಮಾನ ಪತನ

ಲಂಡನ್: ಲಂಡನ್‌ನ ಸೌತ್ ಎಂಡ್ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ಸಣ್ಣ ವಿಮಾನವೊಂದು ಪತನಗೊಂಡಿರುವ ಮಾಹಿತಿ ಲಭ್ಯವಾಗಿದೆ. ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದ್ದು, ಸ್ಥಳದಿಂದ ಕಪ್ಪು ಹೊಗೆ ಮೇಲೇರುತ್ತಿರುವುದನ್ನು ವಿಡಿಯೋದಲ್ಲಿ ಕಾಣಬಹುದು. ಇಲ್ಲಿಯವರೆಗೆ ಯಾವುದೇ ಸಾವುನೋವುಗಳ ವರದಿಯಾಗಿಲ್ಲ. ಸ್ಥಳೀಯ ಸಮಯ ಸಂಜೆ 4 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ.



ಪ್ರಾಥಮಿಕ ಮಾಹಿತಿ ಪ್ರಕಾರ, ಅಪಘಾತಕ್ಕೀಡಾದ ವಿಮಾನವು ಬೀಚ್ ಬಿ200 ಸೂಪರ್ ಕಿಂಗ್ ಏರ್ ಆಗಿದ್ದು, ಇದು ಡ್ಯುಯಲ್ ಎಂಜಿನ್ ಹೊಂದಿರುವ ಟರ್ಬೊಪ್ರೊಪ್ ಜೆಟ್ ಆಗಿದ್ದು, ನೆದರ್‌ಲ್ಯಾಂಡ್ಸ್‌ನ ಲೆಲಿಸ್ಟಾಡ್‌ಗೆ ತೆರಳುತ್ತಿತ್ತು. ವಿಮಾನದಲ್ಲಿ ಎಷ್ಟು ಜನರಿದ್ದರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇತ್ತೀಚೆಗಷ್ಟೇ ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ 270 ಮಂದಿ ಪ್ರಾಣ ಕಳೆದುಕೊಂಡಿದ್ದರು.

ಅಂಕಣಕಾರರಾಗಿ ಜನಮನದಲ್ಲಿ ನೆಲೆಯೂರಿದ ಕೆಬಿಜಿ

ಮಡಿಕೇರಿ,ಜು.14–ನಾಲ್ಕು ದಶಕಕ್ಕೂ ಹೆಚ್ಚು ಕಾಲ ಅಂಕಣಕಾರರಾಗಿ, ಪತ್ರಕರ್ತರಾಗಿ ಜನಮನದಲ್ಲಿ ನೆಲೆಯೂರಿದ ಹಿರಿಯ ಪತ್ರಕರ್ತ ಕೆ.ಬಿ.ಜಿ. ಅಗಲಿಕೆಗೆ ಪತ್ರಕರ್ತರು, ಸಂಘ ಸಂಸ್ಥೆಗಳ ಪ್ರಮುಖರು ನುಡಿ ನಮನ ಸಲ್ಲಿಸಿದರು.

ನಗರದ ಪತ್ರಿಕಾ ಭವನದಲ್ಲಿ ಜಿಲ್ಲಾ ಪತ್ರಕರ್ತರ ಸಂಘದಿಂದ ನಡೆದ ಸಭೆಯಲ್ಲಿ ಮಾತನಾಡಿದ ಹಿರಿಯ ಪತ್ರಕರ್ತ ಜಿ. ರಾಜೇಂದ್ರ, ಮೇರು ವ್ಯಕ್ತಿತ್ವದ ಗಣಪತಿ ಅವರ ಅಗಲಿಕೆ ಪತ್ರಿಕೋದ್ಯಮ ಮಾತ್ರವಲ್ಲದೇ ಸಮಾಜಕ್ಕೂ ಸಾಕಷ್ಟು ನಷ್ಟ ಉಂಟು ಮಾಡಿದೆ. ಯಾರನ್ನೂ ದ್ವೇಷಿಸದ, ಯಾರನ್ನೂ ದೂಷಿಸದ ಗಣಪತಿ ಅವರಲ್ಲಿದ್ದ ಸದ್ಗುಣ ಇತರರಿಗೂ ಆದರ್ಶಪ್ರಾಯವಾಗಿದೆ ಎಂದು ಸ್ಮರಿಸಿಕೊಂಡರು.

ಹಿರಿಯ ಪತ್ರಕರ್ತ ಬೈ.ಶ್ರೀ. ಪ್ರಕಾಶ್ ಮಾತನಾಡಿ, 4 ವರ್ಷಗಳ ಕಾಲ ಮೈಸೂರು ಮಿತ್ರದ ಕೊಡಗು ವರದಿಗಾರನಾಗಿ ಕಾರ್ಯ ನಿರ್ವಹಿಸಿದ ದಿನಗಳು ಅವಿಸ್ಮರಣೀಯವಾಗಿದ್ದು, ಅನೇಕ ಸಂಸ್ಥೆಗಳಿಗೆ ಆರ್ಥಿಕ ನೆರವನ್ನೂ ನೀಡಿದ್ದರೂ ಪ್ರಚಾರವನ್ನು ಎಂದಿಗೂ ಬಯಸದ ವಿಶೇಷ ಸ್ವಭಾವ ಅವರದ್ದಾಗಿತ್ತು ಎಂದು ಹೆಮ್ಮೆಯಿಂದ ನುಡಿದರು.

ಹಿರಿಯ ಪತ್ರಕರ್ತ ಬಿ.ಜಿ. ಅನಂತಶಯನ ಮಾತನಾಡಿ, ಸಾಕಷ್ಟು ದೇಶಗಳಿಗೆ ಪ್ರವಾಸ ಮಾಡಿದ್ದ ಗಣಪತಿ ಅವರ ಅನುಭವದ ಆಧಾರದಲ್ಲಿ ಪ್ರಕಟಿತ ಕೃತಿಗಳು ದಾಖಲಾರ್ಹವಾಗಿವೆ ಎಂದರು. ಭಾರತೀಯ ವಿದ್ಯಾಭವನ ಕೊಡಗು ಕೇಂದ್ರದ ಗೌರವ ಕಾರ್ಯದರ್ಶಿ ಬಾಲಾಜಿ ಕಶ್ಯಪ್ ಮಾತನಾಡಿ, ಮೈಸೂರಿನಲ್ಲಿ ಭಾರತೀಯ ವಿದ್ಯಾಭವನಕ್ಕೆ ಗಣಪತಿ ಅವರು ಸಾಕಷ್ಟು ಹೊಸತನದಿಂದ ವಿದ್ಯಾಭವನಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ ಎಂದರು.



ಹಿರಿಯ ಪತ್ರಕರ್ತ ಕೆ.ಬಿ.ಜಿ. ಅಗಲಿಕೆಗೆ ಸಂಘದ ಮೂಲಕ ಪತ್ರಕರ್ತರು, ಸಂಘ ಸಂಸ್ಥೆಗಳ ಪ್ರಮುಖರು ನುಡಿ ನಮನ ಸಲ್ಲಿಸಿದರು.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, ಮೈಸೂರಿನಲ್ಲಿ ಪತ್ರಿಕೋದ್ಯಮಿಯಾಗಿದ್ದರೂ ಕೊಡಗು, ಕೊಡವ ಸಂಸ್ಕೃತಿ ಬಗ್ಗೆ ಸಾಕಷ್ಟು ಪ್ರಚಾರ ನೀಡುವ ಮೂಲಕ ಮೈಸೂರು–ಕೊಡಗಿನ ಬೆಸುಗೆಯಂತೆ ಗಣಪತಿ ಕಂಗೊಳಿಸಿದ್ದರು ಎಂದು ಹೇಳಿದರು. ಗಾಂಧಿ ಎಂದೇ ಆಪ್ತರ ಬಳಗದಲ್ಲಿ ಖ್ಯಾತರಾಗಿದ್ದ ಕಲ್ಯಾಟಂಡ ಗಣಪತಿ ಅವರ ಅಂಕಣ ಬರಹಗಳು ಸದಾ ಓದುಗರ ಮನದಲ್ಲಿ ಶಾಶ್ವತವಾಗಿರುತ್ತದೆ ಎಂದೂ ಅನಿಲ್ ಹೇಳಿದರು.

ಪತ್ರಿಕಾಭವನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ. ಉಮೇಶ್, ಹಿರಿಯ ಪತ್ರಕರ್ತ ಜಿ. ಚಿದ್ವಿಲಾಸ್, ಪತ್ರಕರ್ತರ ಸಂಘದ ಸಹ ಕಾರ್ಯದರ್ಶಿ ಪ್ರಸಾದ್ ಸಂಪಿಗೆಕಟ್ಟೆ ಮಾತನಾಡಿ ಕೆಬಿಜಿಯವರ ಸೇವೆಯನ್ನು ಸ್ಮರಿಸಿದರು. ಕೆ.ಬಿ.ಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ, ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಟಿ.ಜೆ. ಸತೀಶ್, ರಾಜ್ಯ ಔಷಧಿ ವ್ಯಾಪಾರಸ್ಥರ ಸಂಘದ ಪ್ರಧಾನ ಕಾರ್ಯದರ್ಶಿ ಅಂಬೆಕಲ್ ಜೀವನ್, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ, ರೋಟರಿ ವುಡ್ಸ್ ನಿರ್ದೇಶಕ ವಸಂತ್ ಕುಮಾರ್, ಯೋಗ ಗುರು ಕೆ.ಕೆ.ಮಹೇಶ್ ಕುಮಾರ್, ಲಯನ್ಸ್ ಕ್ಲಬ್ ನಿರ್ದೇಶಕ ಅಂಬೆಕಲ್ ನವೀನ್ ಕುಶಾಲಪ್ಪ, ಸಂಘದ ಸ್ಥಾಪಕ ಕಾರ್ಯದರ್ಶಿ ಉಜ್ವಲ್ ರಂಜಿತ್, ಕುಶಾಲನಗರ ತಾಲೂಕು ಸಂಘದ ಅಧ್ಯಕ್ಷ ವಿಘ್ನೇಶ್ ಭೂತನ ಕಾಡು, ಸಂಘದ ಜಿಲ್ಲಾ ನಿರ್ದೇಶಕ ಗುರುದರ್ಶನ್, ರಂಜಿತ್ ಕವಲಪಾರ, ಹೆಚ್.ಟಿ.ಶಿವಪ್ಪ, ಅರುಣ್ ಕೂರ್ಗ್, ಪ್ರವೀಣ್‌ಕುಮಾರ್, ಎಚ್.ಎನ್. ಲಕ್ಷ್ಮೀಶ್, ಬಿ.ಎಸ್. ದಿನೇಶ್, ಸದಸ್ಯ ದಕ್ಷಿಣಮೂರ್ತಿ, ಶಿವಪ್ರಸಾದ್ ಹಾಜರಿದ್ದರು.

2ನೇ ವರ್ಷ ಪೂರೈಸಿದ ಶಕ್ತಿ ಯೋಜನೆ ಕಾಂಗ್ರೆಸ್ ಸಂಭ್ರಮಾಚರಣೆ



ಕುಶಾಲನಗರದ ಬಸ್ ನಿಲ್ದಾಣದಲ್ಲಿ ಎರಡು ವರ್ಷಗಳ ಸಂಭ್ರಮಾಚರಣೆನಡೆಯಿತು.

ಕುಶಾಲನಗರ, ಜು.14–ಶಕ್ತಿಯೋಜನೆಯ ಎರಡು ವರ್ಷಗಳ ಸಂಭ್ರಮಾಚರಣೆ ಕುಶಾಲನಗರದ ಸಾರಿಗೆ ಬಸ್ ನಿಲ್ದಾಣದಲ್ಲಿ ನಡೆಯಿತು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಿಂದ ನಡೆದ ಕಾರ್ಯಕ್ರಮದಲ್ಲಿ ಫಲಾನುಭವಿಗಳೊಂದಿಗೆ ಸೇರಿ ನೆರೆದಿದ್ದವರಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ನಿಗಮದ ಬಸ್‌ಗೆ ಪೂಜೆ ನೆರವೇರಿಸಲಾಯಿತು. ಇದೇ ಸಂದರ್ಭ

ಸಾರಿಗೆ ಸಂಸ್ಥೆಯ ಅಧಿಕಾರಿ, ಸಿಬ್ಬಂದಿಗಳ ಸೇವೆ ಪರಿಗಣಿಸಿ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಧಾರ್ಮಿಕ ಕ್ಷೇತ್ರಗಳಿಗೆ, ಪ್ರವಾಸಕ್ಕೆ ತೆರಳಲು ಉಂಟಾಗುತ್ತಿದ್ದ ಆರ್ಥಿಕ ಹೊರೆ ತಪ್ಪಿದೆ. ಜಿಲ್ಲೆಯಲ್ಲಿ ರೂ.511 ಕೋಟಿಯಷ್ಟು ಹಣ ಸಾರಿಗೆ ಸಂಸ್ಥೆಗೆ ಒದಗಿದೆ ಎಂದರು.

ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವಿ.ಪಿ.ಶಶಿಧರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ ಚಂದ್ರ, ಮಡಿಕೇರಿ ಘಟಕ ಸಾರಿಗೆ ಸಂಸ್ಥೆ ಸಹಾಯಕ ಸಂಚಾರ ಅಧೀಕ್ಷಕ ಎ.ಈರಸಪ್ಪ, ಕೆಡಿಪಿ ಸದಸ್ಯ ಟಿ.ಪಿ.ಹಮೀದ್, ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ ಸೇರಿದಂತೆ ಪುರಸಭೆ ಸದಸ್ಯರುಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

ಉಲುಗುಲಿ ತೋಟಕ್ಕೆ ಕಾಡಾನೆ ದಾಳಿ: ಫಸಲು ಹಾನಿ



ಸುಂಟಿಕೊಪ್ಪ: ಪಟ್ಟಣದ ಅಂಚಿನಲ್ಲಿರುವ ಉಲುಗುಲಿ ತೋಟಕ್ಕೆ ಕಾಡಾನೆಗಳು ದಾಳಿ ಮಾಡಿದ್ದು, ಅಪಾರ ಪ್ರಮಾಣದಲ್ಲಿ ಕೃಷಿ ಫಸಲನ್ನು ಹಾಳುಗೆಡವಿದೆ. ರಾತ್ರಿ ವೇಳೆ ತೋಟಕ್ಕೆ ಲಗ್ಗೆಯಿಟ್ಟ ಕಾಡಾನೆಗಳು ಕಾಫಿ, ತೆಂಗು, ಅಡಿಕೆ, ಜೇನು ಪೆಟ್ಟಿಗೆ ಸಹಿತ ಫಸಲು ಭರಿತ ಗಿಡಗಳನ್ನು ತುಳಿದು ಧ್ವಂಸಗೊಳಿಸಿದೆ. ತೋಟದಲ್ಲಿದ್ದ ಸಿಂಟೆಕ್ಸ್ ನೀರಿನ ಟ್ಯಾಂಕನ್ನು ತಿವಿದು ಹಾನಿಗೊಳಿಸಿದೆ. ಹಲವು ದಿನಗಳಿಂದ ಕಾಡಾನೆಗಳು ಈ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದು, ಕೃಷಿ ಫಸಲು ಮಾತ್ರವಲ್ಲ ಜನರ ಪ್ರಾಣಕ್ಕೂ ಅಪಾಯ ಸಾಧ್ಯತೆ ಇದೆ. ಅನಾಹುತ ಸಂಭವಿಸುವ ಮುನ್ನ ಅರಣ್ಯ ಇಲಾಖೆ ಸೂಕ್ತ ಕ್ರಮಕ್ಕೆ ತೋಟದ ವ್ಯವಸ್ಥಾಪಕ ಅಬ್ದುಲ್ ಸಲಾಂ ಆಗ್ರಹಿಸಿದ್ದಾರೆ.

ಅರಿವು ಕಾರ್ಯಕ್ರಮ

ಕುಶಾಲನಗರ, ಜು.14– ತಾಲೂಕಿನ ಹುಲುಗೂಲಿ ಟಿಸಿಎಲ್ ಎಸ್ಟೇಟ್‌ನಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸುವ ಮೂಲಕ ಜನಸಂಖ್ಯಾ ಸ್ಫೋಟದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಕಾರ್ಮಿಕರಿಗೆ ಅರಿವು ಮೂಡಿಸಲಾಯಿತು.

ಮಡಿಕೇರಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಮಡಿಕೇರಿ ಜು.15ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಸಂಪಿಗೆ ಕಟ್ಟೆ, ಕನ್ನಂಡಬಾಣೆ, ಎ.ವಿ.ಶಾಲೆ, ಗದ್ದಿಗೆ, ಉಕ್ಕುಡ, ಅಜಾದ್‌ನಗರ, ತ್ಯಾಗರಾಜ ಕಾಲೋನಿ, ಅಬ್ಬಿಫಾಲ್ಸ್ ರಸ್ತೆ, ಭಗವತಿ ನಗರ, ಮಲ್ಲಿಕಾರ್ಜುನ ನಗರ, ರಾಣಿಪೇಟೆ, ಮಾರ್ಕೆಟ್ ರಸ್ತೆ, ಮಹದೇವಪೇಟೆ, ಕಾನ್ವೆಂಟ್ ಜಂಕ್ಷನ್, ಕೂರ್ಗ್ ಇಂಟರ್ ನ್ಯಾಷನಲ್, ಐಟಿಐ ಕಾಲೇಜು ಹಿಂಭಾಗ, ಕಾವೇರಿ ಲೇಔಟ್, ಟಿ.ಜಾನ್ ಲೇಔಟ್, ಅಬ್ದುಲ್ ಕಲಾಮ್ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ವಿದ್ಯುತ್ ಸ್ಪರ್ಶ: ನಿರೀಕ್ಷಣಾ ಮಂದಿರಕ್ಕೆ ಹಾನಿ



ವಿರಾಜಪೇಟೆ:ವಿದ್ಯುತ್ ಸ್ಪರ್ಶಗೊಂಡು ನಿರೀಕ್ಷಣಾ ಮಂದಿರದ ಮೇಲ್ಛಾವಣಿ ಸೇರಿದಂತೆ ಅನೇಕ ಸಾಮಗ್ರಿಗಳು ಸುಟ್ಟು ಹೋದ ಘಟನೆ ಸಂಭವಿಸಿದೆ

ಪಟ್ಟಣದ ಲೋಕೋಪಯೋಗಿ ಇಲಾಖೆಗೆ ಸೇರಿದ ಮನೆಯಲ್ಲಿ ಮಧ್ಯಾಹ್ನ 12 ಗಂಟೆ ಸುಮಾರಿಗೆ ದಟ್ಟವಾದ ಹೊಗೆ ತುಂಬಿಕೊಂಡಾಗ ಅಕ್ಕಪಕ್ಕದವರು ಹಾಗೂ ಪೊಲೀಸರು ಸ್ಥಳಕ್ಕೆ ಆಗಮಿಸಿ ಅಗ್ನಿಶಾಮಕ ದಳಕ್ಕೆ ದೂರವಾಣಿ ಮೂಲಕ ಸಂಪರ್ಕಿಸಿದ್ದಾರೆ. ಗೋಣಿಕೊಪ್ಪಲಿನಿಂದ ಬಂದ ಅಗ್ನಿಶಾಮಕದಳ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.ಅಷ್ಟೊತ್ತಿಗಾಗಲೇ ನಿರೀಕ್ಷಣಾ ಮಂದಿರದ ಮಂಚ, ಹಾಸಿಗೆ, ಫ್ರಿಜ್, ಫ್ಯಾನ್, ಟಿವಿ ಇತರ ಸಾಮಗ್ರಿಗಳು ಸುಟ್ಟು ಬೂದಿಯಾಗಿವೆ. ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಠಾಣಾಧಿಕಾರಿ ಪ್ರಮೋದ್ ಅಗ್ನಿಯನ್ನು ನಂದಿಸುವಲ್ಲಿ ಶ್ರಮಿಸಿದ್ದರು. ಬೆಂಕಿ ನಂದಿಸುವಾಗ ಪುರಸಭೆ ಮುಖ್ಯಾಧಿಕಾರಿ, ಅಧ್ಯಕ್ಷರು ಉಪಾಧ್ಯಕ್ಷರಿದ್ದರು

ಸಮನ್ವಯತೆಯಲ್ಲಿ ಕಾಡಾನೆ ನಿಯಂತ್ರಣಕ್ಕೆ ನಿರ್ಧಾರ

ಗೋಣಿಕೊಪ್ಪ, ಜು.14– ಮಾಯಮುಡಿ, ತಿತಿಮತಿ, ದೇವರಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಡಾನೆ ನಿಯಂತ್ರಿಸುವ ಬಗ್ಗೆ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅರಣ್ಯ ಅಧಿಕಾರಿಗಳ ಸಮಾಲೋಚನೆ ಸಭೆ ತಿತಿಮತಿ ನಿರೀಕ್ಷಣಾ ಮಂದಿರದಲ್ಲಿ ನಡೆಯಿತು.

ವನ್ಯಜೀವಿ ಎಸಿಎಫ್ ಲಕ್ಷ್ಮೀಕಾಂತ್, ತಿತಿಮತಿ ಆರ್‌ಎಫ್‌ಒ ಗೋಪಾಲ್, ಆನೆಚೌಕೂರು ವನ್ಯಜೀವಿ ವಲಯ ಅಧಿಕಾರಿ ದೇವರಾಜ್ ಭಾಗವಹಿಸಿ ಕಾಡಾನೆ ನಿಯಂತ್ರಿಸುವ ಸಲುವಾಗಿ ಅರಣ್ಯ ಇಲಾಖೆ, ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರುಗಳು ಒಟ್ಟಾಗಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಒಂದಷ್ಟು ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಆನೆ ಕಂದಕ, ಬ್ಯಾರಿಕೇಡ್ ನಿರ್ಮಾಣ, ಸೋಲಾರ್ ಬೇಲಿ ನಿರ್ವಹಣೆಯಿಂದ ಕಾಡಾನೆ ನಿಯಂತ್ರಿಸಲು ಸೂಕ್ತ ರೀತಿಯಲ್ಲಿ ನಿರ್ವಹಣೆಗೆ ನಿರ್ಧರಿಸಲಾಯಿತು. ಅನುದಾನ ಬಳಕೆ ಮಾಡಿಕೊಂಡು ಮುಂದುವರಿಯುವಂತೆಯೂ, ಈಗಾಗಲೇ ಗ್ರಾಮದಿಂದ 2 ಹಿಂಡು ಕಾಡಾನೆಗಳನ್ನು ಅರಣ್ಯಕ್ಕೆ ಸೇರಿಸಿರುವ ಬಗ್ಗೆ ಮತ್ತು ಉಳಿದ 4 ಆನೆಗಳನ್ನು 5 ದಿನಗಳಲ್ಲಿ ಕಾಡಿಗೆ ಅಟ್ಟಲು ಸೂಕ್ತ ಕ್ರಮಕ್ಕೆ ಮುಂದಾಗುವಂತೆ ನಿರ್ಧರಿಸಲಾಯಿತು. ಹಿಂದೆ ಚಾಲನೆಯಲ್ಲಿದ್ದ ಎಇಡಿಸಿ ಕಮಿಟಿಯನ್ನು ಮತ್ತೆ ಚಾಲನೆಗೆ ತರಲಾಯಿತು. ವಾಟ್ಸಾಪ್ ಗ್ರೂಪ್‌ಗಳ ಮೂಲಕ ನೇರವಾಗಿ ಕಾಡಾನೆ ಚಲನವಲನ, ಅಗತ್ಯ ಕ್ರಮವನ್ನು ಮೇಲಾಧಿಕಾರಿಗಳಿಗೆ ತಲುಪಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಯಿತು.



ಕಾಡಾನೆ ನಿಯಂತ್ರಿಸುವ ಬಗ್ಗೆ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅರಣ್ಯ ಅಧಿಕಾರಿಗಳ ಸಮಾಲೋಚನೆ ಸಭೆ ತಿತಿಮತಿ ನಿರೀಕ್ಷಣಾ ಮಂದಿರದಲ್ಲಿ ನಡೆಯಿತು.

ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ನಿವೃತ್ತ ಮುಖ್ಯಸ್ಥ ಡಾ. ಸಿ. ಜಿ. ಕುಶಾಲಪ್ಪ, ಮಾಯಮುಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಆಪಟ್ಟೀರ ಟಾಟು ಮೊಣ್ಣಪ್ಪ, ಪ್ರಮುಖರಾದ ಚೆಪ್ಪುಡೀರ ಕಾರ್ಯಪ್ಪ, ಸಣ್ಣುವಂಡ ಬಿ. ರಮೇಶ್, ಚೆಪ್ಪುಡೀರ ರಾಮಕೃಷ್ಣ ಇದ್ದರು.

ವಾಹನಗಳ ಓಡಾಟ ನಿಷೇಧ ಉಲ್ಲಂಘಿಸಿದ 3 ಲಾರಿಗಳ ವಶ



ಸಂಚಾರನಿಯಮ ಉಲ್ಲಂಘಿಸಿದ 3 ಲಾರಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಿದ್ದಾಪುರ,ಜು.14– ಕೊಡಗು ಜಿಲ್ಲೆಯಲ್ಲಿ ಭಾರೀ ಸರಕು ಸಾಗಾಟ ವಾಹನಗಳ ಓಡಾಟಕ್ಕೆ ನಿಷೇಧವಿರುವ ನಡುವೆಯೇ ಮರದ ದಿಮ್ಮಿಗಳನ್ನು ತುಂಬಿದ 3 ಲಾರಿಗಳನ್ನು ಸಿದ್ದಾಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸಿದ್ದಾಪುರ ಸಮೀಪದ ಆನಂದಪುರ ಹಂಚಿಕಾಡು ಎಸ್ಟೇಟ್‌ನಲ್ಲಿ ರಸ್ತೆ ಸಂಚಾರ ನಿಯಮ ಮೀರಿ ಮರದ ದಿಮ್ಮಿಗಳನ್ನು ಸಾಗಿಸಲು ಯತ್ನಿಸುತ್ತಿರುವ ಖಚಿತ ಮಾಹಿತಿ ಮೇರೆಗೆ ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು ಮಾಲು ಸಹಿತ ಮೂರು ವಾಹನಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ಮಂಜುನಾಥ್, ಸಹಾಯಕ ಠಾಣಾಧಿಕಾರಿ ಶ್ರೀನಿವಾಸ್, ಅಪರಾಧ ಪತ್ತೆ ದಳದ ಸಿಬ್ಬಂದಿ ಪ್ರಸನ್ನ, ಮಣಿಕಂಠ, ಪಾಲ್ಗೊಂಡಿದ್ದರು.

ದೊಡ್ಡಮೋಳೆ ಕೆರೆಯಲ್ಲಿ ಮೀನುಗಳ ಸಾವು: ವಿಷಪ್ರಾಶನದ ಶಂಕೆ

ಚಾಮರಾಜನಗರ, ಜು.14– ಸಮೀಪದ ದೊಡ್ಡಮೋಳೆ ಕೆರೆಯಲ್ಲಿ ಲಕ್ಷಾಂತರ ಮೀನುಗಳು ಸಾವನ್ನಪ್ಪಿದ್ದು, ಕೆರೆಗೆ ವಿಷ ಪ್ರಾಶನ ಮಾಡಿರುವ ಶಂಕೆ ವ್ಯಕ್ತವಾಗುತ್ತಿದೆ.

ಸುಮಾರು 35 ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪ್ತಿಸಿರುವ ದೊಡ್ಡಮೋಳೆ ಕೆರೆಗೆ ಕಳೆದ ನಾಲ್ಕೈದು ದಿನಗಳಿಂದ ಕಬಿನಿ ಜಲಾಶಯದಿಂದ ನೀರನ್ನು ಹರಿಸಲಾಗುತ್ತಿದ್ದು, ಹೊಸ ನೀರನ್ನು ಹೊಂದಿಕೊಳ್ಳಲಾಗದೆ ಮೀನುಗಳು ಸಾವನ್ನಪ್ಪಿರಬಹುದು ಎಂದು ಕೆಲವರು ವಾದ ಮಾಡುತ್ತಿದ್ದಾರೆ. ಆದರೆ, ಕೆರೆಯ ಸಮೀಪವೇ ಇರುವ ಚಿಕ್ಕಕೆರೆ ಹಾಗೂ ಸಿಂಡನಕೆರೆಗಳಲ್ಲಿನ ಮೀನುಗಳು ಚೆನ್ನಾಗಿವೆ. ಆದರೆ, ದೊಡ್ಡಮೋಳೆ ಕೆರೆಯಲ್ಲಿ ಮಾತ್ರ ಎಲ್ಲಾ ಮೀನುಗಳು ಸಾವನ್ನಪ್ಪಿವೆ.

ವಿಷಪ್ರಾಶನದ ಶಂಕೆ: ಕೆರೆಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಮೀನುಗಳು ಸಾವನ್ನಪ್ಪಿರುವುದು ಇದೇ ಮೊದಲ ಬಾರಿ. ಮೀನಗಳ ಸಾವಿಗೆ ವಿಷಪ್ರಾಶನವೇ ಕಾರಣವಾಗಿದೆ. ಯಾರೋ ಕಿಡಿಗೇಡಿಗಳು ಕೆರೆಯ ನೀರಿಗೆ ವಿಷಪ್ರಾಶನ ಮಾಡಿದ್ದಾರೆ. ಹೀಗಾಗಿಯೇ ಕೆರೆಯಲ್ಲಿದ್ದ ಲಕ್ಷಾಂತರ ಮೀನುಗಳು ಸಾವನ್ನಪ್ಪಿದೆ ಎಂದು ಮೀನುಗಾರರು ದೂರಿದರು.





ದೊಡ್ಡಮೋಳೆ ಕೆರೆಯಲ್ಲಿ ಲಕ್ಷಾಂತರ ಮೀನುಗಳು ಸಾವನ್ನಪ್ಪಿದ್ದು, ಕೆರೆಗೆ ವಿಷ ಪ್ರಾಶನ ಮಾಡಿರಬಹುದೆಂಬ ಶಂಕೆ ವ್ಯಕ್ತವಾಗುತ್ತಿದೆ.

ಕೆರೆಯಲ್ಲಿ ಮೀನುಗಾರಿಕೆಗೆ ನಿಸರ್ಗ ಮೀನುಗಾರ ಸಂಘಕ್ಕೆ ಗುತ್ತಿಗೆ ನೀಡಲಾಗಿತ್ತು. ಈ ಸಂಘದಡಿ ಸುಮಾರು 120ಕ್ಕೂ ಹೆಚ್ಚು ಕುಟುಂಬಗಳು ಮೀನುಗಾರಿಕೆಯನ್ನು ನಡೆಸಿಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ, ಕೆರೆಯಲ್ಲಿದ್ದ ಲಕ್ಷಾಂತರ ಮೀನುಗಳು ಏಕಾಏಕಿ ಸಾವನ್ನಪ್ಪಿರುವುದರಿಂದ ಮೀನುಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ, ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಇಲಾಖೆ ಈ ಬಗ್ಗೆ ಪರಿಶೀಲಿಸಿ, ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಮೀನುಗಾರರು ಒತ್ತಾಯಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡದ ಅಧಿಕಾರಿಗಳು: ದೊಡ್ಡಮೋಳೆ ಕೆರೆಯಲ್ಲಿ ಮೀನುಗಳು ಸಾವನ್ನಪ್ಪಿರುವ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದೆ. ಅಲ್ಲದೇ ಅಧಿಕಾರಿಗಳಿಗೆ ಗ್ರಾಮಸ್ಥರು ಮಾಹಿತಿ ನೀಡಿದ್ದರು ಕೂಡ ಸ್ಥಳಕ್ಕೆ ಯಾವೊಬ್ಬ ಅಧಿಕಾರಿಗಳು ಭೇಟಿ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕೋದ್ಯಮದಲ್ಲಿ ಕೆಬಿಜಿ ಮೂಡಿಸಿರುವ ಹೆಜ್ಜೆಗುರುತುಗಳು ಯುವ ಪತ್ರಕರ್ತರಿಗೆ ಸ್ಫೂರ್ತಿ



ಹನೂರು ಪ್ರವಾಸಿ ಮಂದಿರದಲ್ಲಿ ಕೆಬಿ ಗಣಪತಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿದರು

ಹನೂರು, ಜು.14– ಕೆಬಿ ಗಣಪತಿ ಪತ್ರಿಕೋದ್ಯಮದಲ್ಲಿ ಮೂಡಿಸಿರುವ ಹೆಜ್ಜೆಗುರುತುಗಳು ಯುವ ಪತ್ರಕರ್ತರಿಗೆ ಸ್ಫೂರ್ತಿ ಮತ್ತು ಮಾದರಿಯಾಗಲಿದೆ ಎಂದು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಹಾದೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಸುಮಾರು ಐದು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ಅವಿರತವಾಗಿ ದುಡಿದ ಕೆ.ಬಿ.ಗಣಪತಿ ವಸ್ತುನಿಷ್ಠ ಹಾಗೂ ವೃತ್ತಿಪರ ಬರಹಗಳಿಗೆ ಹೆಸರುವಾಸಿಯಾಗಿದ್ದರು ಎಂದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಗೌರವಾಧ್ಯಕ್ಷ ದೇವರಾಜು ನಾಯ್ಡು ಮಾತನಾಡಿ, ಕೆ.ಬಿ.ಗಣಪತಿ ಸುದ್ದಿ ವಿಚಾರಗಳಲ್ಲಿ ಎಂದಿಗೂ ಅವರು ರಾಜಿ ಮಾಡಿಕೊಂಡಿರಲಿಲ್ಲ, ಸಮಸ್ಯೆಗಳು ಹಾಗೂ ರಾಜಕೀಯದ ಯಾವುದೇ ವಿಷಯಗಳನ್ನು ನೇರವಾಗಿ ಪತ್ರಿಕೆಗಳಲ್ಲಿ ಪ್ರಕಟ ಮಾಡುತ್ತಿದ್ದರು. ಅವರ ಮಾರ್ಗದರ್ಶನ ಇಂದಿನ ಪೀಳಿಗೆಗೆ ಅತ್ಯವಶ್ಯಕವಾಗಿದೆ ಎಂದರು. ಮೃತರ ನಿಧನಕ್ಕೆ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ನಿರ್ದೇಶಕ ಸುರೇಶ್ ಅಜ್ಜೀಪುರ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಹ ಕಾರ್ಯದರ್ಶಿ ಗೋವಿಂದ್ ಕೆ, ನಿರ್ದೇಶಕರಾದ ಸೋಮಶೇಖರ್, ಮಧು, ಸದಸ್ಯರುಗಳಾದ ರಾಜೇಶ್, ಮಹದೇವಸ್ವಾಮಿ ಅಭಿಲಾಶ್ ವಿಜಯಕುಮಾರ್, ಶಿವಶಂಕರ್, ನಾಗೇಂದ್ರ, ಲಿಂಗರಾಜು, ರೈತ ಸಂಘದ ತಾಲೂಕು ಅಧ್ಯಕ್ಷ ಮಾದಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರ ಸಂಭ್ರಮೋತ್ಸವ



500 ಕೋಟಿನೇ ಉಚಿತ ಟಿಕೆಟ್ ವಿತರಣೆಯ ಅಂಗವಾಗಿ ಹೊರತಂದಿರುವ ಪೋಸ್ಟರ್‌ಗಳನ್ನು ಗಣ್ಯರು ಪ್ರದರ್ಶಿಸಿದರು.

ಚಾಮರಾಜನಗರ, ಜು.14– ಮಹಿಳೆಯರು ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು 500 ಕೋಟಿ ಟಿಕೆಟ್ ವಿತರಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ ಇಂದು ಸಂಭ್ರಮೋತ್ಸವ ಆಚರಿಸಲಾಯಿತು.

ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ನಡೆದ ಸಂಭ್ರಮೋತ್ಸವ ಕಾರ್ಯಕ್ರಮಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ಶಕ್ತಿ ಯೋಜನೆಯಡಿ ಮಹಿಳೆಯರು ಪ್ರಯಾಣಿಸಲು 500 ಕೋಟಿ ಉಚಿತ ಟಿಕೆಟ್‌ಗಳು ವಿತರಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಸಂಭ್ರಮ ಆಚರಿಸಲಾಗುತ್ತಿದೆ. ಇದೊಂದು ವಿಶೇಷ ಕಾರ್ಯಕ್ರಮವಾಗಿದ್ದು ಸರ್ಕಾರದ ಗ್ಯಾರಂಟಿ ಯಶಸ್ವಿ ಅನುಷ್ಠಾನದ ಸಂತಸದಲ್ಲಿದ್ದೇವೆ. ಎಂದು ಹೇಳಿದರು.

ಬಣ್ಣದ ಹೂಗಳಿಂದ ಶೃಂಗಾರಗೊಂಡಿದ್ದ ಎರಡು ಸಾರಿಗೆ ಬಸ್ಸುಗಳಿಗೆ ಪೂಜೆ ಹಾಗೂ ನಿಗಮದ ಇಬ್ಬರು ಚಾಲಕರು ಹಾಗೂ ನಿರ್ವಾಹಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಗಣ್ಯರು 500 ಕೋಟಿ ಉಚಿತ ಟಿಕೆಟ್ ವಿತರಣೆಯ ಅಂಗವಾಗಿ ಹೊರತಂದಿರುವ ಪೋಸ್ಟರ್‌ಗಳನ್ನು ಪ್ರದರ್ಶಿಸಿದರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಹೆಚ್.ವಿ.ಚಂದ್ರು ಮಾತನಾಡಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಸೋಮೇಶ್ವರ, ಭಾಗ್ಯ, ತಾಲೂಕುಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಕುಮಾರ ಮಾದಾಪುರ, ಮರಿಯಾಲದಹುಂಡಿ ಕುಮಾರ್, ರಾಜೇಶ್, ಜಡೆಯಪ್ಪ, ಮಂಜುಳಾ, ಸಿದ್ದಿಕ್ ವುಲ್ಲಾ, ರಮೇಶ್, ಗಣೇಶ್ ಕುಮಾರ್, ಚಿನ್ನಸ್ವಾಮಿ, ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್ ಕುಮಾರ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಂಠರಾಜೇ ಅರಸ್, ಉಪಸ್ಥಿತರಿದ್ದರು.

ಡಾ.ಕೆ.ಬಿ.ಗಣಪತಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಚಾಮರಾಜನಗರ, ಜು.14–ಕೆ.ಬಿ. ಗಣಪತಿ ಅವರ ನಿಧನದ ಹಿನ್ನೆಲೆಯಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಳಿಕ ಒಂದು ನಿಮಿಷ ಮೌನಾಚರಿಸಲಾಯಿತು. ಸಂಘದ ಜಿಲ್ಲಾಧ್ಯಕ್ಷ ದೇವರಾಜ ಕಪ್ಪಸೋಗೆ ಮಾತನಾಡಿ, ಕೆ.ಬಿ.ಜಿ ಅವರ ಹೊಸ ಚಿಂತನೆಗಳು, ವಸ್ತುನಿಷ್ಠ ವಿಮರ್ಶೆಗಳು ಜನರ ಗಮನ ಸೆಳೆಯುತ್ತಿದ್ದವು. ಶಿಸ್ತು ಸಂಯಮ ರೂಢಿಸಿಕೊಂಡಿದ್ದ ಗಣಪತಿ ಅವರು ಎಲ್ಲರ ಮೆಚ್ಚುಗೆಗೆ ಕಾರಣರಾಗಿದ್ದರು ಎಂದರು.

ಹಿರಿಯ ಪತ್ರಕರ್ತ ಕೆ.ಎಸ್. ಬನಶಂಕರಾ ಆರಾಧ್ಯ ಮಾತನಾಡಿ, ಹಿರಿಯ ಪತ್ರಕರ್ತ ಅಬ್ರಹಾಂ ಡಿ.ಸಿಲ್ವ, ಸಿದ್ದಲಿಂಗ ಸ್ವಾಮಿ, ರಾಜ್ಯ ಸಮಿತಿ ಸದಸ್ಯ ಗೂಳಿಪುರ ನಂದೀಶ್, ಹಿರಿಯ ಪತ್ರಕರ್ತ ರಾಜೇಶ್ ಬೆಂಡರವಾಡಿ ಮಾತನಾಡಿದರು



ಪತ್ರಕರ್ತರ ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೆಬಿಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಳಿಕ ಒಂದು ನಿಮಿಷ ಮೌನಾಚರಿಸಲಾಯಿತು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಹಿರಿಯ ಪತ್ರಕರ್ತ ಎಸ್.ಎಂ.ನಂದೀಶ್, ಕೆಎಸ್. ಫಾಲಲೋಚನ ಆರಾಧ್ಯ, ಬಾಲಚಂದ್ರ, ಮಹೇಂದ್ರ, ರೇಣುಕೇಶ್, ಪ್ರಸಾದ್, ಗಂಗಾಧರ್, ರಾಜೇಂದ್ರ, ಉಲ್ಲಾಸ್, ರಂಗೂಪುರ ಶಿವಕುಮಾರ್, ಹೊಮ್ಮ ನಂಜುಂಡ ನಾಯಕ, ಚರಣ್, ಬಸವರಾಜು ಇತರರು ಭಾಗವಹಿಸಿದ್ದರು.

ಉತ್ಪನ್ನಗಳ ಸಂಗ್ರಹಕ್ಕೆ ಹೋಗಿ ಕರಡಿಗೆ ಬಲಿ

ಯಳಂದೂರು,ಜು.14(ವಿ.ನಾಗರಾಜು)–ತಾಲೂಕಿನ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶದಲ್ಲಿ ಕರಡಿ ದಾಳಿ ನಡೆಸಿ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಸೋಮವಾರ ನಡೆದಿದೆ.

ಬಿಳಿಗಿರಿರಂಗನಬೆಟ್ಟದ ಸೀಗೆಬೆಟ್ಟಪೋಡಿನ ನಿವಾಸಿ ಸಿದ್ದೇಗೌಡ (30) ಎಂಬ ವ್ಯಕ್ತಿಯೇ ಮೃತಪಟ್ಟ ದುರ್ದೈವಿ. ಮಧ್ಯಾಹ್ನ 2 ಗಂಟೆಗೆ ಬಿಆರ್‌ಟಿ ಅರಣ್ಯ ವ್ಯಾಪ್ತಿಯ ನೇರಿಗೇರಿ ಎಂಬ ಸ್ಥಳದಲ್ಲಿ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಗುಂಪಿನೊಂದಿಗೆ ತೆರಳಿದ್ದರು. ಆ ವೇಳೆ ಕರಡಿ ಏಕಾಏಕಿ ದಾಳಿ ನಡೆಸಿದೆ. ಗುಂಪಿನಲ್ಲಿದ್ದವರೆಲ್ಲಾ ಪರಾರಿಯಾದರೆ, ಸಿದ್ದೇಗೌಡನ ಮೇಲೆ ದಾಳಿ ಮಾಡಿದ ಕರಡಿ ಕಚ್ಚಿ ಗಾಯಗೊಳಿಸಿದ್ದರಿಂದ ಮೃತಪಟ್ಟಿದ್ದಾರೆ. ಮೃತರಿಗೆ 2 ವರ್ಷಗಳ ಹಿಂದೆಯೇ ಪತ್ನಿ ಮೃತಪಟ್ಟಿದ್ದು ಇವರಿಗೆ ಎರಡೂವರೆ ವರ್ಷದ ಹೆಣ್ಣು ಮಗುವಿದೆ.

ಅರಣ್ಯ ಇಲಾಖೆಯವರಿಗೆ ಸ್ಥಳೀಯರು ಮಾಹಿತಿ ನೀಡಿದ ಮೇರೆಗೆ ಸಿಬ್ಬಂದಿ ಭೇಟಿ ನೀಡಿ ಮುಂದಿನ ಕ್ರಮ ವಹಿಸಿದ್ದಾರೆ.

ಶಾಸಕರ ನೆರವು: ಕರಡಿ ದಾಳಿಯಿಂದ ಮೃತಪಟ್ಟ ಬಿಳಿಗಿರಿ ರಂಗನ ಬೆಟ್ಟದ ಸೀಗೆಬೆಟ್ಟ ಪೋಡಿನ ನಿವಾಸಿ ಸಿದ್ದು ನಿವಾಸಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಸಂಜೆ ತೆರಳಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಸಿದ್ದು ಅವರ ತಾಯಿ ಬೇದಮ್ಮ ಅವರಿಗೆ ಸರ್ಕಾರದ ಪರವಾಗಿ 5 ಲಕ್ಷ ರೂ.ಗಳ ಚೆಕ್ ವಿತರಣೆ ಮಾಡಿದರು. ಉಳಿಕೆ ಪರಿಹಾರ ನಿಧಿಯನ್ನು ಅವರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ವಿ. ಚಂದ್ರು, ಉಪವಿಭಾಗಾಧಿಕಾರಿ ಮಹೇಶ್, ಬಿಳಿಗಿರಿ ರಂಗನ ಬೆಟ್ಟದ ವಲಯ ಅರಣ್ಯದ ಉಪ ಸಂರಕ್ಷಣಾಧಿಕಾರಿ ಶ್ರೀಪತಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್, ವಲಯ ಅರಣ್ಯಾಧಿಕಾರಿ ವಾಸು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಗ್ರಾಪಂ ಸದಸ್ಯ ಸಿ.ಡಿ. ಮಹದೇವ್, ಇದ್ದರು.

ಬೈಕ್‌ಗೆ ಬಸ್ ಡಿಕ್ಕಿ ; ಸವಾರ ಸಾವು

ಚಾಮರಾಜನಗರ, ಜು.14–ಬೈಕ್‌ಗೆ ಕೆಎಸ್‌ಆರ್‌ಟಿಸಿ ಡಿಕ್ಕಿ ಹೊಡೆದ ಪರಿಣಾಮ ದಲಿತ ಸಂಘಟನೆಯ ಮುಖಂಡರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದಲ್ಲಿ ಸೋಮವಾರ ನಡೆದಿದೆ. ಕೆಂಪನಪುರ ಗ್ರಾಮದ ನಿವಾಸಿಯಾಗಿರುವ ಡಿಎಸ್‌ಎಸ್‌ನ ಜಿಲ್ಲಾ ಸಂಯೋಜಕ ಕೆ.ಎಂ. ನಾಗರಾಜು(58) ಮೃತಪಟ್ಟವರಾಗಿದ್ದಾರೆ

ಗುಂಡ್ಲುಪೇಟೆ ವೃತ್ತದಿಂದ ಬೈಕ್‌ನಲ್ಲಿ ಕೆ.ಎಂ. ನಾಗ ರಾಜು ಬರುತ್ತಿದ್ದಾಗ ಸುಲ್ತಾನ್ ಷರೀಫ್ ವೃತ್ತದಲ್ಲಿ ಹಿಂಬದಿಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಬಸ್‌ನಡಿಗೆ ಸಿಲುಕಿದ ನಾಗ ರಾಜು ಅವರ ಮೇಲೆ ಬಸ್‌ನ ಮುಂದಿನ ಚಕ್ರ ಹರಿದಿದೆ. ಪರಿಣಾಮ ತೀವ್ರ ಗಾಯವಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಸಂಚಾರ ಠಾಣೆ ಪೊಲೀಸರು ತೆರಳಿ ಮೃತದೇಹವನ್ನು ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ. ಸಂಜೆ ಗ್ರಾಮದಲ್ಲಿ ಕೆ.ಎಂ. ನಾಗರಾಜು ಅವರ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲದಿಂದ ತಿಳಿದು ಬಂದಿದೆ. ಈ ಸಂಬಂಧ ಚಾಮರಾಜನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರತ್ನಮ್ಮ ನಿಧನ



ಗುಂಡ್ಲುಪೇಟೆ: ತಾಲೂಕಿನ ಬೆಳವಾಡಿ ಗ್ರಾಮದ ದಿ.ಗುರುಮಲ್ಲಪ್ಪ ಮಾಸ್ಟರ್ ಅವರ ಪತ್ನಿ ರತ್ನಮ್ಮ (76) ನಿನ್ನೆ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಪುತ್ರ ಎಂಡಿಸಿಸಿ ಬ್ಯಾಂಕ್ ಉದ್ಯೋಗಿ ಶಿವಪ್ರಸಾದ್ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನೆರವೇರಿತು.

ಮೈಸೂರು ಮಿತ್ರ

ಎನ್‌ಡಿಎಯೇತರ ಸರ್ಕಾರಗಳನ್ನು ಕೇಂದ್ರ ಸರ್ಕಾರ ಕಡೆಗಣಿಸುತ್ತಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ



ಬೆಂಗಳೂರು, ಜು. 14(ಕೆಎಂಶಿ)– ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳೊಂದಿಗೆ ಕೇಂದ್ರ ಸರ್ಕಾರ ವೈಷಮ್ಯದ ರಾಜಕಾರಣ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕಿಡಿಕಾರಿದ್ದಾರೆ.

ಕೇಂದ್ರದ ಯೋಜನೆಗಳ ಅನುಷ್ಠಾನ ಅಥವಾ ಉದ್ಘಾಟನೆ ವೇಳೆ ಎನ್‌ಡಿಎಯೇತರ ಸರ್ಕಾರಗಳನ್ನು ಕಡೆಗಣಿಸುವುದಲ್ಲದೆ, ಶಿಷ್ಟಾಚಾರ ಉಲ್ಲಂಘನೆ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂಘರ್ಷಕ್ಕೆ ದಾರಿ ಮಾಡುತ್ತಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಮೊಗ್ಗ ಜಿಲ್ಲೆಯ ಶರಾವತಿ ಹಿನ್ನೀರಿನಲ್ಲಿ ಸಿಗಂಧೂರು ಸೇತುವೆ ನಿರ್ಮಾಣದಲ್ಲಿ ರಾಜ್ಯದ ಪಾಲೂ ಇದೆ. ಆದರೆ, ಎಲ್ಲಾ ಶಿಷ್ಟಾಚಾರ ಬದಿಗಿಟ್ಟು ನಮ್ಮ ಮನವಿಯನ್ನೂ ಪರಿಗಣಿಸದೆ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಸೇತುವೆ ಉದ್ಘಾಟಿಸಿದ್ದಾರೆ.

ಬಿಜೆಪಿಯ ಈ ನಡೆಯನ್ನು ನಾನು ಪ್ರತಿಭಟಿಸುವೆ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಂತೆ ನಮ್ಮ ಸರ್ಕಾರದ ಸಚಿವರು, ಶಾಸಕರು ಮತ್ತು ಮುಖಂಡರುಗಳಿಗೆ ಸೂಚಿಸಿದ್ದೇನೆ. ಉದ್ಘಾಟನಾ ಕಾರ್ಯಕ್ರಮ ಮುಂದೂಡುವಂತೆ ಗಡ್ಕರಿ ಅವರಿಗೆ ಪತ್ರ ಬರೆದಿದ್ದಲ್ಲದೆ, ದೂರವಾಣಿ ಮೂಲಕ ಮನವಿ ಮಾಡಿಕೊಂಡಿದ್ದೆ.

ರಾಜ್ಯ ಸರ್ಕಾರದ ಮನವಿಗೆ ಗಡ್ಕರಿ ಸ್ಪಂದಿಸಿದ್ದರು. ಆದರೆ, ರಾಜ್ಯ ಬಿಜೆಪಿ ನಾಯಕರ ರಾಜಕೀಯ ಒತ್ತಡಕ್ಕೆ ಮಣಿದು ಸಿಗಂಧೂರು ಸೇತುವೆ ಉದ್ಘಾಟಿಸಲಾಗಿದೆ.

ರಾಜ್ಯ ಸರ್ಕಾರ ಎಲ್ಲಾ ಶಿಷ್ಟಾಚಾರಗಳನ್ನು ತಪ್ಪದೆ ಪಾಲಿಸುತ್ತಿದೆ. ಆದರೆ, ಕೇಂದ್ರ ನಮ್ಮ ನಡುವೆ ತಿಕ್ಕಾಟ ಉಂಟು ಮಾಡಲು ಈ ರೀತಿ ಮಾಡುತ್ತಿದೆ ಎಂದರು.

ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಿಗಂಧೂರು ಸೇತುವೆ ಉದ್ಘಾಟನೆ ಕಾರ್ಯಕ್ರಮವನ್ನು ರಾಜ್ಯದ ಮುಖ್ಯಮಂತ್ರಿಗೆ ಮುಂಚಿತವಾಗಿ ತಿಳಿಸಬೇಕಿತ್ತು. ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು. ಉದ್ದೇಶಪೂರ್ವಕವಾಗಿ ಹೀಗೆ ಮಾಡಲಾಗಿದೆಯೇ ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ಮಾತನಾಡೋಣ ಎಂದರು.

ಸಿದ್ದರಾಮಯ್ಯರಿಗೆ ಎರಡು ಬಾರಿ ಆಹ್ವಾನ ನೀಡಲಾಗಿತ್ತು: ಗಡ್ಕರಿ



ಬೆಂಗಳೂರು, ಜು. 14(ಕೆಎಂಶಿ)– ಶಿವಮೊಗ್ಗ ಜಿಲ್ಲೆಯ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಲಾಗಿರುವ ಸಿಗಂದೂರು ತೂಗುಸೇತುವೆ ಉದ್ಘಾಟನೆ ಕಾರ್ಯಕ್ರಮಕ್ಕೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎರಡು ಬಾರಿ ಆಹ್ವಾನ ನೀಡಿದ್ದೇನೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸ್ಪಷ್ಟಪಡಿಸಿದ್ದಾರೆ.

ಸಿದ್ದರಾಮಯ್ಯ ಅವರನ್ನು ಆಹ್ವಾನಿಸದೆ ಕಡೆಗಣಿಸಲಾಗಿದೆ ಎಂಬ ಕಾಂಗ್ರೆಸ್ ನಾಯಕರ ಆರೋಪಗಳಿಗೆ ಟ್ವೀಟ್ ಮೂಲಕ ಉತ್ತರಿಸಿರುವ ಕೇಂದ್ರ ಸಚಿವರು, ಸಿಗಂದೂರು ಸೇತುವೆ ಉದ್ಘಾಟನೆ ಕಾರ್ಯಕ್ರಮ ನಿಮ್ಮ ಅಧ್ಯಕ್ಷತೆಯಲ್ಲೇ ನಡೆಯಲಿ, ಭೌತಿಕವಾಗಿ ಕಾರ್ಯಕ್ರಮಕ್ಕೆ ಆಗಮಿಸಲು ಸಾಧ್ಯವಾಗದಿದ್ದರೆ, ವರ್ಚುವಲ್ ಮೂಲಕವಾದರೂ ಭಾಗವಹಿಸಿ ಎಂಬುದಾಗಿ ಆಹ್ವಾನಿಸಿದ್ದೆ ಎಂದಿದ್ದಾರೆ.

ಅಲ್ಲದೆ, ತಮ್ಮ ಟ್ವಿಟರ್ ಖಾತೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದ ಜುಲೈ 11 ಮತ್ತು ಜುಲೈ 12ರ ಎರಡು ಪತ್ರಗಳನ್ನೂ ಗಡ್ಕರಿ ಹಾಕಿದ್ದಾರೆ. ಸಿಗಂಧೂರು ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಅವರಿಗೆ ಮೊದಲೇ ಅಧಿಕೃತ ಆಹ್ವಾನ ನೀಡಲಾಗಿತ್ತು ಅಲ್ಲದೆ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವಂತೆಯೂ ಕೋರಲಾಗಿತ್ತು.

ಕೇಂದ್ರ ಸರ್ಕಾರ ಸ್ಥಾಪಿತ ಶಿಷ್ಟಾಚಾರಗಳನ್ನು ಸದಾ ಎತ್ತಿಹಿಡಿದೆ. ನಾವು ಎಲ್ಲಿಯೂ ಶಿಷ್ಟಾಚಾರ ಉಲ್ಲಂಘನೆ ಮಾಡಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡುಗೆಗಳು ಮತ್ತು ಸಹಕಾರವನ್ನು ನಿರಂತರವಾಗಿ ಶ್ಲಾಘಿಸುತ್ತೇವೆ. ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲಾ ರಾಜ್ಯಗಳೊಂದಿಗೆ ನಿಕಟ ಸಮನ್ವಯಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ.

ಇ-ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆ

ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು,ಜು.14(ಎಂಟಿವೈ)– ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಸಾಮಗ್ರಿ ಖರೀದಿಸಲು ಕೈಗೊಳ್ಳಲಾದ ಇ-ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಪ್ರತಿಭಟಿಸಿದ ವೇದಿಕೆ ಕಾರ್ಯಕರ್ತರು, ಜಿಪಂ ವ್ಯಾಪ್ತಿಯ 32 ಗ್ರಾಮ ಪಂಚಾಯಿತಿ ಸಮಗ್ರ ಅಭಿವೃದ್ಧಿಗೆ ಸರಕಾರದಿಂದ ತಲಾ 24.75 ಲಕ್ಷ ರೂ.ನಂತೆ ಒಟ್ಟು 7.92 ಕೋಟಿ ರೂ. ಬಿಡುಗಡೆಯಾಗಿದೆ. ಕೆಟಿಪಿಪಿ ನಿಯಮಾನುಸಾರ ಕಾಮಗಾರಿಗಳಿಗೆ ಸಾಮಗ್ರಿ ಖರೀದಿ ಮಾಡುವಂತೆ ಆದೇಶಿಸಲಾಗಿದೆ ಆದರೆ ಹಲವು ಗ್ರಾಪಂಗಳು ಒಂದೇ ಏಜೆನ್ಸಿಗೆ ಅನುಕೂಲವಾಗುವಂತೆ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದು ಸರಿಯಲ್ಲ ಎಂದು ತಿಳಿಸಿದರು.

ಒಂದೇ ಏಜೆನ್ಸಿಯಿಂದ ಒಂದೇ ವಸ್ತುವಿಗೆ ಬೇರೆ ಬೇರೆ ಗ್ರಾಪಂಗಳು ಬೇರೆ ಬೇರೆ ದರದಲ್ಲಿ ಸಾಮಗ್ರಿ ಖರೀದಿ ಮಾಡಿದ್ದಾರೆ. ವರಕೋಡು ಗ್ರಾಪಂ ಒಂದು ವಾಲಿಬಾಲ್‌ಗೆ 6,966 ರೂ. ಕೊಟ್ಟು ಖರೀದಿಸಲಾಗಿದೆ. ಗೌಡಗೆರೆ ಗ್ರಾಪಂನವರು ಲ್ಯಾಪ್‌ಟಾಪ್ ಅನ್ನು 67 ಸಾವಿರ ರೂ.ಗೆ ಖರೀದಿಸಿದ್ದಾರೆ. ಅದೇ ರೀತಿ ಬೇರೆ ಗ್ರಾಮಗಳಲ್ಲಿ ಹೆಚ್ಚು ಹಣ ಕೊಟ್ಟು ವಸ್ತುಗಳನ್ನು ಖರೀದಿ ಮಾಡಲಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್, ರಾಜ್ಯ ಖಜಾಂಚಿ ನಂಜುಂಡ ಶಿವಕುಮಾರ್, ಜಿಲ್ಲಾಧ್ಯಕ್ಷ ಸಂತೋಷ್, ಕಾರ್ಯದರ್ಶಿ ಪ್ರತಾಪ್, ಜಿಲ್ಲಾ, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ, ಕರುನಾಡು ಲಾರಿ ಚಾಲಕರ ಪರಿಷತ್ ಅಧ್ಯಕ್ಷ ಮಾದೇವಸ್ವಾಮಿ, ಡಿಪಿಕೆ ಪರಮೇಶ್, ಶಿವಕುಮಾರ್ ಸಿಂಧುವಳ್ಳಿ, ಹರೀಶ್, ಕಿರಣ್, ದಿಲೀಪ್ ಹಾಗೂ ಇತರರು ಭಾಗವಹಿಸಿದ್ದರು.

ಮೈಸೂರು ನಗರ, ಹೊರವಲಯದಲ್ಲಿ ಬಯಲು 'ಬಾರ್' ಕಾರುಬಾರು!

ಅಂತೂ ಕ್ರಮಕ್ಕೆ ಮುಂದಾಗಿರುವ ಪೊಲೀಸರು

ಮೈಸೂರು, ಜು.14– ಮೈಸೂರು ನಗರ ಹಾಗೂ ತಾಲೂಕಿನ ವಿವಿಧೆಡೆ ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನಕ್ಕೆ ಅವಕಾಶ ನೀಡಿದವರ ವಿರುದ್ಧ ಪೊಲೀಸರು ಕ್ರಮ ವಹಿಸಿದ್ದಾರೆ.

ನಗರದ ಎನ್.ಆರ್.ಮೊಹಲ್ಲಾದ ಕುರಿಮಂಡಿ ರಸ್ತೆಯ ವೈನ್ಸ್ ಅಂಗಡಿಯೊಂದರ ಎದುರಿನ ಸಾರ್ವಜನಿಕ ಸ್ಥಳದಲ್ಲಿ ಮೂರ್‍ನಾಲ್ಕು ಜನ ಮದ್ಯಪಾನ ಮಾಡುವಾಗ ನರಸಿಂಹರಾಜ ಠಾಣೆ ಪೊಲೀಸರು ದಾಳಿ ನಡೆಸಿದ್ದಾರೆ. ವೈನ್ಸ್ ಮಳಿಗೆಯಲ್ಲಿ ಮದ್ಯ ಮಾರಾಟಕ್ಕಷ್ಟೇ ಅವಕಾಶವಿದ್ದರೂ ಮದ್ಯಪಾನಕ್ಕೆ ಅವಕಾಶ ನೀಡಿ, ಸಾರ್ವಜನಿಕರಿಗೆ ತೊಂದರೆ ನೀಡಿದ ಆರೋಪದಡಿ ಮಳಿಗೆಯ ಮ್ಯಾನೇಜರ್‌ಗೆ ನೋಟಿಸ್ ಜಾರಿ ಮಾಡಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೈಸೂರು ತಾಲೂಕು ವರುಣ ಪೊಲೀಸ್ ಠಾಣೆ ವ್ಯಾಪ್ತಿಯ ದೇವೇಗೌಡನಹುಂಡಿ ಗ್ರಾಮದ ಚಿಕನ್ ಕಬಾಬ್ ಅಂಗಡಿಯೊಂದರ ಬಳಿ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವನೆಗೆ ಅವಕಾಶ ನೀಡಿದ್ದಕ್ಕೆ ಅಂಗಡಿ ಮಾಲೀಕನ ವಿರುದ್ಧ ಪೊಲೀಸರು ಕ್ರಮ ಜರುಗಿಸಿದ್ದಾರೆ. ಹಾಗೆಯೇ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯ ಕಲ್ಲೂರು ಗ್ರಾಮದಲ್ಲಿ ಮನೆ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನಕ್ಕೆ ಅವಕಾಶ ನೀಡಿದ ಮಹಿಳೆಯೊಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ.


ಮೈಸೂರಿನ ರಿಂಗ್ ರಸ್ತೆ ಸೇರಿದಂತೆ ಹೊರವಲಯದಲ್ಲಿ ಬಯಲು ಬಾರ್ ವ್ಯಾಪಿಸಿದೆ. ಕಂಡ ಕಂಡಲ್ಲಿ ಗುಂಪುಗೂಡಿ ಪಾರ್ಟಿ ಮಾಡುವವರು ಹೆಚ್ಚಾಗಿದ್ದಾರೆ. ಮತ್ತೇರಿದಾಗ ಗಲಾಟೆ–ಗದ್ದಲ ಮಾಡುವುದರ ಜೊತೆಗೆ ಬಾಟಲ್‌ಗಳನ್ನು ರಸ್ತೆಯಲ್ಲಿ ಒಡೆದು ಹಾಕುವುದು, ವಾಹನ ಸಂಚಾರಕ್ಕೆ ಅಡ್ಡಿಪಡಿಸುವ ಘಟನೆಗಳೂ ನಡೆಯುತ್ತಿರುತ್ತವೆ. ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವನೆ ಮಾಡುವವರ ವಿರುದ್ಧವೂ ಪೊಲೀಸರು ಶಿಸ್ತು ಕ್ರಮ ಕೈಗೊಳ್ಳುವುದು ಅವಶ್ಯವಾಗಿದೆ.

ಸ್ಕೂಟರ್‌ನಲ್ಲಿ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿ ಪೊಲೀಸ್ ವಶಕ್ಕೆ

ಮೈಸೂರು, ಜು.14– ಸ್ಕೂಟರ್‌ನಲ್ಲಿ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಮೈಸೂರಿನ ಉದಯಗಿರಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಉದಯಗಿರಿ ಠಾಣೆ ಪಕ್ಕದಲ್ಲಿ ಟೀ ಅಂಗಡಿ ನಡೆಸುತ್ತಿರುವ ಮುಜಾಮಿಲ್ ಷರೀಫ್(25)ನನ್ನು ವಶಕ್ಕೆ ಪಡೆದಿರುವ ಪೊಲೀಸರು ಆತ ಸಾಗಿಸುತ್ತಿದ್ದ 1 ಕೆಜಿ 860 ಗ್ರಾಂ ಗಾಂಜಾವನ್ನು ಜಪ್ತಿ ಮಾಡಿದ್ದಾರೆ. ನಂಬರ್ ಪ್ಲೇಟ್ ಇಲ್ಲದ ಸ್ಕೂಟರ್‌ನಲ್ಲಿ ಕುಳಿತಿದ್ದ ಈತ, ಪೊಲೀಸ್ ಗಸ್ತು ವಾಹನವನ್ನು ಕಂಡು ಪರಾರಿಯಾಗಲು ಯತ್ನಿಸಿದ್ದಾನೆ. ಆಗ ಪೊಲೀಸರು ಆತನ ಬೆನ್ನತ್ತಿ ಹಿಡಿದು ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ.

ದೇಶದ ಎರಡನೇ ಅತಿ ಉದ್ದದ ಸಿಗಂಧೂರು ಕೇಬಲ್ ಸೇತುವೆ ಉದ್ಘಾಟಿಸಿದ ಕೇಂದ್ರ ಸಚಿವ ನಿತಿನ್ ಗಡ್ಕರಿ



ಶಿವಮೊಗ್ಗ: ಎಡೆಬಿಡದೆ ಸುರಿಯುತ್ತಿರುವ ಮಳೆಯ ನಡುವೆಯೂ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೋಮವಾರ ಮಧ್ಯಾಹ್ನ ಸಾಗರ ತಾಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ನಡುವಿನ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಿರುವ ಭಾರತದ ಎರಡನೇ ಅತಿ ಉದ್ದದ ಕೇಬಲ್–ಸ್ಟೇಡ್ ಸೇತುವೆಯನ್ನು ಉದ್ಘಾಟಿಸಿದರು.

ಬಿಜೆಪಿಯ ಹಿರಿಯ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಅವರ ಯಾವುದೇ ಸಚಿವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರಲಿಲ್ಲ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಸಂಸದ ಬಿವೈ ರಾಘವೇಂದ್ರ, ಶಾಸಕರಾದ ಆರಗ ಜ್ಞಾನೇಂದ್ರ, ಎಸ್‌ಎನ್ ಚನ್ನಬಸಪ್ಪ ಡಿಎಸ್ ಅರುಣ್, ಮಾಜಿ ಸಚಿವರಾದ ಕಾಗೋಡು ತಿಮ್ಮಪ್ಪ ಹರತಾಳು ಹಾಲಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಧಿಕಾರಿಗಳ ಪ್ರಕಾರ, ಸಾಗರ ತಾಲೂಕಿನ ಅಂಬರಗೋಡ್ಲು–ಕಳಸವಳ್ಳಿ ನಡುವೆ ಶರಾವತಿ ಹಿನ್ನೀರಿನಲ್ಲಿ ಈ ಸೇತುವೆಯನ್ನು 472 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸೇತುವೆಯು 2.44 ಕಿಮೀ ಉದ್ದವಿದ್ದು, 16 ಮೀಟರ್ ಅಗಲವಿದೆ. ಈ ಸೇತುವೆಯು ಸಾಗರದಿಂದ ಸಿಗಂಧೂರಿನ ಸುತ್ತಮುತ್ತಲಿನ ಹಳ್ಳಿಗಳಿಗೆ ದೂರವನ್ನು ಕಡಿಮೆ ಮಾಡುತ್ತದೆ. ಸೇತುವೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗಿಯಾಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರಿಗೆ ಪತ್ರ ಬರೆದಿರುವ ಅವರು, ಸಾಗರ–ಸಿಗಂಧೂರು ನಡುವಿನ ಸೇತುವೆ ಉದ್ಘಾಟನಾ ಸಮಾರಂಭಕ್ಕೆ ನನ್ನನ್ನು ತಡವಾಗಿ ಆಮಂತ್ರಿಸಿದ್ದು, ಬೇರೆಡೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದಾರೆ.

ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಇಲಾಖೆಯು ಇಂತಹ ರಾಜ್ಯಮಟ್ಟದ ಕಾರ್ಯಕ್ರಮ ಆಯೋಜನೆಗೆ ಮುನ್ನ ರಾಜ್ಯ ಸರ್ಕಾರವನ್ನು ಮುಂಚಿತವಾಗಿಯೇ ಸಂಪರ್ಕಿಸಿದ್ದರೆ ಮತ್ತಷ್ಟು ಸಮರ್ಪಕವಾಗಿರುತ್ತಿತ್ತು. ಮುಂದೆ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಸಂದರ್ಭದಲ್ಲಿ ರಾಜ್ಯ ಸರ್ಕಾರವನ್ನು ಸಕಾಲದಲ್ಲಿ ಸಂಪರ್ಕಿಸುವಂತೆ ಹೆದ್ದಾರಿ ಮತ್ತು ಭೂಸಾರಿಗೆ ಇಲಾಖೆಗೆ ಸೂಚನೆ ನೀಡಬೇಕು ಎಂದು ತಮ್ಮಲ್ಲಿ ವಿನಂತಿಸುತ್ತೇನೆ ಎಂದು ಹೇಳಿದ್ದಾರೆ.

ಸಿಗಂಧೂರು ಸೇತುವೆಗೆ 'ಚೌಡೇಶ್ವರಿ ದೇವಿ' ಹೆಸರು



ಶಿವಮೊಗ್ಗ: ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ನಡುವೆ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಿರುವ ಭಾರತದ ಎರಡನೇ ಅತಿ ಉದ್ದದ ಕೇಬಲ್–ಸ್ಟೇಡ್ ಸೇತುವೆಗೆ 'ಸಿಗಂಧೂರು ಚೌಡೇಶ್ವರಿ ದೇವಿ ಸೇತುವೆ' ಎಂದು ಹೆಸರಿಡಲಾಗಿದೆ.

ಸೋಮವಾರ ನೂತನ ಸಿಗಂಧೂರು ಸೇತುವೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು, ಸೇತುವೆಗೆ ಸಿಗಂಧೂರು ಚೌಡೇಶ್ವರಿ ದೇವಿ ಸೇತುವೆ ಎಂದು ನಾಮಕರಣ ಮಾಡಲಾಗಿದೆ ಎಂದು ಘೋಷಿಸಿದರು. ಸಿಗಂಧೂರು ಚೌಡೇಶ್ವರಿ ದೇವಿ ಸೇತುವೆ ನಿರ್ಮಾಣಕ್ಕೆ ನಾನೇ ಭೂಮಿಪೂಜೆ ಮಾಡಿದ್ದೆ ಇದೀಗ, ನಾನೇ ಉದ್ಘಾಟನೆ ಮಾಡಿದ್ದು ನನ್ನ ಸೌಭಾಗ್ಯ ಎಂದು ಗಡ್ಕರಿ ಹೇಳಿದರು.

ಬೆಳ್ಳಿತೆರೆಯ ಭಾಗ್ಯತಾರೆ ಬಿ.ಸರೋಜಾದೇವಿ



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167



ಸರೋಜಾದೇವಿಯವರ ಕಲಾಸೇವೆಗೆ 'ಪದ್ಮಶ್ರೀ', 'ಪದ್ಮಭೂಷಣ' ಗೌರವ ಸಂದಿದೆ. 'ರಾಜ್ಯೋತ್ಸವ ಪ್ರಶಸ್ತಿ', 'ಅಭಿನವ ಸರಸ್ವತಿ ರಾಜ್ಯ ಪ್ರಶಸ್ತಿ', 'ಸಾವಿತ್ರಮ್ಮ ದೇಜಗೌ ರಾಜ್ಯ ಪ್ರಶಸ್ತಿ', ಬೆಂಗಳೂರು ವಿವಿಯಿಂದ ಗೌರವ 'ಡಾಕ್ಟರೇಟ್ ಪದವಿ', ಆಂಧ್ರ ಸರ್ಕಾರದ 'ಎನ್.ಟಿ.ಆರ್. ರಾಜ್ಯ ಪ್ರಶಸ್ತಿ', 'ಫಿಲಂಫೇರ್ ಪ್ರಶಸ್ತಿ' ಸೇರಿದಂತೆ ನೂರಾರು ಪ್ರಶಸ್ತಿ–ಪುರಸ್ಕಾರಗಳು ಸಂದಿವೆ. 60ನೇ ಸ್ವಾತಂತ್ರ್ಯೋತ್ಸವದ ದ್ಯೋತಕವಾಗಿ ಭಾರತ ಸರ್ಕಾರ 'ಜೀವಮಾನ ಸಾಧನೆ ರಾಷ್ಟ್ರೀಯ ಪ್ರಶಸ್ತಿ' ನೀಡಿ ಸರೋಜಾದೇವಿ ಅವರನ್ನು ಗೌರವಿಸಿದೆ. ಇಂಥ ಮೇರುಗೌರವ ಪಡೆದ ಪ್ರಥಮ ಚಲನಚಿತ್ರ ಅಭಿನೇತ್ರಿ ಇವರು ಕನ್ನಡಿಗರೆಂಬುದೇ ಒಂದು ಹೆಮ್ಮೆ.

ಪ್ರಶಸ್ತಿಗಳ ಮೇಲೆ ಪ್ರಶಸ್ತಿಗಳನ್ನು ಪಡೆದು ಕನ್ನಡದ ಕೀರ್ತಿಯನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಅಚ್ಚಕನ್ನಡ ತಾರೆ, ಪದ್ಮಭೂಷಣ ಡಾ.ಬಿ.ಸರೋಜಾದೇವಿಯವರು ಚಿತ್ರರಂಗಕ್ಕೆ ಬಯಸಿ ಬಂದವರಲ್ಲ. ಬೆಳ್ಳಿತೆರೆಯೇ ಬಯಸಿ ಪ್ರೀತಿಯಿಂದ ತನ್ನತ್ತ ಸೆಳೆದುಕೊಂಡ ಪ್ರತಿಭಾರತ್ನ ಇವರು. ಐವತ್ತರ ದಶಕದಲ್ಲೇ ಹಿಂದಿ ಚಿತ್ರರಂಗದಲ್ಲಿ ಹೆಸರು ಗಳಿಸಿದ್ದ ಕನ್ನಡಿಗ ಬಿ.ಆರ್. ಕೃಷ್ಣಮೂರ್ತಿ ತಾವು ಕನ್ನಡದಲ್ಲಿ ನಿರ್ಮಿಸಿದ್ದ 'ಶ್ರೀರಾಮ ಪೂಜಾ' ಚಿತ್ರದ ಪುಟ್ಟ ಪಾತ್ರವೊಂದಕ್ಕೆ ಪುಟ್ಟ ವಯಸ್ಸಿನ ಸರೋಜಾದೇವಿ ಅವರನ್ನು ಬಲವಂತವಾಗಿ ಕರೆತಂದರು. ಈ ಚಿತ್ರಕ್ಕೆ ಬಣ್ಣ ಹಚ್ಚುವಾಗಲೇ ಸರೋಜಾದೇವಿ ಅವರ ಚೆಂದಕ್ಕೆ ಬೆರಗಾದ ಅಂದಿನ ಖ್ಯಾತನಟ ಹೊನ್ನಪ್ಪ ಭಾಗವತರ್, ತಾವು ನಟಿಸಿ, ನಿರ್ಮಿಸಿದ್ದ 'ಮಹಾಕವಿ ಕಾಳಿದಾಸ' ಚಿತ್ರದ ಮೂಲಕ ಬೆಳ್ಳಿತೆರೆಗೆ ಪರಿಚಯಿಸಿದ್ದರು. ಈ ಚಿತ್ರಕ್ಕೆ ನಾಯಕಿಯಾಗಲು ಸರೋಜಾದೇವಿ ಮತ್ತು ಅವರ ಮನೆಯವರನ್ನು ಒಪ್ಪಿಸಲು ಹೊನ್ನಪ್ಪ ಭಾಗವತರ್ ಅವರಿಗೆ ಸಾಕು–ಸಾಕಾಗಿತ್ತಂತೆ.

ಹೀಗೆ ಅಂದು ಒಲ್ಲದ ಮನಸ್ಸಿನಿಂದಲೇ ಚಿತ್ರರಂಗ ಪ್ರವೇಶಿಸಿ ನಂತರದ ದಿನಗಳಲ್ಲಿ ಬಣ್ಣದ ಲೋಕವನ್ನೇ ತನ್ನ ಬದುಕಾಗಿಸಿಕೊಂಡು ಬಹುಭಾಷಾ ತಾರೆಯಾಗಿ, ಭಾರತೀಯ ಚಿತ್ರರಂಗದ ನಟ–ದಿಗ್ಗಜರ ಜೊತೆ ನಾಯಕಿಯಾಗಿ ಅಭಿನಯಿಸಿ ಮೆರೆದರು. ಈ ಚೆಲುವಿನ ತಾರೆ ಸರೋಜಾದೇವಿ ಚನ್ನಪಟ್ಟಣ ತಾಲೂಕಿನ ದಶಾವಾರ ಎಂಬ ಪುಟ್ಟ ಗ್ರಾಮದಲ್ಲಿ 1937ರ ಜನವರಿ 7 ರಂದು ಜನಿಸಿದರು. ತಂದೆ ಮಾಯಣ್ಣಗೌಡ, ತಾಯಿ ರುದ್ರಮ್ಮ. ಬಾಲ್ಯದಲ್ಲೇ ಬಹಳ ಬ್ಯೂಟಿ ಮತ್ತು ಚೂಟಿಯಾಗಿದ್ದ ಇವರಿಗೆ ಪೂರ್ಣಚಂದ್ರನಂಥ ಸೌಂದರ್ಯವೇ ವರವಾಗಿತ್ತು.

ಮಧ್ಯಮ ವರ್ಗದ ಕುಟುಂಬದ ಇವರ ತಂದೆ ಮಾಯಣ್ಣಗೌಡರು ಬೆಂಗಳೂರಿನಲ್ಲಿ ಪೊಲೀಸ್ ಇಲಾಖೆಯಲ್ಲಿದ್ದುದರಿಂದ ಸರೋಜಾದೇವಿಯ ವಿದ್ಯಾಭ್ಯಾಸ ಆರಂಭವಾದದ್ದು ಅಲ್ಲಿನ ಚಾಮರಾಜಪೇಟೆಯ ಸೇಂಟ್ ಥೆರೇಸಾ ಶಾಲೆಯಲ್ಲಿ. ಬಾಲ್ಯದಿಂದಲೇ ಸಂಗೀತ, ನೃತ್ಯಗಳತ್ತ ಆಕರ್ಷಿತರಾಗಿದ್ದರು. ಇವರ ಕಲಾಭಿರುಚಿಯ ಎಲ್ಲಾ ಹೆಜ್ಜೆಗಳಿಗೂ ತಂದೆ–ತಾಯಿಯ ಪ್ರೋತ್ಸಾಹವಿತ್ತು. ಬಣ್ಣದ ಲೋಕ ತಾನಿಷ್ಟಪಟ್ಟ ಕಲಾದೇವಿ (ಸರೋಜಾ)ಯನ್ನು ಹೇಗೋ ಬೆಳ್ಳಿತೆರೆಗೆ ಕರೆತಂದಿಯೇ ಬಿಟ್ಟಿತು. ಅದೃಷ್ಟವೆಂದರೆ ಇವರು ನಾಯಕಿನಟಿಯಾಗಿ ಅಭಿನಯಿಸಿದ ಮೊದಲ ಚಿತ್ರ 'ಮಹಾಕವಿ ಕಾಳಿದಾಸ' ಕೇಂದ್ರ ಸರ್ಕಾರದ 'ರಾಷ್ಟ್ರೀಯ ಅರ್ಹತಾ ಪ್ರಶಸ್ತಿ'ಗೆ ಭಾಜನವಾಗಿತ್ತು.

'ಮಹಾಕವಿ ಕಾಳಿದಾಸ' ಚಿತ್ರದ ಮೂಲಕ ನವತಾರೆಯಾಗಿ ಹೊರಹೊಮ್ಮಿದ ಸರೋಜಾದೇವಿ, ಮುಂದೆ ಯಶಸ್ಸಿನ ಕುದುರೆ ಏರಿ ಮತ್ತೆಂದೂ ಹಿಂತಿರುಗಿ ನೋಡಲೇ ಇಲ್ಲ. ಒಂದರ ಮೇಲೊಂದರಂತೆ ಇವರ ಚಿತ್ರಗಳು ರಜತ ಪರದೆಯಲ್ಲಿ ಮೂಡಿಬಂದವು. ಸೌಂದರ್ಯ ಮತ್ತು ಮನೋಜ್ಞ ಅಭಿನಯದಿಂದ ಬಹುಬೇಗನೆ ಚಿತ್ರಲೋಕದ ಮಹಾತಾರೆಯಾದರು. ಕನ್ನಡ ಚಿತ್ರರಂಗದ ಸೂಪರ್‌ಸ್ಟಾರ್‌ಗಳಾಗಿದ್ದ ರಾಜ್‌ಕುಮಾರ್, ಉದಯ್‌ಕುಮಾರ್ ಹಾಗೂ ಕಲ್ಯಾಣ್‌ಕುಮಾರ್ ಅವರೊಂದಿಗೆ ಹಲವು ಚಿತ್ರಗಳಲ್ಲಿ ಅಭಿನಯಿಸಿ ಸೂಪರ್‌ಸ್ಟಾರಿಣಿಯಾಗಿ ಮಿಂಚಿದರು.

ಹಾಗೆಯೇ ತಮಿಳಿನಲ್ಲಿ ಜನಪ್ರಿಯ ತಾರೆಗಳಾದ ಎಂ.ಜಿ.ರಾಮಚಂದ್ರನ್, ಶಿವಾಜಿ ಗಣೇಶನ್, ಜೆಮಿನಿ ಗಣೇಶನ್ ಮುಂತಾದ ಅತಿರಥ ಮಹಾರಥರೊಂದಿಗೆ ಬಹಳಷ್ಟು ತಮಿಳು ಚಿತ್ರಗಳಲ್ಲಿ ನಾಯಕಿಯಾದರು. ತೆಲುಗಿನ ನಟ ದಿಗ್ಗಜರುಗಳಾದ ಎನ್.ಟಿ.ರಾಮರಾವ್, ಅಕ್ಕಿನೇನಿ ನಾಗೇಶ್ವರರಾವ್ ಇನ್ನಿತರ ಸ್ಟಾರ್‌ಗಳ ನಾಯಕಿಯಾಗಿ ಅಭಿನಯಿಸಿದ ಕೀರ್ತಿ ಇವರದ್ದು. ಇಷ್ಟೆ ಅಲ್ಲದೆ ದಿಲೀಪ್‌ಕುಮಾರ್, ರಾಜೇಂದ್ರ ಕುಮಾರ್, ಸುನಿಲ್ ದತ್, ಶಮ್ಮಿಕಪೂರ್ ಮುಂತಾದ ಹಿಂದಿ ಚಿತ್ರರಂಗದ ದೊಡ್ಡ ದೊಡ್ಡ ಸ್ಟಾರ್‌ಗಳೊಂದಿಗೆ ಅಭಿನಯಿಸಿ, ಯಶಸ್ಸು ಹಾಗೂ ಜನಪ್ರಿಯತೆ ಗಳಿಸಿದ್ದಾರೆ.

ಮಹಾಕವಿ ಕಾಳಿದಾಸ, ಪಂಚರತ್ನ ಸೇರಿ ಮೂರ್‍ನಾಲ್ಕು ಕನ್ನಡ ಚಿತ್ರಗಳಲ್ಲಿ ಅಭಿನಯಿಸುವಷ್ಟರಲ್ಲೇ 'ಕಚದೇವಯಾನಿ' ಚಿತ್ರದಲ್ಲಿ ಅಶ್ವಥ್ ಅವರೊಂದಿಗೆ ನಟಿಸುವ ಅವಕಾಶ ಸಿಕ್ಕಿತು. ಇದರ ಚಿತ್ರೀಕರಣದ ವೇಳೆ ತಮಿಳಿನ ಎಂ.ಜಿ.ರಾಮಚಂದ್ರನ್ ಬಿ.ಸರೋಜಾದೇವಿಯ ಭಾವಪೂರ್ಣ ಅಭಿನಯಕ್ಕೆ ಬೆರಗಾಗಿದ್ದರು. ನೀವು, ತಮ್ಮೊಡನೆ ನಾಯಕಿಯಾಗಿ ಅಭಿನಯಿಸಲೇಬೇಕೆಂದು ಹಠಹಿಡಿದು 1958ರಲ್ಲಿ 'ನಾಡೋಡಿ ಮನ್ನನ್' ಚಿತ್ರ ತಯಾರಿಸಿದರು. ಸರೋಜಾದೇವಿ ಮತ್ತು ಎಂ.ಜಿ.ಆರ್. ಜೋಡಿಯಾಗಿ ಅಭಿನಯಿಸಿದ ಅತ್ಯಂತ ಯಶಸ್ವೀ ತಮಿಳು ಚಿತ್ರವಿದು. ಈ ಚಿತ್ರದ ಮೂಲಕ ತಮಿಳು ಚಿತ್ರರಂಗದ ಅತ್ಯಂತ ಬೇಡಿಕೆಯ ತಾರೆಯಾಗಿಬಿಟ್ಟರು.

ಇದೇ ರೀತಿ ತೆಲುಗು ಚಿತ್ರರಂಗದ ಮಹಾನ್ ನಟ ಎನ್.ಟಿ. ರಾಮರಾವ್ ಅವರು ಸರೋಜಾದೇವಿಯೊಡನೆ ಅಭಿನಯಿಸುವುದಕ್ಕಾಗಿಯೇ 'ಪಾಂಡುರಂಗ ಮಹಾತ್ಮಂ' ಚಿತ್ರ ನಿರ್ಮಿಸಿದರು. ಈ ಚಿತ್ರ ಜನಮನ್ನಣೆ ಗಳಿಸಿತು. ಸರೋಜಾದೇವಿ ಹಲವು ತೆಲುಗು ಚಿತ್ರಗಳಲ್ಲಿ ಅಭಿನಯಿಸಿ ಅಲ್ಲೂ ಸಹ ಯಶಸ್ಸಿನ ಮಹಲು ಹತ್ತಿದರು. ಕನ್ನಡದ ಪ್ರಪ್ರಥಮ ವರ್ಣಚಿತ್ರವೆಂಬ ಖ್ಯಾತಿ ಹೊಂದಿದ 'ಅಮರಶಿಲ್ಪಿ ಜಕಣಾಚಾರಿ' ಚಿತ್ರದ ತೆಲುಗು ಅವತರಣಿಕೆಯಲ್ಲಿ ಖ್ಯಾತನಟ ಅಕ್ಕಿನೇನಿ ನಾಗೇಶ್ವರರಾವ್ ಜೊತೆ ಇವರು ನಾಯಕಿಯಾಗಿ ನಟಿಸಿದ್ದೂ ಒಂದು ವಿಶೇಷವೇ.

ಹೀಗೆ ತಾರೆ ಸರೋಜಾದೇವಿಯ ಯಾವುದೇ ಭಾಷೆಯ ಚಲನಚಿತ್ರಗಳಿರಲಿ ಯಶಸ್ಸು ಕಟ್ಟಿಟ್ಟಬುತ್ತಿಯಾಗಿತ್ತು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಜಾನಪದ, ಹೀಗೆ ಎಲ್ಲಾ ಬಗೆಯ ಚಿತ್ರಗಳಲ್ಲೂ ಅಭಿನಯಿಸಿರುವ ಇವರು ಎಂಥಾ ಕಠಿಣ ಪಾತ್ರವಾದರೂ ಲೀಲಾಜಾಲವಾಗಿ ನಟಿಸುವ ಸಹಜಾಭಿನಯ ಪ್ರವೀಣೆ ಆಗಿದ್ದರು.


ವಿಶೇಷವಾಗಿ ವರನಟ ಪದ್ಮಭೂಷಣ ಡಾ॥ ರಾಜ್‌ಕುಮಾರ್ ಅವರೊಂದಿಗೆ 'ಅಣ್ಣತಂಗಿ' (1958) ಚಿತ್ರದಿಂದ ಆರಂಭಿಸಿ 'ಭಾಗ್ಯವಂತರು' ವರೆಗೆ ಹನ್ನೊಂದು ಚಿತ್ರಗಳಲ್ಲಿ ಬಿ.ಸರೋಜಾದೇವಿ ಅಭಿನಯಿಸಿ, ಅಭಿಜಾತ ಅಭಿನೇತ್ರಿಯಾಗಿ ಮೆರೆದಿದ್ದಾರೆ. 1961ರಲ್ಲಿ ತೆರೆಕಂಡ ಚಿತ್ರಶಿಲ್ಪಿ ಬಿ.ಆರ್.ಪಂತುಲು ಅವರ 'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ತಾಯ್ನಾಡಿನ ದಾಸ್ಯದ ಸಂಕೋಲೆಯನ್ನು ಕಿತ್ತೆಸೆಯುವ ರಾಣಿ ಚೆನ್ನಮ್ಮನಾಗಿ ಸರೋಜಾದೇವಿಯ ಅಭಿನಯವೇನು ಸಾಮಾನ್ಯವೆ?. ಚೆನ್ನಮ್ಮನ ಪತಿ ದೇಸಾಯಿ ಮಲ್ಲಸರ್ಜನಾಗಿ ಅಭಿನಯಿಸಿದ್ದ ಡಾ॥ರಾಜ್‌ರವರೇ ಒಂದು ಕ್ಷಣ ಸರೋಜಾದೇವಿ ಅಭಿನಯ ಕಂಡು ಮೂಕವಿಸ್ಮಿತರಾಗಿದ್ದರಂತೆ. ಆ ಚಿತ್ರಕ್ಕೆ ಕೇಂದ್ರ ಸರ್ಕಾರದ ರಜತ ಪದಕ ರಾಷ್ಟ್ರೀಯ ಪುರಸ್ಕಾರ ದೊರೆತಾಗ ಸ್ವತಃ ಡಾ॥ ರಾಜ್‌ರವರೇ ಇದು ಸರೋಜಾದೇವಿಯವರ ಅಮೋಘ ಅಭಿನಯಕ್ಕೆ ಸಂದ ಗೌರವವೆಂದು ಉದ್ಗರಿಸಿದ್ದರಂತೆ!.

ಹಾಗೆಯೇ ಬಿ.ಪುಟ್ಟಸ್ವಾಮಯ್ಯನವರ ಕಾದಂಬರಿ ಆಧರಿಸಿ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಚಿತ್ರಿಸಿ 1969ರಲ್ಲಿ ತೆರೆಗೆ ಬಂದ 'ಮಲ್ಲಮ್ಮನ ಪವಾಡ' ಚಿತ್ರದಲ್ಲಿ ಡಾ॥ ರಾಜ್ ಜೊತೆ ನಟಿಸಿರುವ ಸರೋಜಾದೇವಿಯವರು ಜೀವತುಂಬಿರುವ ಮಲ್ಲಮ್ಮನನ್ನು ಮರೆಯಲಾದೀತೆ? ಭಾರತೀಯ ಚಿತ್ರರಂಗದ ದಿಗ್ದರ್ಶಕ ದಿಗ್ಗಜರ ಗಮನಸೆಳೆದಿದ್ದ 'ಮಲ್ಲಮ್ಮನ ಪವಾಡ'ದ ಪ್ರಭಾವದಿಂದ ಹಿಂದಿಯಲ್ಲಿ 'ಬೇಟ' ಚಿತ್ರ ಬಂತು. ಆಶ್ಚರ್ಯವೆಂದರೆ ಇದೇ ಮಲ್ಲಮ್ಮನ ಪವಾಡ, ಬೇಟ ಚಿತ್ರಗಳು ರೂಪಾಂತರಗೊಂಡು ಮತ್ತೆ 'ಅಣ್ಣಯ್ಯ' ಚಿತ್ರವಾಗಿ ಕನ್ನಡದಲ್ಲೇ ಬಂತೆಂದರೆ ಸರೋಜಾದೇವಿ ಅಭಿನಯದ 'ಮಲ್ಲಮ್ಮನ ಪವಾಡ'ದ ಶಕ್ತಿಯ ಅರಿವಾಗದೆ ಇರದು.


ಇನ್ನು 1971ರಲ್ಲಿ ಬಂದ ಸಿದ್ದಲಿಂಗಯ್ಯ ನಿರ್ದೇಶನದ 'ನ್ಯಾಯವೇ ದೇವರು' ಚಿತ್ರವಂತೂ ಡಾ॥ರಾಜ್ ಮತ್ತು ಸರೋಜಾದೇವಿ ಜೋಡಿಯಲ್ಲಿನ ಒಂದು ಅಮರ ಪ್ರೇಮ ಕಾವ್ಯವೆಂದೇ ಹೇಳಬಹುದು. ಅಂತೆಯೇ ಅದೇ ವರ್ಷ ತೆರೆಗೆ ಬಂದ ಕೆ.ಎಸ್.ಎಲ್.ಸ್ವಾಮಿ(ರವಿ) ಅವರ 'ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮಾ', 1974 ರಲ್ಲಿ ಪೌರಾಣಿಕ ಚಿತ್ರಗಳಲ್ಲೇ ಬಹುವೈಭವೋಪೇತವಾಗಿದ್ದ ವಿಜಯ್ ಅವರ 'ಶ್ರೀನಿವಾಸ ಕಲ್ಯಾಣ', 1977ರ 'ಬಬ್ರುವಾಹನ' ಸೇರಿದಂತೆ ಹಲವು ಪೌರಾಣಿಕ ಚಿತ್ರಗಳಲ್ಲಿ ಅಮೋಘವಾಗಿ ಅಭಿನಯಿಸಿದರು. ಅದೇ ವರ್ಷ ಮೂಡಿಬಂದ 'ಭಾಗ್ಯವಂತರು' ಚಿತ್ರದ ಪಾರ್ವತಿ ಪಾತ್ರಕ್ಕೆ ಸರೋಜಾದೇವಿ ಪರಕಾಯ ಪ್ರವೇಶ ಮಾಡಿದ್ದರು. ಹೀಗೆ ತಾರೆ ಸರೋಜಾದೇವಿ ತಮ್ಮ ಅಪ್ರತಿಮ ಅಭಿನಯದಿಂದ ಚಿತ್ರಪ್ರೇಮಿಗಳನ್ನು ಮಂತ್ರಮುಗ್ಧರನ್ನಾಗಿಸಿದ ಹಲವಾರು ಚಿತ್ರಗಳು ತೆರೆಯ ಮೇಲೆ ಬಂದಿವೆ. ಅದರಲ್ಲೂ 'ಲಕ್ಷ್ಮಿ ಸರಸ್ವತಿ' ಚಿತ್ರದಲ್ಲಿ ದ್ವಿಪಾತ್ರದಲ್ಲಿ ನಟಿಸಿದ್ದ ಅಂದಿನ ಕಾಲದ ಪ್ರಥಮ ನಟಿ. ಸರೋಜಾದೇವಿಯ ಅಂದಿನ ಸ್ಟಾರ್‌ವ್ಯಾಲ್ಯೂಗೆ ಇಂತಹ ಸಾವಿರಾರು ಸಾಕ್ಷಿ ಸಿಗುತ್ತವೆ.

ರಾಜ್ಯ ಸರ್ಕಾರದ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮ, ಕಂಠೀರವ ಸ್ಟುಡಿಯೋ, ರಾಜ್ಯ ಚಲನಚಿತ್ರ ಪ್ರಶಸ್ತಿ ಸಲಹಾ ಸಮಿತಿ, ಕೇಂದ್ರ ಸರ್ಕಾರದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿ, ಚಲನಚಿತ್ರ ಕಲಾವಿದರ ಕ್ಷೇಮಾಭಿವೃದ್ಧಿ ಸಂಸ್ಥೆ ಹಾಗೂ ಪ್ರತಿಷ್ಠಿತ ಭಾರತೀಯ ಚಲನಚಿತ್ರಗಳ ಪನೋರಮಾ ಪ್ರಶಸ್ತಿ ಆಯ್ಕೆ ಸಮಿತಿಗಳ ಅಧ್ಯಕ್ಷೆಯಾಗಿ, ಕೇಂದ್ರ ಮತ್ತು ರಾಜ್ಯ ಚಲನಚಿತ್ರ ಸೆನ್ಸಾರ್ ಮಂಡಳಿಗಳ ಸದಸ್ಯೆಯಾಗಿ ಸೇವೆ ಸಲ್ಲಿಸಿದ್ದಾರೆ. ತಿರುಮಲೆ–ತಿರುಪತಿ ದೇವಸ್ಥಾನದ ಟ್ರಸ್ಟಿಯೂ ಆಗಿ ಕಾರ್ಯನಿರ್ವಹಿಸಿದ್ದಾರೆ.

ಸರೋಜಾದೇವಿಯವರ ಕಲಾಸೇವೆಗೆ 'ಪದ್ಮಶ್ರೀ', 'ಪದ್ಮಭೂಷಣ' ಗೌರವ ಸಂದಿದೆ. 'ರಾಜ್ಯೋತ್ಸವ ಪ್ರಶಸ್ತಿ', 'ಅಭಿನವ ಸರಸ್ವತಿ ರಾಜ್ಯ ಪ್ರಶಸ್ತಿ', 'ಸಾವಿತ್ರಮ್ಮ ದೇಜಗೌ ರಾಜ್ಯ ಪ್ರಶಸ್ತಿ', ಬೆಂಗಳೂರು ವಿವಿಯಿಂದ ಗೌರವ 'ಡಾಕ್ಟರೇಟ್ ಪದವಿ', ಆಂಧ್ರ ಸರ್ಕಾರದ 'ಎನ್.ಟಿ.ಆರ್. ರಾಜ್ಯ ಪ್ರಶಸ್ತಿ', 'ಫಿಲಂಫೇರ್ ಪ್ರಶಸ್ತಿ' ಸೇರಿದಂತೆ ನೂರಾರು ಪ್ರಶಸ್ತಿ–ಪುರಸ್ಕಾರಗಳು ಸಂದಿವೆ. 60ನೇ ಸ್ವಾತಂತ್ರ್ಯೋತ್ಸವದ ದ್ಯೋತಕವಾಗಿ ಭಾರತ ಸರ್ಕಾರ 'ಜೀವಮಾನ ಸಾಧನೆ ರಾಷ್ಟ್ರೀಯ ಪ್ರಶಸ್ತಿ' ನೀಡಿ ಸರೋಜಾದೇವಿ ಅವರನ್ನು ಗೌರವಿಸಿದೆ. ಇಂಥ ಮೇರುಗೌರವ ಪಡೆದ ಪ್ರಥಮ ಚಲನಚಿತ್ರ ಅಭಿನೇತ್ರಿ ಇವರು ಕನ್ನಡಿಗರೆಂಬುದೇ ಒಂದು ಹೆಮ್ಮೆ.









ಮೈಸೂರು ಮಿತ್ರ

ಮೇದಿನಿಯಲ್ಲಿ 400 ಎಕರೆ ಭೂಮಿ ಒತ್ತುವರಿ ತೆರವುಗೊಳಿಸಿ

ಅಧಿಕಾರಿಗಳಿಗೆ ಸಂಸದ ಸುನೀಲ್ ಬೋಸ್ ಖಡಕ್ ಆದೇಶ

ತಿ.ನರಸೀಪುರ, ಜು.14– ಮೇದಿನಿ ಗ್ರಾಮದಲ್ಲಿ 400 ಎಕರೆ ಭೂಮಿ ಒತ್ತುವರಿ ಮಾಡಿಕೊಂಡಿರುವ ಪ್ರಭಾವಿ ಉದ್ಯಮಿಯೊಬ್ಬರ ನಡೆಗೆ ತೀವ್ರ ಗರಂ ಆದ ಸಂಸದ ಸುನೀಲ್ ಬೋಸ್ ಕೂಡಲೇ ಸರ್ವೇ ಮಾಡಿ ಒತ್ತುವರಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ತಾಲೂಕಿನ ಮೇದಿನಿ ಗ್ರಾಮದಲ್ಲಿ ಖಡಕ್ ಆದೇಶ ನೀಡಿದರು.

ಪ್ರಭಾವಿ ಉದ್ಯಮಿಯೊಬ್ಬರು ರಸ್ತೆ ಮತ್ತು ಚಾನೆಲ್ ಮುಚ್ಚಿ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಸಂಸದ ಸುನೀಲ್ ಬೋಸ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಎಸ್‌ಪಿ ವಿಷ್ಣುವರ್ಧನ್ ಹಾಗೂ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದರು.

ನಂತರ ಗ್ರಾಮದಲ್ಲಿ ನಡೆದ ಸಾರ್ವಜನಿಕ ಕುಂದು ಕೊರತೆ ಸಭೆಯಲ್ಲೂ ಸಹ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳ ಮೇಲೆ ಗರಂ ಆದ ಸಂಸದ ಸುನೀಲ್ ಬೋಸ್ ರಸ್ತೆ ಮತ್ತು ನಾಲೆ ಮುಚ್ಚಿ ಒತ್ತುವರಿ ಮಾಡಿಕೊಳ್ಳುವ ತನಕ ಅಧಿಕಾರಿಗಳು ಏನು ಮಾಡುತ್ತಾ ಇದ್ರಿ ಎಂದು ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.



ಮೇದಿನಿಯಲ್ಲಿ ನಡೆದ ಸಭೆಯಲ್ಲಿ ಸಂಸದ ಸುನೀಲ್ ಬೋಸ್ ಮಾತನಾಡಿದರು.

ಈ ಭಾಗದಲ್ಲಿ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ಜನರೇ ಹೆಚ್ಚಾಗಿದ್ದು, ಅವರು ಮುಗ್ದರಿದ್ದಾರೆ. ಕೃಷಿ ಅವರಿಗೆ ಮೂಲ ಕಸುಬಾಗಿದೆ. ರೈತರ ಜಮೀನು, ಸರ್ಕಾರಿ ರಸ್ತೆ, ನಾಲೆಗಳನ್ನು ಒತ್ತುವರಿ ಮಾಡಿಕೊಂಡಿರುವ ವ್ಯಕ್ತಿ ಎಷ್ಟೇ ಪ್ರಭಾವಿಯಾದರೂ ಕೂಡಲೇ ಒತ್ತುವರಿ ಜಮೀನನ್ನು ಸರ್ವೇ ಮಾಡಿ, ತಕ್ಷಣ ತೆರವುಗೊಳಿಸಿ ಮೂಲ ದಾಖಲಾತಿ ಇರುವವರಿಗೆ ಜಮೀನು ಸಿಗಲು ಅಗತ್ಯ ಕ್ರಮ ಜರುಗಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇದು ನಿನ್ನೆ ಮೊನ್ನೆ ಇಷ್ಯೂ ಅಲ್ಲ. ಹಲವಾರು ವರ್ಷಗಳಿಂದ ನಡೀತಾ ಇದೆ. ವ್ಯಕ್ತಿಯೊಬ್ಬ ಸರ್ಕಾರಿ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದಾನೆ. ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾನೆ ಎಂದರೆ ಅಧಿಕಾರಿಗಳು ಏನು ಮಾಡ್ತಾ ಇದ್ದೀರಾ. ಸ್ಥಳೀಯ ಆರ್‌ಐ, ವಿಎ ಏನ್ಮಾಡ್ತಾ ಇದ್ದಾರೆ. ಒಬ್ಬ ರೈತ ಒಂದು ಗುಂಟೆ ಜಮೀನು ಒತ್ತುವರಿ ಮಾಡಿಕೊಂಡಿದ್ದಾನೆ ಎಂದರೆ ಅಧಿಕಾರಿಗಳು ಎದ್ದು ಬಿದ್ದು ಹೋಗಿ ತೆರವು ಮಾಡಿಸುತ್ತೀರಾ. ಇಲ್ಲಿ ಯಾವುದೇ ದಾಖಲೆ ಇಲ್ಲದೇ ನೂರಾರು ಎಕರೆ ಜಮೀನು ಒತ್ತುವರಿಯಾಗಿದೆ. ಅಧಿಕಾರಿಗಳು ಯಾಕೆ ಸುಮ್ಮನಿದ್ದೀರಾ, ಅಧಿಕಾರಿಗಳ ನಡೆ ನಿಜಕ್ಕೂ ಆಶ್ಚರ್ಯ ತಂದಿದೆ ಎಂದರು.

> 2 ಸರ್ವೇ ನಂಬರ್‌ಗಳಲ್ಲಿ 193 ಮತ್ತು 208 ಎಕರೆ ಸರ್ಕಾರಿ ಹಾಗೂ ರೈತರ ಜಮೀನುಗಳನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ನಾಳೆಯಿಂದ 10 ದಿನಗಳವರೆಗೆ ಸರ್ವೇ ನಡೆಯಲಿದೆ. ಈ ಪ್ರದೇಶದಲ್ಲಿ ಸ್ವಾಧೀನವಾಗಿರುವಂತಹ ನಕ್ಷೆ ನಮ್ಮ ಬಳಿ ಇಲ್ಲ. ರೈತರೆಷ್ಟು ಮಂದಿ ಸ್ವಾಧೀನದಲ್ಲಿದ್ದಾರೆ ಹಾಗೂ ಪ್ರಭಾವಿ ವ್ಯಕ್ತಿ ಎಷ್ಟು ಪ್ರದೇಶದಲ್ಲಿ ಸ್ವಾಧೀನ ಹೊಂದಿದ್ದಾರೆ ಎಂಬುದು ನಿಖರವಾಗಿ ಗೊತ್ತಾಗಿಲ್ಲ. ಈ ಬಗ್ಗೆ ದಾಖಲೆಗಳಿದ್ದರೆ ಅದನ್ನು ನೀಡಿದಲ್ಲಿ ಪರಿಶೀಲಿಸಲಾಗುತ್ತದೆ. ತಾಲೂಕು ಆಡಳಿತದ ನೇತೃತ್ವದಲ್ಲಿ ಪೊಲೀಸರ ಸಹಯೋಗದೊಂದಿಗೆ ಸರ್ವೇ ಕಾರ್ಯ ನಡೆಯಲಿದೆ. ಸ್ವಾಧೀನದ ಸ್ಕೆಚ್ ಬಂದ ನಂತರ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ. – ಜಿ.ಲಕ್ಷ್ಮಿಕಾಂತ್‌ರೆಡ್ಡಿ ಜಿಲ್ಲಾಧಿಕಾರಿ.

ಈ ವೇಳೆ ಗ್ರಾಮಸ್ಥರೊಬ್ಬರು ಒತ್ತುವರಿಯಾಗಿರುವ ಜಮೀನಿನ ಬಗ್ಗೆ ಪ್ರಶ್ನಿಸಲು ಹೋದರೆ ನಿಮ್ಮ ಬಳಿ ಇರುವುದೇ ನಕಲಿ ಡಾಕ್ಯುಮೆಂಟ್ ಎಂದು ತಹಸೀಲ್ದಾರ್ ನಮ್ಮ ಮೇಲೆಯೇ ಕೇಸು ದಾಖಲಿಸುವ ಬೆದರಿಕೆ ಒಡ್ಡುತ್ತಿದ್ದಾರೆ ಎಂದು ರೈತ ಮುಖಂಡರು ದೂರಿದ ಹಿನ್ನೆಲೆಯಲ್ಲಿ ಟಿ.ಜಿ.ಸುರೇಶಾಚಾರ್ ಅವರನ್ನು ತರಾಟೆ ತೆಗೆದುಕೊಂಡ ಸಂಸದರು ಸಾರ್ವಜನಿಕ ಕೆಲಸ ಮಾಡಲು ನೀವಿಲ್ಲಿದ್ದೀರಾ. ಅದನ್ನು ಸರಿಯಾಗಿ ಮಾಡಿ. ಆಗದಿದ್ದರೆ ಇಲ್ಲಿಂದ ವರ್ಗಾವಣೆ ಪಡೆದು ಹೊರಹೋಗಿ ಎಂದು ಹೇಳುತ್ತಿದ್ದಂತೆ ಸಮಜಾಯಿಷಿ ನೀಡಲು ಮುಂದಾದ ತಹಸೀಲ್ದಾರ್‌ರನ್ನು ಕುರಿತು ಗೊತ್ತು ಕುಳಿತುಕೊಳ್ರಿ ನೀವೇನು ಎಂಬುದು ನಮಗೂ ಗೊತ್ತಿದೆ. ಸರ್ವೇ ನಂ.7ರಲ್ಲಿ ಅಕ್ರಮ ಗುಡಿಸಲು ತೆರವುಗೊಳಿಸುವ ವೇಳೆ ನೀವೇನೂ ಮಾತಾಡಿದ್ದೀರಾ ಎಂಬುದು ಗೊತ್ತಿದೆ. ರಾಜಕಾರಣಿಗಳು ಹೇಳ್ತಾರೆ ಅಂತ ಏನಾದ್ರು ಮಾಡೋಕಾಗುತ್ತಾ ಅಂತ ನೀವು ಹೇಳಿಲ್ವಾ, ಹಾಗಿದ್ರೆ ರಾಜಕಾರಣಿಗಳಿಲ್ಲದೇ ನೀವು ಬಂದು ಬಿಟ್ರಾ ಎಂದು ರೇಗುತ್ತಿದ್ದಂತೆ ತಹಸೀಲ್ದಾರ್ ಪೆಚ್ಚಾಗಿ ನಿಲ್ಲುವಂತಾಯಿತು. ಜನರು ನಮಗೆ ಅಧಿಕಾರ ಕೊಟ್ಟಿದ್ದಾರೆ. ನಾವು ನಿಮಗೆ ಕೆಲಸ ಮಾಡುವಂತೆ ಹೇಳ್ತೀವೆ. ನಾವೇಳುವ ಮೊದಲು ನೀವೇ ಕೆಲಸ ಮಾಡಿದ್ರೆ ನಾನು ಯಾರಿಗೂ ಫೋನ್ ಮಾಡಿ ಹೇಳಲ್ಲ ಎಂದರು.

ಒತ್ತುವರಿ ತೆರವು ಮಾಡಿಸಿ: ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರನ್ನು ಕುರಿತು ಮಾತನಾಡಿದ ಸಂಸದರು ಡಿಸಿಯವರೇ ನೀವು ಜವಾಬ್ದಾರಿ ತೆಗೆದುಕೊಂಡು ಜನರಿಗೆ ನ್ಯಾಯ ದೊರಕಿಸಿಕೊಡಬೇಕು. ಕೆಲವರು ನಮ್ಮ ಜಮೀನು ಇದೆ ಎಂದು ಬರಬಹುದು. ಮೊದಲು ಸರ್ವೇ ಮಾಡಿಸಿ ಮೂಲ ದಾಖಲಾತಿ ಇದ್ದವರಿಗೆ ಯಾವುದೇ ತೊಂದರೆ ಕೊಡುವುದು ಬೇಡ. ಮೊದಲು ಉದ್ದೇಶಿತ ಜಮೀನಿನ ಸರ್ವೇ ಮಾಡಿಸಿ, ಆದಷ್ಟು ಶೀಘ್ರ ಈ ಕೆಲಸ ಮಾಡಿ ಬಡ ಜನರಿಗೆ ಒಳ್ಳೆಯದನ್ನು ಮಾಡಿ ಎಂದು ತಾಕೀತು ಮಾಡಿದರು.

ಡಿವೈಎಸ್‌ಪಿ ರಘು, ಮೈಮುಲ್ ಅಧ್ಯಕ್ಷ ಆರ್.ಚಲುವರಾಜು, ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್, ಮಾಜಿ ಸದಸ್ಯ ನರಸಿಂಹ ಮಾದ ನಾಯಕ, ಕುಕ್ಕೂರು ಪ್ರಸನ್ನ, ಉಪ್ಪಾರ ಮಹಾಸಭಾ ಅಧ್ಯಕ್ಷ ಕಾವೇರಿಪುರ ಮಹದೇವ ಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಶಾಂತರಾಜು, ತಲಕಾಡು ಮಲ್ಲಣ್ಣಿ, ಮೂಗೂರು ಎಂ.ಬಿ.ಸಾಗರ್, ಪುರಸಭೆ ಮಾಜಿ ಸದಸ್ಯ ರಾಘವೇಂದ್ರ, ಮೇದಿನಿ ಕುಮಾರ್, ಉಕ್ಕಲಗೆರೆ ಗ್ರಾಪಂ ಮಾಜಿ ಸದಸ್ಯ ರಾಜು, ಸಂಸದರ ಆಪ್ತ ಕಾರ್ಯದರ್ಶಿ ಬಸವರಾಜು ಸೇರಿದಂತೆ ಮತ್ತಿತರರಿದ್ದರು.

ಶಕ್ತಿ ಯೋಜನೆಯಿಂದ ಮಹಿಳೆಯರ ಸಬಲೀಕರಣ

ಶಾಸಕ ದರ್ಶನ್ ಅಭಿಪ್ರಾಯ

ನಂಜನಗೂಡು, ಜು.14– ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿ ಕೊಳ್ಳಲು ನೆರವಾಗುವ ಜೊತೆಗೆ ಶಕ್ತಿ ಯೋಜನೆಯಿಂದ ಮಹಿಳೆಯರ ಸಬಲೀಕರಣವಾಗುತ್ತಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಏರ್ಪಡಿಸಿದ್ದ ಶಕ್ತಿ ಯೋಜನೆ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಬಾ ಸಾಹೇಬರ ಆಶಯದಂತೆ ಸಿಎಂ ಸಿದ್ದರಾಮಯ್ಯ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, ಸಾಕಷ್ಟು ಬಡ ಕುಟುಂಬಗಳು ಬದುಕು ಕಟ್ಟಿ ಕೊಂಡಿವೆ. ಮಹಿಳೆಯರ ಬಲವರ್ಧನೆಗಾಗಿ ರೂಪಿಸಿದ ಶಕ್ತಿ ಯೋಜನೆಯಿಂ ದಾಗಿ ಮಹಿಳೆಯರು ರಾಜ್ಯಾದ್ಯಂತ 500 ಕೋಟಿ ಉಚಿತ ಟಿಕೆಟ್ ಪಡೆದು ಪ್ರಯಾಣಿಸಿರುವ ಮೂಲಕ ಮೈಲುಗಲ್ಲು ಸ್ಥಾಪಿಸಿದ್ದಾರೆ. ಆ ಮೂಲಕ ರಾಜ್ಯ ಇಡೀ ದೇಶದಲ್ಲಿ ಮಹಿಳಾ ಸಬಲೀಕರಣದತ್ತ ದಾಪುಗಾಲು ಹಾಕುತ್ತಿರುವುದು ಸಂತಸ ತಂದಿದೆ ಎಂದರು.

ನಮ್ಮ ತಂದೆ ಆರ್.ಧ್ರುವನಾರಾಯಣ್ ಅವರು ಸಂಸದರಾಗಿದ್ದ ವೇಳೆ ಕೇಂದ್ರ ರಸ್ತೆ ನಿಧಿ ಅನುದಾನದಡಿ ನಂಜನಗೂಡಿನಿಂದ ಹುಲ್ಲಹಳ್ಳಿವರೆಗಿನ ಮುಖ್ಯರಸ್ತೆ ಅಭಿವೃದ್ಧಿಪಡಿಸಿದ್ದರು. ಈಗ ಆ ರಸ್ತೆ ಹೆಚ್ಚು ಗುಂಡಿಗಳಾಗಿ ಸಂಚಾರಕ್ಕೆ ತೊಂದರೆಯಾಗಿದೆ.



ಹುಲ್ಲಹಳ್ಳಿಯಲ್ಲಿ ಕಾರ್ಯಕ್ರಮಕ್ಕೆ ಶಾಸಕ ದರ್ಶನ್ ಚಾಲನೆ ನೀಡಿದರು.

ರಸ್ತೆ ಅಭಿವೃದ್ಧಿಪಡಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಕೆಶಿಪ್ ಯೋಜನೆ ಅಡಿ ತಾಲೂಕಿನ ಕಣೆನೂರು ಗ್ರಾಮದಿಂದ ಸಂತೆಮರಳ್ಳಿವರೆಗಿನ 52 ಕಿಮೀವರೆಗೆ ರಾಜ್ಯ ಹೆದ್ದಾರಿ ಕಾಮಗಾರಿಗೆ ಈಗಾಗಲೇ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗಿದ್ದು, ಶೀಘ್ರ ಟೆಂಡರ್ ಮುಗಿಸಿ ಕಾಮಗಾರಿ ಆರಂಭಿಸಲಾಗುವುದು ಎಂದರು.

ಈ ವೇಳೆ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಅನ್ಸರ್ ಅಹಮದ್, ಗ್ರಾಪಂ ಉಪಾಧ್ಯಕ್ಷ ಲೋಕೇಶ್, ಮುಖಂಡರಾದ ಎಂ.ಮಾದಪ್ಪ, ಅಭಿನಂದನ್ ಪಟೇಲ್, ಕುರಿಹುಂಡಿ ರಾಜು, ಶಿವನಂಜನಾಯಕ, ಸೋಮೇಶ್, ಸಂಗರಾಜು, ಗೋವಿಂದರಾಜು, ಶಿವಣ್ಣ, ಮಹೇಶ್, ಹುಲಿ ಚಾಮುಂಡನಾಯಕ, ಎನ್.ಬಸವರಾಜು, ಮೂರ್ತಿ, ಸೋಮಸುಂದರ್, ಎಚ್.ಎನ್.ಮಲ್ಲೇಶ್, ಸಾರಿಗೆ ಘಟಕ ವ್ಯವಸ್ಥಾಪಕರಾದ ಬಿ.ಕೆ.ಶಂಕರ್ ಸೇರಿದಂತೆ ಹಲವರಿದ್ದರು.

ಗ್ಯಾರಂಟಿ ಯೋಜನೆಗಳಿಂದ ಖಜಾನೆ ಖಾಲಿಯಾಗಿಲ್ಲ

ತಿ.ನರಸೀಪುರ, ಜು.14– ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಖಜಾನೆ ಖಾಲಿಯಾಗಿಲ್ಲ. ಬದಲಿಗೆ ಹಣಕಾಸಿನ ಪರಿಸ್ಥಿತಿ ಸುಧಾರಿಸಿದೆ ಎಂದು ಸಂಸದ ಸುನೀಲ್ ಬೋಸ್ ಹೇಳಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಶಕ್ತಿ ಯೋಜನೆಯಡಿ 500ನೇ ಕೋಟಿ ಮಹಿಳಾ ಪ್ರಯಾಣಿಕರ ಪ್ರಯಾಣದ ಸಂಭ್ರಮದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಲಂಕರಿಸಿದ್ದ ಬಸ್‌ಗೆ ಪುಷ್ಪಾರ್ಚನೆ ಮಾಡಿ, ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ವೇಳೆ ರಾಜ್ಯದ ಜನತೆಗೆ ಪಂಚ ಗ್ಯಾರಂಟಿಗಳನ್ನು ಉಡುಗೊರೆಯಾಗಿ ನೀಡಿತ್ತು. ಆ ವೇಳೆ ವಿಪಕ್ಷದವರು ಗ್ಯಾರಂಟಿ ನೀಡುವ ಮೂಲಕ ಸರ್ಕಾರದ ಖಜಾನೆ ಖಾಲಿ ಮಾಡಿ ರಾಜ್ಯವನ್ನು ದಿವಾಳಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು. ಆದರೆ ವಿಪಕ್ಷದವರ ಆರೋಪದಂತೆ ರಾಜ್ಯದ ಸರ್ಕಾರದ ಖಜಾನೆ ಖಾಲಿಯಾಗಿಲ್ಲ. ಬದಲಿಗೆ



ಅಲಂಕೃತಗೊಂಡಿದ್ದ ಬಸ್‌ಗೆ ಸಂಸದ ಸುನೀಲ್ ಬೋಸ್ ಪುಷ್ಪಾರ್ಚನೆ ಮಾಡಿದರು.

ಖಜಾನೆ ಸಮೃದ್ಧವಾಗಿದೆ ಎಂದರು.

ಶಕ್ತಿ ಯೋಜನೆ 2023, ಜೂ.11ರಂದು ಜಾರಿಗೆ ಬಂದು ಕಳೆದ 25 ತಿಂಗಳಿಂದ ನಿರಂತರವಾಗಿ ಜಾರಿಯಲ್ಲಿದೆ. ಯಾವುದೇ ತೊಡಕುಗಳಿಲ್ಲದೇ ಸುಗಮವಾಗಿ ನಡೆಯುತ್ತಿರುವ ಗ್ಯಾರಂಟಿ ಯೋಜನೆ ಇದಾಗಿದೆ. ಇನ್ನು 500 ಕೋಟಿ ಮಹಿಳಾ ಪ್ರಯಾಣಿಕರ ಟ್ರಿಪ್ ಅನ್ನು ತಲುಪುವ ಮುಖಾಂತರ ದೇಶದಲ್ಲೇ ಹೊಸ ಮೈಲಿಗಲ್ಲನ್ನು ತಲುಪಿದೆ. ಸಿಎಂ ಸಿದ್ದರಾಮಯ್ಯನವರು ಗ್ಯಾರಂಟಿಯನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ. ಹಾಗಾಗಿ ರಾಜ್ಯದ ಜನತೆ ಶಕ್ತಿ ಯೋಜನೆ ಸೇರಿದಂತೆ ಉಳಿದ 4 ಗ್ಯಾರಂಟಿಗಳ ಸದುಪಯೋಗಕ್ಕೆ ಮುಂದಾಗಬೇಕೆಂದು ಮನವಿ ಮಾಡಿದರು.

ಈ ವೇಳೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಭು, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಚಿಳ್ಳು ಮಹದೇವ್, ಗ್ರಾಪಂ ಮಾಜಿ ಸದಸ್ಯ ಕಲಿಯೂರು ಶಿವಣ್ಣ, ಸೋಸಲೆ ದೇವರಾಜ್, ಕೆಎಸ್‌ಆರ್‌ಟಿಸಿ ರಾಜಣ್ಣ, ಸಂಚಾರ ಅಧೀಕ್ಷಕ ಮೋಹನ್ ನಾಯಕ, ಸಂಚಾರ ನಿಯಂತ್ರಕ ಕುಮಾರ, ಕೆ.ಎನ್.ಶಶಿಕುಮಾರ್, ಸಿಬ್ಬಂದಿ ಮೇಲ್ವಿಚಾರಕಿ ದೇವರತ್ನ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ರೈತರಿಗೆ ಸಬ್ಸಿಡಿ ದರದಲ್ಲಿ ಬಿತ್ತನೆ ಭತ್ತ ವಿತರಣೆ

ನಂಜನಗೂಡು, ಜು.14– ಕೃಷಿ ಇಲಾಖೆಯಿಂದ ರೈತರಿಗೆ ಸಬ್ಸಿಡಿ ದರದಲ್ಲಿ ಭತ್ತದ ಬಿತ್ತನೆ ಬೀಜ ವಿತರಿಸಲಾಗುತ್ತಿದ್ದು, ರೈತರು ಇದರ ಸದುಪಯೋಗಪಡಿಸಿಕೊಳ್ಳುವ ಜೊತೆಗೆ ಸುಧಾರಿತ ಬೇಸಾಯ ಕ್ರಮ ಅನುಸರಿಸಿ ಬಿತ್ತನೆ ಮಾಡಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ ಮತ್ತು ನಗರದ ಕೃಷಿ ಇಲಾಖೆ ಆವರಣದಲ್ಲಿ ರೈತರಿಗೆ ಬಿತ್ತನೆ ಭತ್ತ ವಿತರಿಸಿ ಮಾತನಾಡಿದ ಅವರು, ಜ್ಯೋತಿ, ಐಆರ್ 64, ಎಂಟಿಯು 1001, ಎಂಟಿಯು 1010, ಆರ್‌ಎನ್‌ಆರ್ 15048, ಸ್ಥಳೀಯ ಭತ್ತದ ಬಿತ್ತನೆ ಬೀಜಗಳನ್ನು ತಾಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಿಸಲಾಗುತ್ತಿದೆ. ಪ.ಜಾತಿ ಮತ್ತು ಪ.ವರ್ಗದ ರೈತರಿಗೆ 300, ಸಾಮಾನ್ಯ ವರ್ಗದ ರೈತರಿಗೆ 200 ರೂ. ಸಹಾಯ ಧನದಲ್ಲಿ ಬಿತ್ತನೆ ಬೀಜ ವಿತರಿಸಲಾಗುತ್ತಿದೆ. ರೈತರು ಇದರ ಸದುಪಯೋಗ ಪಡೆದುಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಬೇಕು. ಬಿತ್ತನೆ ಬೀಜಕ್ಕೆ ಕೊರತೆಯಾಗದಂತೆ ಕ್ರಮ ವಹಿಸುವಂತೆ ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ರೈತರಿಗೆ ಶಾಸಕ ದರ್ಶನ್ ಬಿತ್ತನೆ ಭತ್ತ ವಿತರಿಸಿದರು.

ತಾಲೂಕು ಕೃಷಿ ಸಹಾಯಕ ನಿರ್ದೇಶಕ ರವಿ ಮಾತನಾಡಿ, ರೈತರು ಭತ್ತದ ಬಿತ್ತನೆ ಸಮಯದಲ್ಲಿ ಅತಿಯಾಗಿ ಯೂರಿಯ ಬಳಸುತ್ತಿದ್ದಾರೆ. ಇದರಿಂದ ಮಣ್ಣಿನ ಫಲವತ್ತತೆ ನಾಶವಾಗುತ್ತದೆ. ಜೊತೆಗೆ ಸಸ್ಯಗಳ ಬೆಳವಣಿಗೆ ಹೆಚ್ಚಾಗಿ ಕಾಯಿ ಕಟ್ಟುವ ಪ್ರಮಾಣ ಕಡಿಮೆಯಾಗಿ ಇಳುವರಿಯಲ್ಲಿ ನಷ್ಟವಾಗುತ್ತದೆ. ಅಲ್ಲದೆ ರೋಗಗಳ ಬಾಧೆ ಹೆಚ್ಚಾಗುತ್ತದೆ. ಆದ್ದರಿಂದ ಕಾರ್ಬೋಡೈಸಂ ಉಪಯೋಗಿಸಿ ಬೀಜೋಪಚಾರ ಮಾಡುವ ಮೂಲಕ ಹಾಗೂ ಪೊಟ್ಯಾಷ್ ಗೊಬ್ಬರ ಬಳಕೆ ಮಾಡುವ ಮೂಲಕ ಹೆಚ್ಚು ಇಳುವರಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೃಷಿ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಮನವಿ ಮಾಡಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಸೇರಿದಂತೆ ಹಲವರಿದ್ದರು.

ವಿದ್ಯಾರ್ಥಿಗಳು ಸೃಜನಶೀಲ ವ್ಯಕ್ತಿತ್ವ ರೂಢಿಸಿಕೊಳ್ಳಿ

ಹೆಚ್.ಡಿ.ಕೋಟೆ, ಜು.14– ಇತ್ತೀಚಿಗೆ ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರ ಉರಿ ಹೊಡೆಯುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದ್ದಾರೆ. ಇದರಿಂದ ಅವರಲ್ಲಿ ಗುಣಮಟ್ಟ ಮತ್ತು ಸಮಗ್ರ ಅಧ್ಯಯನದ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ರಾಜ್ಯ ಜೀವಿಕ ಸಂಪನ್ಮೂಲ ವ್ಯಕ್ತಿ ಉಮೇಶ್.ಬಿ.ನೂರಲಕುಪ್ಪೆ ಆತಂಕ ವ್ಯಕ್ತಪಡಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್ ಜೀವಿಕ ತರಬೇತಿ ಕೇಂದ್ರದಲ್ಲಿ ಮೊಬೈಲ್ ಬಿಡಿ ಓದಿನ ಕಡೆ ಗಮನ ಕೊಡಿ ಪೂರಕ ಪ್ರೇರಣ ತರಗತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕೇವಲ ಅಂಕಗಳ ದೃಷ್ಟಿಕೋನ ಇಟ್ಟುಕೊಂಡು ಅಭ್ಯಾಸ ಮಾಡುತ್ತಿದ್ದಾರೆ. ಇದು ಅವರ ಸರ್ವತೋಮುಖ ಬೆಳವಣಿಗೆಗೆ ಮಾರಕವಾಗುತ್ತಿದೆ. ಆದರೆ ನಾವು ಅಂಕಗಳ ಪಕ್ಕಕ್ಕಿಟ್ಟು ಇಡೀ ಪಾಠವನ್ನು ಸಮಗ್ರ ಅಧ್ಯಯನ ಮಾಡಬೇಕು. ವಿದ್ಯಾರ್ಥಿಗಳು ಕ್ರಿಯಾಶೀಲ ಹಾಗೂ



ವಿದ್ಯಾರ್ಥಿಗಳಿಗೆ ಪ್ರೇರಣ ತರಗತಿ ನಡೆಸಲಾಯಿತು.

ಸೃಜನಶೀಲ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು. ಮೊಬೈಲ್‌ನಿಂದ ಸಾಧ್ಯವಾದಷ್ಟು ದೂರವಿದ್ದು ಕುಟುಂಬ, ಸ್ನೇಹಿತರು, ಸುತ್ತಮುತ್ತಲ ಪರಿಸರದೊಂದಿಗೆ ಒಡನಾಟ ಬೆಳೆಸಿಕೊಂಡು ಕಲಿಯುವುದರಿಂದ ನಮ್ಮ ಕಲಿಕೆ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ ಎಂದರು.

ಯುವರಾಜ ಕಾಲೇಜಿನ ವಿದ್ಯಾರ್ಥಿ ಉನ್ನೀಲ್ ಯು.ಎಸ್ ಮಕ್ಕಳೊಂದಿಗೆ ಸಂವಹನ ನಡೆಸಿ ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ನಮ್ಮ ಒತ್ತಡ ಹೇಗೆ ನಿಭಾಯಿಸಬೇಕು. ನಮ್ಮ ಕಲಿಕೆ ಯಾವ ದಿಕ್ಕಿನಲ್ಲಿ ಇರಬೇಕು. ನಮ್ಮ ದಿನಚರಿ ಹೇಗೆ ಇರಬೇಕು ಹಾಗೂ ಸ್ವಾಭಾವಿಕ ಮತ್ತು ಸಹಜ ಸ್ಥಿತಿಯಿಂದಲೇ ನಮ್ಮ ಒತ್ತಡಗಳನ್ನು ಕಡಿಮೆ ಮಾಡುತ್ತಾ ಓದನ್ನು ಉತ್ತಮ ಪಡಿಸುವುದು ಹೇಗೆ ಎಂದು ತಿಳಿಸಿದರು.

ಈ ವೇಳೆ ಜೀವಿಕ ತರಬೇತಿ ಕೇಂದ್ರದ ಸಂಯೋಜಕ ಬಸವರಾಜ್, ಸಂಚಾಲಕರಾದ ಚಂದ್ರಶೇಖರ ಮೂರ್ತಿ, ಶಿವರಾಜ್, ರಾಜ್ಯ ಮಟ್ಟದ ಮುಖಂಡರಾದ ಶಿವಣ್ಣ, ಮಹದೇವ ಮತ್ತು ನಟರಾಜ್, ಶ್ರೀನಿವಾಸ, ವಸಂತ, ಲಕ್ಷ್ಮಮ್ಮ, ಮಕ್ಕಳು ಮತ್ತು ಪೋಷಕರು ಹಾಜರಿದ್ದರು.

ಮಹಿಳೆಯರಿಂದ ಶಕ್ತಿ ಯೋಜನೆ ಸದ್ಬಳಕೆ

ಹುಣಸೂರು, ಜು.14– ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ 'ಶಕ್ತಿ' ಯೋಜನೆಯಡಿ ಉಚಿತ ಬಸ್ ಪ್ರಯಾಣದ ಮಹಿಳಾ ಪ್ರಯಾಣಿಕರ ಸಂಖ್ಯೆ 500 ಕೋಟಿ ದಾಟಿದ್ದು, ಆ ಮೂಲಕ ಮಹತ್ವದ ಮೈಲುಗಲ್ಲು ಸಾಧಿಸಿದೆ ಎಂದು ಹುಣಸೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಘು ತಿಳಿಸಿದರು.

ನಗರದ ಬಸ್ ನಿಲ್ದಾಣದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಬಸ್ ಟಿಕೆಟ್ ಹಾಗೂ ಸಿಹಿ ವಿತರಿಸಿ ಮಾತನಾಡಿ, ರಾಜ್ಯದ ಮಹಿಳೆಯರು ಸಾರಿಗೆ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸುವ ಮೂಲಕ ಶಕ್ತಿ ಯೋಜನೆ ಸದ್ಬಳಕೆ ಮಾಡಿಕೊಂಡಿದ್ದಾರೆ. ಯೋಜನೆ ಜಾರಿಯಾದ ದಿನದಿಂದ ಇಂದಿನವರೆಗೆ ನಿತ್ಯ 80 ಲಕ್ಷಕ್ಕೂ ಹೆಚ್ಚು ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆಯಡಿ ಉಚಿತ ಟಿಕೆಟ್ ಪಡೆದು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾರೆ ಎಂದರು.



ಈ ವೇಳೆ ತಹಸೀಲ್ದಾರ್ ಜೆ.ಮಂಜುನಾಥ್, ಹುಡಾ ಅಧ್ಯಕ್ಷ ಹೆಚ್.ಪಿ.ಅಮರನಾಥ್, ತಾಪಂ ಇಓ ಹೊಂಗಯ್ಯ, ಹುಣಸೂರು ಸಾರಿಗೆ ಘಟಕದ ವ್ಯವಸ್ಥಾಪಕ ಸುಬ್ರಹ್ಮಣ್ಯ, ಸೆಸ್ಕಾಂ ಎಇಇ ಜಗದೀಶ್, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಕುರಿ ಉಣ್ಣೆ ನಿಗಮದ ಮಾಜಿ ನಿರ್ದೇಶಕ ಸ್ವಾಮಿ, ತಾಪಂ ಮಾಜಿ ಸದಸ್ಯರಾದ ಅಜ್ಗರ್ ಪಾಷಾ, ದೇವರಾಜ್, ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ಪುಟ್ಟರಾಜ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷರಾದ ದರ್ಶನ್, ಫೈಸಲ್, ಮುಖಂಡರಾದ ರಾಜು, ಶಿವರಾಜೇಗೌಡ, ಟಿ.ಕೃಷ್ಣ ಕಾರ್ತಿಕ್, ಶೋಭ, ಕಲ್ಪನ, ಸುನೀತ, ಕಲ್ಪನಾ, ಕಮಲಮ್ಮ, ಮಣಿ ಯಮ್ಮ, ರೇಣುಕ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಮುಜೀಬ್, ಮೋಹನ್, ಗೋವಿಂದ, ಸುರೇಶ್ ಇತರರಿದ್ದರು.

ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರ ಸಂಖ್ಯೆ 500 ಕೋಟಿ ದಾಟಿದ ಹಿನ್ನೆಲೆ

ಸರಗೂರಲ್ಲಿ 'ಕೈ' ಕಾರ್ಯಕರ್ತರಿಂದ ಸಂಭ್ರಮಾಚರಣೆ

ಸರಗೂರು, ಜು.14– ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣದ ಫಲಾನುಭವಿಗಳ ಸಂಖ್ಯೆ 500 ಕೋಟಿ ದಾಟಿದ ಹಿನ್ನೆಲೆಯಲ್ಲಿ ಪಟ್ಟಣದ ಕೆಎಸ್‌ಆರ್‌ಟಿಸಿ ನಿಲ್ದಾಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮಹಿಳಾ ಪ್ರಯಾಣಿಕರಿಗೆ ಸಿಹಿ ಹಂಚಿ ಸಂಭ್ರಮಾಚರಣೆಯನ್ನು ನಡೆಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು ಮಾತನಾಡಿ, ಶಕ್ತಿ ಯೋಜನೆಯಿಂದ ಮಹಿಳೆಯರ ಸಬಲೀಕರಣವಾಗಿದೆ. ಈ ಯೋಜನೆಯಡಿ ಮಹಿಳೆಯರು ಪ್ರಯಾಣಿಸಿರುವ ಟಿಕೆಟ್ ಮೊತ್ತ 12,500 ಕೋಟಿ ರೂ.ಗಿಂತ ಹೆಚ್ಚಾಗಿದೆ. ನಿತ್ಯ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುವ 1 ಕೋಟಿ ಪ್ರಯಾಣಿಕರ ಪೈಕಿ 80 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಾರೆ ಎಂದರು.



ಸರಗೂರಿನಲ್ಲಿ ಸಂಭ್ರಮಾಚರಣೆ ನಡೆಸಲಾಯಿತು.

ಸರಗೂರು ಸಾರಿಗೆ ಘಟಕದ ವ್ಯವಸ್ಥಾಪಕ ಎಸ್.ಮಹದೇವಪ್ರಸಾದ್ ಮಾತನಾಡಿ, ಸರಗೂರು ಮತ್ತು ಕೋಟೆ ತಾಲೂಕಿನಲ್ಲಿ ನಿತ್ಯ 27 ಸಾವಿರ ಮಂದಿ ಶಕ್ತಿ ಯೋಜನೆ ಬಳಸಿಕೊಂಡಿದ್ದಾರೆ. ಇದರಂದ ದಿನಕ್ಕೆ 8 ಲಕ್ಷ ರೂ. ಸಂಗ್ರಹಗೊಂಡಿದೆ. ಗ್ರಾಮೀಣ ಭಾಗದಲ್ಲಿ ಶಕ್ತಿ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಈ ವೇಳೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಲುವರಾಜು, ಸರಗೂರು ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು, ಕಾಂಗ್ರೆಸ್ ಕಾರ್ಯಕರ್ತರಾದ ಮಂಜುನಾಥ್, ರಂಗನಾಥ್, ಡಿ.ಸಿ.ಮಹೇಶ್, ಬಿಲ್ಲಯ್ಯ, ಚಿನ್ನಣ್ಣ, ಸೋಮಣ್ಣ, ಯೂತ್ ಅಧ್ಯಕ್ಷ ನವೀನ್, ಮಹದೇವಮೂರ್ತಿ, ಎಸ್.ಎಸ್.ಬಸವರಾಜು, ದೇವದಾಸ್, ಸೋಮಶೇಖರ್, ಮಹಮದ್ ಸುಹೇಬ್, ಈರನಾಯಕ, ರವಿಕುಮಾರ್, ಎಂ.ಮಹದೇವ್, ನಾರಾಯಣ್ ಕುಮಾರ್, ಎಸ್. ಸೋಮಣ್ಣ, ಮಹೇಂದ್ರ, ಭಾಗ್ಯ, ಡಿ.ಎಂ.ಮಹದೇವಗೌಡ ಪ್ರಯಾಣಿಕರು ಇದ್ದರು.

ಪ್ರತಿಯೊಬ್ಬರೂ ಕಣ್ಣಿನ ಬಗ್ಗೆ ಹೆಚ್ಚಿನ ಜಾಗೃತಿ ವಹಿಸಿ

ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್

ಸಾಲಿಗ್ರಾಮ, ಜು.14– ಕಣ್ಣು ಪ್ರತಿಯೊಬ್ಬರಿಗೂ ಪ್ರಮುಖ ಅಂಗವಾಗಿದೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ತಿಳಿಸಿದರು.

ತಾಲೂಕಿನ ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ವೈದ್ಯಾಧಿಕಾರಿ ಮತ್ತು ಸಿಬ್ಬಂದಿ ವರ್ಗದ ಸಂಯುಕ್ತಾಶ್ರಯದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರ 51ನೇ ಜನ್ಮ ದಿನೋತ್ಸವದ ಅಂಗವಾಗಿ ಅವರ ಆಪ್ತ ಸ್ನೇಹಿತ ಕೆ.ಟಿ.ಮೋಹನ್ ಕುಮಾರ್ ನೇತೃತ್ವದಲ್ಲಿ ಆಯೋಜಿಸಿದ್ದ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಜನತೆ ತಮ್ಮ ಬದುಕಿನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಾಗ ಕಣ್ಣಿನ ಬಗ್ಗೆ ಹೆಚ್ಚಿನ ಜಾಗೃತಿ ವಹಿಸಬೇಕು. ಮಕ್ಕಳು ಆಟವಾಡುವ ವೇಳೆ ಅವರ ಮೇಲೆ ಪೋಷಕರು ಸದಾ ಎಚ್ಚರ ವಹಿಸಬೇಕು. ಇಲ್ಲದಿದ್ದರೇ ಅವಘಡಗಳು ಸಂಭವಿಸುವ ಸಾಧ್ಯತೆ ಇದೆ ಎಂದ ಅವರು, ಆರೋಗ್ಯದ ಬಗ್ಗೆ ಉದಾಸೀನ ತೋರದೆ ತಕ್ಷಣ ವೈದ್ಯರ ಸಲಹೆ ಪಡೆದು ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದರು.




ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಆರೋಗ್ಯಕ್ಕೆ ಸಂಬಂಧಿಸಿದಂತೆ ಉಚಿತ ಶಿಬಿರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಆಯೋಜಿಸುವ ಮೂಲಕ ಗ್ರಾಮಾಂತರ ಜನರಿಗೆ ಉತ್ತಮ ಆರೋಗ್ಯ ಸೇವೆ ಸಿಗುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ನನ್ನ ಜನ್ಮ ದಿನೋತ್ಸವದ ಅಂಗವಾಗಿ ನನ್ನ ಗೆಳೆಯ ಕೆ.ಟಿ.ಮೋಹನ್ ಕುಮಾರ್ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರವನ್ನು ನನ್ನ ಹುಟ್ಟೂರಿನಲ್ಲಿ ಆಯೋಜಿಸುವ ಮೂಲಕ ಉತ್ತಮ ಸಾಮಾಜಿಕ ಸೇವಾ ಕಾರ್ಯ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸಾಮಾಜಿಕ ಸೇವಾ ಕಾರ್ಯ ಮಾಡುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಲಿ. ಅವರಿಗೆ ಸದಾ ನನ್ನ ಸಹಕಾರವಿರುತ್ತದೆ ಎಂದರು.

ಇದೇ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರನ್ನು ಅಭಿನಂದಿಸಲಾಯಿತು. ಗ್ರಾಪಂ ಅಧ್ಯಕ್ಷ ಎಲ್.ವಿ.ಗೋಪಾಲ್, ಮಾಜಿ ಅಧ್ಯಕ್ಷೆ ಎಸ್.ಆರ್.ಮಂಜುಳಾ, ಪ್ರದೀಪ್, ಜಿಲ್ಲಾ ಪತ್ರ ಬರಹಗಾರ ಮಿರ್ಲೆ ರಾಜೀವ್, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಟಿ.ರಾಮೇಗೌಡ, ವೈದ್ಯಾಧಿಕಾರಿ ಡಾ.ಕಲ್ಲೇಶ್, ಶಂಕರ ಕಣ್ಣಿನ ಆಸ್ಪತ್ರೆಯ ಡಾ.ಶಿವಾನಿ, ಶ್ರೀಕಂಠಮೂರ್ತಿ, ಯುವ ಮುಖಂಡರಾದ ಎಸ್.ಆರ್.ರವಿಕುಮಾರ್, ರಾಜು, ಕೃಷ್ಣೇಗೌಡ, ಮಹೇಶ್, ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ತುಳಸಿ, ಸುನೀತಾ, ಕುಸುಮ, ರಾಮು, ಚಂದ್ರಕಾಂತಿ, ಕಮಲ, ಜಮುನ, ಶ್ರೀನಿವಾಸ, ಎಸ್.ಜೆ.ಆಶಾ, ಆಶಾ ಕಾರ್ಯಕರ್ತರು ಸೇರಿದಂತೆ ಹಲವರಿದ್ದರು.

ಟೈಲರ್ ಮಾದೇವ ನಿಧನ



ಹೆಚ್.ಡಿ.ಕೋಟೆ, ಜು.14– ಮೂಲತಃ ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ, ಟೈಲರ್ ಮಾದೇವ(56) ಸೋಮವಾರ ಚಾಮರಾಜನಗರದಲ್ಲಿ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಚಾಮರಾಜನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಪಾಪಣ್ಣ



ಮಲ್ಕುಂಡಿ, ಜು.14– ಗ್ರಾಮದ ನಿವಾಸಿ, ಗ್ರಾಪಂ ಸದಸ್ಯ ಪಾಪಣ್ಣ(40) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮೈಸೂರು ಪೊಲೀಸರ ಭರ್ಜರಿ ಬೇಟೆ

42 ಪ್ರಕರಣ ಭೇದಿಸಿ 63 ಲಕ್ಷ ಮೌಲ್ಯದ ವಸ್ತುಗಳು ವಶ; 19 ಆರೋಪಿಗಳ ಬಂಧನ



ಸೋಮವಾರ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಕಳ್ಳತನ ಮಾಡಿದ್ದ ಚಿನ್ನಾಭರಣಗಳನ್ನು ಪ್ರದರ್ಶಿಸಿ, ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್.

ಮೈಸೂರು, ಜು.14(ಬಿಎಲ್‌ಯು)– ಅಪರಾಧ ಕೃತ್ಯದ 42 ವಿವಿಧ ಪ್ರಕರಣಗಳನ್ನು ಭೇದಿಸಿ ಮೈಸೂರು ಪೊಲೀಸರು 63 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡು 19 ಆರೋಪಿಗಳನ್ನು ಬಂಧಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರಿನಲ್ಲಿ ಕೃತ್ಯ ಎಸಗಿ ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ನಮ್ಮ ಪೊಲೀಸ್ ಅಧಿಕಾರಿಗಳು ಬಂಧಿಸಿ ಕರೆ ತಂದಿದ್ದಾರೆ ಎಂದರು.

ಕಳೆದ ಎರಡು ತಿಂಗಳಲ್ಲಿ 8 ಸರಗಳ್ಳತನ, 2 ಮನೆಗಳ್ಳತನ, 1 ಮನೆ ಕೆಲಸದವರಿಂದ ಕಳ್ಳತನ, 28 ವಾಹನ ಕಳ್ಳತನ, 3 ಸಾಮಾನ್ಯ ಕಳ್ಳತನ ಸೇರಿದಂತೆ 42 ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಈ ಮೂಲಕ ಆರೋಪಿಗಳಿಂದ 63 ಲಕ್ಷ ರೂಪಾಯಿ ಮೌಲ್ಯದ 659 ಗ್ರಾಂ ಚಿನ್ನಾಭರಣ, 1 ಕೆ.ಜಿ.ಬೆಳ್ಳಿ ಪದಾರ್ಥ, 27 ದ್ವಿಚಕ್ರ ವಾಹನ, 1 ಕಾರು, 2.57 ಲಕ್ಷ ನಗದು, 1 ಲ್ಯಾಪ್‌ಟಾಪ್ ವಶಪಡಿಸಿಕೊಂಡು 19 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಸೀಮಾ ಲಾಟ್ಕರ್ ಹೇಳಿದರು.

ಪತ್ನಿ ಆಪರೇಷನ್‌ಗಾಗಿ ಕಳ್ಳತನಕ್ಕಿಳಿದ ಕಾರ್ಪೆಂಟರ್

ಪತ್ನಿ ಆಪರೇಷನ್‌ಗಾಗಿ ಹಣ ಹೊಂದಿಸಲು ಮೈಸೂರಿನ ಬೋಗಾದಿ ಬಡಾವಣೆಯ ಮನೆಯೊಂದರಲ್ಲಿ ವ್ಯಕ್ತಿಯೊಬ್ಬ ಕಳ್ಳತನ ಮಾಡಿರುವ ಪ್ರಕರಣ ವರದಿಯಾಗಿದೆ. ಆರೋಪಿ ಅದೇ ಮನೆಯಲ್ಲಿ ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತಿದ್ದ. ಮರದ ಕೆಲಸ ಮಾಡುವ ಸಂದರ್ಭದಲ್ಲಿ ಸ್ನಾನಗೃಹದ ಕಿಟಕಿಯ ಗಾಜನ್ನು ತೆರವು ಮಾಡಿದ್ದ ಆರೋಪಿ ಅನುಮಾನ ಬರಬಾರದೆಂದು ಗಾಜು ಅಳವಡಿಸದೆ ಹಾಗೆ ಇಟ್ಟಿದ್ದ. ಮನೆಯವರು ಸಿನಿಮಾ ನೋಡಲು ಹೋದಾಗ ಆತ ಮನೆ ಹೊರಗೆ ಮರ ಕೆಲಸ ಮಾಡುತ್ತಿದ್ದ. ಮನೆಯಲ್ಲಿ ಯಾರೂ ಇಲ್ಲದ ಆ ಸಮಯ ಉಪಯೋಗಿಸಿಕೊಂಡು ಸ್ನಾನಗೃಹದ ಗಾಜನ್ನು ತೆರವು ಮಾಡಿ ಕಳ್ಳ ಕಿಂಡಿಯ ಮೂಲಕ ಮನೆ ಪ್ರವೇಶಿಸಿದ್ದ.

ಆದರೆ ಮನೆಯವರು ಡಿಜಿಟಲ್ ಲಾಕರ್‌ನಲ್ಲಿ ನಗದು ಮತ್ತು ಚಿನ್ನಾಭರಣ ಇಟ್ಟಿದ್ದರು. ಈ ವೇಳೆ ಖತರ್ನಾಕ್ ಕಳ್ಳ ಡಿಜಿಟಲ್ ಲಾಕ್ ಓಪನ್ ಮಾಡುವ ಬಗೆ ಹೇಗೆ ಎಂದು ಗೂಗಲ್ ಕೇಳಿದ್ದಾನೆ. ಇಂಗ್ಲಿಷ್ ಭಾಷೆ ಬಲ್ಲವನಾಗಿದ್ದ ಆತ ಗೂಗಲ್ ಹಾಗೂ ಯೂಟ್ಯೂಬ್‌ನಿಂದ ಮಾಹಿತಿ ಪಡೆದು ಡಿಜಿಟಲ್ ಲಾಕ್ ಓಪನ್ ಮಾಡಿದ್ದಾನೆ. ತರುವಾಯ ಅಲ್ಲಿದ್ದ 287 ಗ್ರಾಂ ತೂಕದ 26,16,000 ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದ.

ಲಾಕರ್‌ನಲ್ಲಿ ಇನ್ನು ಬಹಳಷ್ಟು ಚಿನ್ನಾಭರಣ ಇದ್ದರೂ ತನ್ನ ಬಗ್ಗೆ ಸಂಶಯ ಬರಬಾರದೆಂದು ಅರ್ಧ ಚಿನ್ನಾಭರಣ ಅಲ್ಲೇ ಬಿಟ್ಟು ಅರ್ಧ ಕದ್ದೊಯ್ದು ಮಾರಾಟ ಮಾಡಿದ್ದ. ಈ ಬಗ್ಗೆ ಸರಸ್ವತಿಪುರಂ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ ತನ್ನ ಪತ್ನಿ ಗರ್ಭಕೋಶದ ಖಾಯಿಲೆಯಿಂದ ಬಳಲುತ್ತಿದ್ದು, ಆಪರೇಷನ್ ಮಾಡಿಸಲು ಅನಿವಾರ್ಯವಾಗಿ ಕಳ್ಳತನ ಮಾಡಬೇಕಾಯಿತು. ನನ್ನ ಆರ್ಥಿಕ ಸಂಕಷ್ಟಕ್ಕಾಗಿ ಇದೇ ಮೊದಲು ಈ ಕೃತ್ಯ ಎಸಗಿದ್ದೇನೆ ಎಂದು ಆರೋಪಿ ಪೊಲೀಸರಿಗೆ ತಿಳಿಸಿದ್ದಾನೆ.

ಮೈಸೂರಿನಲ್ಲಿ ಸರಗಳ್ಳತನ ಮಾಡಿ ತಮಿಳುನಾಡಿಗೆ ಪೇರಿ ಕಿತ್ತಿದ್ದ ದಂಪತಿ!

ಮೈಸೂರಿನಲ್ಲಿ ಸರಗಳ್ಳತನ ಮಾಡಿ ತಮಿಳುನಾಡಿನಲ್ಲಿ ತಲೆಮರೆಸಿಕೊಂಡಿದ್ದ ದಂಪತಿಯನ್ನು ಬಂಧಿಸಿರುವ ನಗರದ ಲಷ್ಕರ್ ಪೊಲೀಸರು 11.40 ಲಕ್ಷ ರೂಪಾಯಿ ಮೌಲ್ಯದ 175 ಗ್ರಾಂ ತೂಕದ 4 ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂಲತಃ ತಮಿಳುನಾಡಿನವರಾದ ದಂಪತಿ, ನಗರದಲ್ಲಿ ಸಂಚರಿಸುವ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ಪ್ರಯಾಣಿಕರು ಕಿಕ್ಕಿರಿದು ತುಂಬಿರುತ್ತಿದ್ದ ಬಸ್‌ಗಳನ್ನೇ ಇವರು ಆಯ್ಕೆ ಮಾಡಿಕೊಳ್ಳುತ್ತಿದ್ದರು.

ಚಿನ್ನದ ಸರ ಧರಿಸಿರುವ ಮಹಿಳೆಯ ಮುಂದೆ ಹೆಂಡತಿ ನಿಂತಿದ್ದರೆ, ಹಿಂದೆ ಗಂಡ ನಿಂತಿರುತ್ತಿದ್ದ. ಪತಿ–ಪತ್ನಿ ಇಬ್ಬರ ಮಧ್ಯೆ ನಿಂತಿರುವ ಮಹಿಳೆಗೆ ಸ್ವಲ್ಪವೂ ತಿಳಿಯದಂತೆ ಸರಗಳ್ಳತನ ಮಾಡಿ ಮುಂದಿನ ನಿಲ್ದಾಣದಲ್ಲಿ ಎಸ್ಕೇಪ್ ಆಗುತ್ತಿದ್ದರು. ಒಂದೇ ದಿನ ನಾಲ್ಕು ಸರಗಳ್ಳತನ ಮಾಡಿದ್ದರು. ತಾವು ಸಿಕ್ಕಿಬೀಳಬಾರದೆಂದು ದಾರಿಹೋಕರ ಫೋನ್ ಪಡೆದು, ಓಲಾ ಆಟೋ ಬುಕ್ ಮಾಡಿಕೊಂಡು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿಂದ ತಮಿಳುನಾಡಿಗೆ ಪೇರಿ ಕಿತ್ತಿದ್ದರು.

ಸರ ಕಳೆದುಕೊಂಡವರು ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ತನಿಖೆ ನಡೆಸಿದ ಪೊಲೀಸರು ಸಣ್ಣ ಸುಳಿವು ಅನುಸರಿಸಿ ತಮಿಳುನಾಡಿನಲ್ಲಿ ದಂಪತಿಯನ್ನು ಬಂಧಿಸಿದ್ದರು. ಇನ್ನು ವಿದ್ಯಾರಣ್ಯಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ 3 ಸರಗಳ್ಳತನ ಪ್ರಕರಣ ಪತ್ತೆ ಮಾಡಿದ್ದ ಪೊಲೀಸರು 85 ಗ್ರಾಂ ತೂಕದ 6.80 ಲಕ್ಷ ರೂಪಾಯಿ ಮೌಲ್ಯದ 3 ಸರವನ್ನು ವಶಪಡಿಸಿಕೊಂಡಿದ್ದಾರೆ. ಸರ ಖರೀದಿ ಮಾಡಿದ್ದ ಆರೋಪಿ ಪಶ್ಚಿಮಬಂಗಾಳಕ್ಕೆ ಹೋಗಿ ಅಲ್ಲಿ ಅದನ್ನು ಮಾರಾಟ ಮಾಡಿದ್ದನು. ಪಶ್ಚಿಮ ಬಂಗಾಳಕ್ಕೆ ಹೋಗಿದ್ದ ಮೈಸೂರು ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

8 ಮಕ್ಕಳ ದೊಡ್ಡ ಸಂಸಾರ ಸಾಕಲು ಕಳ್ಳತನ

ಮೈಸೂರಿನ ದೇವರಾಜ ಠಾಣೆಯ ಪೊಲೀಸರು ಆರೋಪಿಯೊಬ್ಬನನ್ನು ಬಂಧಿಸಿ 12.80 ಲಕ್ಷ ರೂಪಾಯಿ ಮೌಲ್ಯದ 24 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಹೋಂಡಾ ಆಕ್ಟಿವಾ ಸ್ಕೂಟರ್‌ಗಳನ್ನು ಈತ ಕಳವು ಮಾಡಿರುವುದು ವಿಶೇಷವಾಗಿದೆ. ಮಾಸ್ಟರ್ ಕೀ ಇಟ್ಟುಕೊಂಡಿದ್ದ ಈತ ಸುಲಭವಾಗಿ ಹೋಂಡಾ ಆಕ್ಟೀವಾ ಸ್ಕೂಟರ್‌ಗಳನ್ನು ಕಳ್ಳತನ ಮಾಡುತ್ತಿದ್ದ.

ಜನವರಿಯಿಂದ ಇಲ್ಲಿಯವರೆಗೆ 24 ಹೋಂಡಾ ಸ್ಕೂಟರ್‌ಗಳನ್ನು ಕಳುವು ಮಾಡಿದ್ದ. ಮೂಲತಃ ಚಾಮರಾಜನಗರ ಜಿಲ್ಲೆಯವನಾದ ಈತ ಅಲ್ಲೇ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡುತ್ತಿದ್ದನು. ಲೋನ್ ಪಾವತಿ ಮಾಡದೆ ಸೀಜ್ ಆಗಿರುವ ವಾಹನಗಳೆಂದು ಕಡಿಮೆ ಬೆಲೆಗೆ ಮಾರಾಟ ಮಾಡಿದ್ದ.

ಈತ ಮದುವೆ ಸೇರಿದಂತೆ ಇತರೆ ಸಮಾರಂಭಗಳಲ್ಲಿ ಅಡುಗೆ ಮಾಡುವ ವೃತ್ತಿ ಮಾಡುತ್ತಿದ್ದನು. ಆದರೆ 8 ಮಕ್ಕಳಿರುವ ದೊಡ್ಡ ಸಂಸಾರವನ್ನು ಸಾಕಲು ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದುದ್ದಾಗಿ ವಿಚಾರಣೆ ವೇಳೆ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ.

ಗಾಂಜಾ, ಡ್ರಗ್ಸ್ ಮಾರಾಟವಾಗದಂತೆ ಪೊಲೀಸರ ಹದ್ದಿನಕಣ್ಣು

ಗಾಂಜಾ, ಡ್ರಗ್ಸ್ ಸೇರಿದಂತೆ ಮಾದಕ ವಸ್ತುಗಳ ಮಾರಾಟ ತಡೆಯಲು ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

ಎನ್‌ಡಿಪಿಎಸ್ 11 ಪ್ರಕರಣಗಳಲ್ಲಿ 13 ಆರೋಪಿಗಳನ್ನು ಬಂಧಿಸಲಾಗಿದ್ದು, 18.50 ಲಕ್ಷ ರೂಪಾಯಿ ಮೌಲ್ಯದ 65 ಕೆ.ಜಿ.ತೂಕದ ಗಾಂಜಾ ಹಾಗೂ 23 ಗ್ರಾಂ ತೂಕದ ಎಂಡಿಎಂಎ ಮಾದಕ ಪದಾರ್ಥಗಳನ್ನು ನಮ್ಮ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದರು.

ಒಡಿಸ್ಸಾದಿಂದ ಗಾಂಜಾ ಹಾಗೂ ಬೆಂಗಳೂರಿನಿಂದ ಡ್ರಗ್ಸ್ ಮೈಸೂರಿಗೆ ಬರುತ್ತಿದೆ. ಮಾದಕ ವಸ್ತುಗಳು ಮಾರಾಟವಾಗದಂತೆ ಪೊಲೀಸ್ ಗಸ್ತು ಹೆಚ್ಚು ಮಾಡಲಾಗಿದ್ದು, ತಡೆಯಲಾಗುತ್ತಿದೆ ಎಂದು ಸೀಮಾ ಲಾಟ್ಕರ್ ಹೇಳಿದರು. ಕುವೆಂಪುನಗರದಲ್ಲಿ ಸರಗಳ್ಳತನ, ಉದಯಗಿರಿಯಲ್ಲಿ ಮನೆ ಕಳ್ಳತನ, ವಿ.ವಿ.ಪುರಂನಲ್ಲಿ ದ್ವಿಚಕ್ರ ವಾಹನ ಕಳ್ಳತನ, ನಜರ್‌ಬಾದ್‌ನಲ್ಲಿ ವಾಹನ ಕಳ್ಳತನ, ಮೇಟಗಳ್ಳಿ, ವಿಜಯನಗರ ಠಾಣೆ ವ್ಯಾಪ್ತಿ ತಲಾ ಒಂದು ಮನೆ ಕಳ್ಳತನ ಪ್ರಕರಣ ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಮೈಸೂರಲ್ಲಿ ನಟ ಅಶ್ವಥ್ ಜನ್ಮ ಶತಾಬ್ಧಿ ಕಾರ್ಯಕ್ರಮ

ಮೈಸೂರು, ಜು.14(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಜು.15ರಂದು ಸಂಜೆ 4.30ಕ್ಕೆ ನಟ ಕೆ.ಎಸ್.ಅಶ್ವಥ್ ಅವರ ಜನ್ಮ ಶತಾಬ್ಧಿ ಕಾರ್ಯಕ್ರಮ ಶಂಕರ್ ಅಶ್ವಥ್ ಅವರ ಸಾರಥ್ಯದಲ್ಲಿ ನಡೆಯಲಿದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ. ಬೈರಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ನಟ ಅಶ್ವಥ್ ಅವರಿಗೆ ಇಷ್ಟವಾದ 32 ಹಾಡುಗಳೊಡನೆ, ನಿರೂಪಣೆ ಶಂಕರ್ ಅಶ್ವಥ್ ನಡೆಸಿಕೊಡಲಿದ್ದಾರೆ. ಈ ಹಿಂದೆ ಕಲಾಮಂದಿರದಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದರೆ ಅಶ್ವಥ್ ಅವರ ಅಭಿಮಾನಿಗಳ ಬೇಡಿಕೆ ಮೇರೆಗೆ ಈಗ ಮತ್ತೊಮ್ಮೆ ಗಾನ ನಂದನ ಹಾಗೂ ಅಲೆಯನ್ಸ್ ಕ್ಲಬ್ ಮೈಸೂರು ನಾಲ್ವಡಿ ಸಂಸ್ಥೆ ಜು.18ರಂದು ಸಂಗೀತ ಸಂಜೆ ಕಾರ್ಯಕ್ರಮ ಏರ್ಪಡಿಸಿದೆ. ಕಾರ್ಯಕ್ರಮದಲ್ಲಿ ಗಾಯಕ ಎನ್.ಬೆಟ್ಟೇಗೌಡ ಅವರೊಂದಿಗೆ 12 ಮಂದಿ ಗಾಯಕಿಯರು 32 ಗೀತೆಗಳನ್ನು ಹಾಡಲಿದ್ದಾರೆ ಎಂದರು.

ಅಶ್ವಥ್ ಅವರು ಸುಮಾರು 171 ಚಿತ್ರಗಳಲ್ಲಿ ನಟಿಸಿದ್ದರೂ ಸಹಾ ಜನತೆ ಈಗಲೂ ಅವರನ್ನು ಚಾಮಯ್ಯ ಮೇಷ್ಟು ಎಂದೇ ನೆನಪಿಸಿಕೊಳ್ಳುತ್ತಾರೆ. ನಾಯಕ ನಟನಾಗಿ ಚಿತ್ರರಂಗ ಪ್ರವೇಶಿಸಿದರೂ ಅವರು ಪೋಷಕರ ನಟರಾಗಿ ಉಳಿದುಕೊಳ್ಳಲು ಕಾರಣವೇನು, ಅವರ ಜೀವನದಲ್ಲಿ ಏನೇನು ನಡೆಯಿತು ಎನ್ನುವುದು ಸೇರಿದಂತೆ ಸ್ವಾರಸ್ಯಕರ ಸಂಗತಿಗಳ ಮೆಲುಕು ಹಾಕುವ ಕಾರ್ಯಕ್ರಮ ಇದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಟ ಶಂಕರ್ ಅಶ್ವಥ್, ಸಮಾಜಸೇವಕ ಕೆ. ರಘುರಾಂ ವಾಜಪೇಯಿ, ರಂಗಕರ್ಮಿ ರಾಜಶೇಖರ ಕದಂಬ, ಗಾಯಕ ಬೆಟ್ಟೇಗೌಡ ಇದ್ದರು.

ಮೈಸೂರು–ಕೊಡಗು ಅಭಿವೃದ್ಧಿ ಸಂಬಂಧ ಅಮಿತ್ ಶಾರೊಂದಿಗೆ ಸಂಸದ ಯದುವೀರ್ ಸಮಾಲೋಚನೆ

ಮೈಸೂರು, ಜು.14(ಎಂಕೆ)– ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಭೇಟಿಯಾದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಇತರೆ ಪ್ರಮುಖ ವಿಷಯಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಮೈಸೂರು–ಕೊಡಗು ಕ್ಷೇತ್ರದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ ಬಿಡುಗಡೆ ಹಾಗೂ ಕೊಡಗಿನಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದಾಗಿ ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಎನ್‌ಡಿಆರ್‌ಎಫ್ ಮೂಲಕ ಪರಿಹಾರ ಒದಗಿಸುವಂತೆ ಮನವಿ ಮಾಡಿದ್ದಾರೆ.

ಬಳಿಕ ಪತ್ರಿಕಾ ಪ್ರಕಟಣೆ ನೀಡಿರುವ ಸಂಸದರು, ಕೇಂದ್ರದಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿದರೆ, ತಡೆಗೋಡೆಗಳು, ರಸ್ತೆಗಳನ್ನು ದುರಸ್ತಿ ಮಾಡಿಸಲು ಸಾಧ್ಯವಾಗಲಿದೆ. ತಂಬಾಕು ಮತ್ತು ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ಮಳೆಯಿಂದ ಆಗಿರುವ ನಷ್ಟಕ್ಕೆ ಪರಿಹಾರ ದೊರಕಿಸಿಕೊಡಬೇಕು ಎಂದು ಗೃಹ ಸಚಿವರಿಗೆ ಮನವರಿಕೆ ಮಾಡಲಾಗಿದೆ. ಹಾಗೆಯೇ ಅಕ್ರಮ ಬಾಂಗ್ಲಾ ವಲಸಿಗರ ಸಂಖ್ಯೆ ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಆತಂಕದ ಬಗ್ಗೆಯೂ ತಿಳಿಸಲಾಗಿದೆ. ಎಲ್ಲ ವಿಷಯಗಳನ್ನು ಕೂಲಂಕುಷವಾಗಿ ಆಲಿಸಿದ ಗೃಹ ಸಚಿವರು, ಕಾಲಮಿತಿಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಇತರೆ ಪ್ರಮುಖ ವಿಷಯಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ

ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬ

ಉದ್ಯೋಗ ಮೇಳ, ಆರೋಗ್ಯ ಶಿಬಿರ ಪ್ರಚಾರ ವಾಹನಕ್ಕೆ ಚಾಲನೆ



ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಜು.24 ರಂದು ಹಮ್ಮಿಕೊಂಡಿರುವ ಬೃಹತ್ ಉದ್ಯೋಗ ಮೇಳ, ಆರೋಗ್ಯ ಶಿಬಿರ, ಸಮಾಲೋಚನೆ ಮತ್ತು ಮಾರ್ಗದರ್ಶನ ಕಾರ್ಯಕ್ರಮಗಳ ಪ್ರಚಾರ ವಾಹನಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮೈಸೂರು, ಜು.14(ಎಂಕೆ)– ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ಚಂದ್ರಮೌಳೇಶ್ವರ ದೇವಸ್ಥಾನದ ಎದುರು ಚಾಮರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಜು.24 ರಂದು ಹಮ್ಮಿಕೊಂಡಿರುವ ಬೃಹತ್ ಉದ್ಯೋಗ ಮೇಳ, ಆರೋಗ್ಯ ಶಿಬಿರ, ಸಮಾಲೋಚನೆ ಮತ್ತು ಮಾರ್ಗದರ್ಶನ ಕಾರ್ಯಕ್ರಮಗಳ ಪ್ರಚಾರ ವಾಹನಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ನಗರದ ಜೆ.ಕೆ.ಗ್ರೌಂಡ್‌ನಲ್ಲಿ ಅಂದು ಬೆಳಗ್ಗೆ 9 ರಿಂದ ಬೃಹತ್ ಉದ್ಯೋಗ ಮೇಳ ನಡೆಯಲಿದ್ದು, 100 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ ಸೇರಿದಂತೆ ಯಾವುದೇ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ 18 ರಿಂದ 35 ವರ್ಷದೊಳಗಿನ ಯುವಕ–ಯುವತಿಯರು ತಮ್ಮ ಶೈಕ್ಷಣಿಕ ದಾಖಲೆಗಳೊಂದಿಗೆ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಹಾಗೆಯೇ ಬೃಹತ್ ಆರೋಗ್ಯ ಶಿಬಿರದಲ್ಲಿ ಹೃದಯ, ಮಧುಮೇಹ, ಮೂತ್ರಪಿಂಡ(ಕಿಡ್ನಿ), ಲಿವರ್, ಕಣ್ಣಿನ ಸಮಸ್ಯೆ ಕ್ಯಾನ್ಸರ್ ಸೇರಿದಂತೆ ಪ್ರಮುಖ ದೈಹಿಕ ಸಮಸ್ಯೆಗಳ ತಪಾಸಣೆ ಮಾಡಲಾಗುವುದು. ಜೊತೆಗೆ ಬೃಹತ್ ರಕ್ತದಾನ ಶಿಬಿರ ಹಾಗೂ ನೇತ್ರದಾನ, ಅಂಗಾಂಗ ದಾನದ ನೋಂದಣಿ ಅಭಿಯಾನವೂ ನಡೆಯಲಿದೆ.

ಈ ವೇಳೆ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾ ಮಂಡಳದ ಅಧ್ಯಕ್ಷ ಎಸ್.ಚಂದ್ರಶೇಖರ್, ಮಹಿಳಾ ಮುಖಂಡರಾದ ಪುಷ್ಪಲತಾ ಚಿಕ್ಕಣ್ಣ, ಸುಶೀಲ ಮರೀಗೌಡ, ಪುಷ್ಪವಲ್ಲಿ, ಮೋದಾಮಣಿ, ಮುಖಂಡ ಬಿ.ಕೆ.ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯರಾದ ಡಿ.ನಾಗಭೂಷಣ್, ಬಾಲರಾಜ್, ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಎಂ.ಜಿ.ಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ್ ರಾಯಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಕ್ಷೇತ್ರದ ಮುಖಂಡರಾದ ಭಾಸ್ಕರ್ ಗೌಡ, ರಾಜಣ್ಣ ಶ್ರೀನಿವಾಸ್, ರಾಮಚಂದ್ರು, ಯೋಗೇಶ್, ಮಹದೇಶ್, ಮಹೇಶ್ ಗೌಡ, ಗುರುರಾಜ್, ನಿತಿನ್ ಪುಟ್ಟಸ್ವಾಮಿ, ಅನಂತ ನಾರಾಯಣ, ರಾಘು ಮತ್ತಿತರರಿದ್ದರು.

ಜು.19ರ ಸಾಧನಾ ಸಮಾವೇಶಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಅಧಿಕ ಸಂಖ್ಯೆ ಕಾರ್ಯಕರ್ತರು ಹಾಜರಿರಬೇಕು

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿಜಯ್‌ಕುಮಾರ್ ಸೂಚನೆ

ಮೈಸೂರು, ಜು.14(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಜು.19 ರಂದು ನಡೆಯುವ ರಾಜ್ಯ ಸರ್ಕಾರದ ಸಾಧನಾ ಸಮಾವೇಶದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು ಭಾಗವಹಿಸಿ, ಸಮಾವೇಶವನ್ನು ಯಶಸ್ವಿಗೊಳಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಬಲಪಡಿಸುವಂತೆ ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಕರೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಸಾಧನಾ ಸಮಾವೇಶ ಸಿದ್ಧತೆ ಹಿನ್ನೆಲೆ ಆಯೋಜಿಸಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಸೂಚನೆ ನೀಡಿರುವಂತೆ ಸಮಾವೇಶ ಯಶಸ್ವಿಯಾಗಬೇಕು. 1 ಲಕ್ಷಕ್ಕೂ ಅಧಿಕ ಜನರನ್ನು ಸೇರಿಸಬೇಕು. ಮುಖ್ಯವಾಗಿ ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು, ಫಲಾನುಭವಿಗಳು ಭಾಗವಹಿಸಬೇಕು ಎಂದರು.

ಸಮಾವೇಶದಲ್ಲಿ ಮುಖ್ಯಮಂತ್ರಿಗಳು 1600 ಕೋಟಿ ರೂ.ಗಳ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಅಲ್ಲದೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ ಸಮಸ್ಯೆಗಳ ಕುರಿತು ಸಮಾವೇಶಕ್ಕೂ ಮುಂಚಿತವಾಗಿ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡಲಿದ್ದು, ಪ್ರತ್ಯೇಕ ಸಭೆ ನಡೆಸುವಂತೆ ಕೋರಲಾಗುವುದು. ಕ್ಷೇತ್ರದ ಎಲ್ಲಾ ಮುಖಂಡರು ವೈಯಕ್ತಿಕ ಭಿನ್ನಾಭಿಪ್ರಾಯ ಮರೆತು ಒಟ್ಟಾಗಿ ಕೈ ಜೋಡಿಸುವಂತೆ ತಿಳಿಸಿದರು.

ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಮೈಸೂರು ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನು ವ್ಯಾಪಕವಾಗಿ ತಿಳಿಸಬೇಕು. ಪ್ರಣಾಳಿಕೆಯಲ್ಲಿ ಹೇಳಿದಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಪೂರ್ಣ ಪ್ರಮಾಣದಲ್ಲಿ ಫಲಾನುಭವಿಗಳಿಗೆ ತಲುಪಿಸಲಾಗಿದೆ. ಅದರಲ್ಲೂ ಮಹಿಳೆಯರ ಸ್ವಾವಲಂಬನೆಗೆ ಸಿದ್ದರಾಮಯ್ಯ ಅವರ ಕೊಡುಗೆ ಸ್ಮರಣೀಯವಾಗಿದೆ ಎಂದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ 1983 ರಿಂದಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಇದೆ ಮುಂದೆಯೂ ಅವರೊಂದಿಗೆ ಚಾಮುಂಡೇಶ್ವರಿ ಕ್ಷೇತ್ರ ಇರಲಿದೆ ಎಂಬುದನ್ನು ಸಮಾವೇಶದ ಮೂಲಕ ಸಾಬೀತುಪಡಿಸಬೇಕಿದೆ. ಆದ್ದರಿಂದ ಸಮಾವೇಶಕ್ಕೆ ಅಗತ್ಯ ಬಸ್ ವ್ಯವಸ್ಥೆ ಕಲ್ಪಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕರೆತರಬೇಕು. ಮೈಸೂರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನಂತರ ಅತೀ ಕೊಡುಗೆ ನೀಡಿರುವ ಸಿದ್ದರಾಮಯ್ಯ ಅವರ ಆಡಳಿತಕ್ಕೆ ಮೈಸೂರಿನಲ್ಲಿರುವ ಆಸ್ಪತ್ರೆಗಳು, ವಿದ್ಯಾಸಂಸ್ಥೆಗಳು ಸಾಕ್ಷಿಯಾಗಿವೆ ಎಂದರು.

ಇದೇ ವೇಳೆ ಕಾರ್ಮಿಕ ಇಲಾಖೆಯ ಎರಡು ವರ್ಷದ ಸಾಧನೆ ಮಾಹಿತಿಯುಳ್ಳ ಕಿರು ಹೊತ್ತಿಗೆ ಬಿಡುಗಡೆ ಮಾಡಲಾಯಿತು. ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್, ಮಂಜುನಾಥ್, ಲೇಖಾ ವೆಂಕಟೇಶ್, ಮಾಜಿ ಸದಸ್ಯರಾದ, ಕಡಕೊಳ ನಾರಾಯಣ್, ರಾಕೇಶ್ ಪಾಪಣ್ಣ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಹಿಳಾ ಆಯೋಗ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಇಲವಾಲ ಬ್ಲಾಕ್ ಅಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಹೊಸಹುಂಡಿ ರಘು, ಮುಖಂಡರಾದ ನಾಗರತ್ನ, ಭಾಗ್ಯಲೋಕೇಶ್, ನಾಗರಾಜ್, ಬಸವರಾಜ್ ಮತ್ತಿತರರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಕಾರ್ಮಿಕ ಇಲಾಖೆಯ ಎರಡು ವರ್ಷದ ಸಾಧನೆ ಮಾಹಿತಿಯುಳ್ಳ ಕಿರು ಹೊತ್ತಿಗೆ ಬಿಡುಗಡೆ ಮಾಡಲಾಯಿತು.

ಭಾವಪೂರ್ಣ ಶ್ರದ್ಧಾಂಜಲಿ...

ಸಾಧನಾ ಸಮಾವೇಶದ ಸಿದ್ಧತಾ ಸಭೆಗೂ ಮುನ್ನ ಜು.13 ರಂದು ನಿಧನರಾದ 'ಮೈಸೂರು ಮಿತ್ರ', ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಹಾಗೂ ಹಿರಿಯ ನಟಿ ಬಿ.ಸರೋಜಾದೇವಿ ಅವರಿಗೆ ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು